Swabhimani Sahakari
Pages : 38 / 12₹

# ಸ್ವಾಭಿಮಾನಿ ಸಹಕಾರಿ

Volume - 17
Issue - 10
October - 2020

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

## ಶಕ್ತಿ ದೇವತೆಗಳ ವಿವಿಧ ರೂಪ



ಅಕ್ಟೋಬರ್ 2
ಮಹಾತ್ಮಾ ಗಾಂಧೀ
ಜಯಂತಿ ಹಾಗೂ
ಲಾಲ್ ಬಹದೂರ್
ಶಾಸ್ತ್ರೀ ಜಯಂತಿ





ಅಕ್ಟೋಬರ್ 30
ಈದ್ ಮಿಲಾದ್

ಅಕ್ಟೋಬರ್ 26

## ನಾಡ ಹಬ್ಬ ದಸರಾ ಸಂಭ್ರಮ



ಅಕ್ಟೋಬರ್ 31
ಮಹರ್ಷಿ ವಾಲ್ಮೀಕಿ
ಜಯಂತಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5067

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1345

# ಸಹಕಾರಿ ನಾಯಕತ್ವಕ್ಕೆ ಬೇಕು ಗುಣಾತ್ಮಕ ಅಭಿವೃದ್ಧಿಯ ಹೊಸ ಆಯಾಮ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಇದುವರೆಗೆ 5067 ಸೌಹಾರ್ದ ಸಹಕಾರಿಗಳು ನೊಂದಣೆಯಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ 1345 ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ಈ ಸೌಹಾರ್ದ ಸಹಕಾರಿ ಕ್ಷೇತ್ರ ನಿರ್ವಹಿಸುತ್ತಿದೆ. 62 ಲಕ್ಷ ಸದಸ್ಯರಿದ್ದಾರೆ. 917 ಕೋಟಿ ಶೇರು ಬಂಡವಾಳವಿದೆ. 21,578 ಕೋಟಿ ಠೇವಣಿ ಇದೆ. 17,322 ಕೋಟಿ ಸಾಲ ನೀಡಿದೆ. ಶೇಕಡಾ 85% ಸಹಕಾರಿ ಸಂಸ್ಥೆಗಳು ಲಾಭದಲ್ಲಿವೆ. ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಹೊಸ ತಲೆಮಾರಿನ ಹೊಸ ಸೌಹಾರ್ದ ಸಹಕಾರಿಗಳೆಂದು ಗುರುತಿಸಿ ಕೊಂಡಿವೆ.

**ಆತ್ಮೀಯ ಸಹಕಾರಿ ಬಂಧುಗಳೆ,**

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಗಾಂಧೀ ಜಯಂತಿ, ಆಯುಧ ಪೂಜೆ, ನಾಡಹಬ್ಬ ದಸರಾ, ವಾಲ್ಮೀಕಿ ಜಯಂತಿಯ ಹಾರ್ದಿಕ ಶುಭಾಶಯಗಳು.

ಕೋರೋನಾ ಮಹಾಮಾರಿಯ ಹೊಡೆತಕ್ಕೆ ಸಿಲುಕಿ ಇಡೀ ವಿಶ್ವವೇ ಇಂದು ಆರ್ಥಿಕ ದುಸ್ಥಿತಿಯಲ್ಲಿರುವುದು ತಮಗೆಲ್ಲ ತಿಳಿದ ವಿಷಯ. ಅದರಂತೆ ಸಹಕಾರಿ ಕ್ಷೇತ್ರವೂ ಕೂಡ ಅತ್ಯಂತ ಕಠಿಣ ಸಮಯವನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಹೊಸತನದ ಅಳವಡಿಕೆಯ ಬಗ್ಗೆ ಚಿಂತನೆ ಮಾಡುವುದು ಅಗತ್ಯ ಹಾಗೂ ಅನಿವಾರ್ಯ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಇದುವರೆಗೆ 5067 ಸೌಹಾರ್ದ ಸಹಕಾರಿಗಳು ನೊಂದಣೆಯಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ 1345 ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ಈ ಸೌಹಾರ್ದ ಸಹಕಾರಿ ಕ್ಷೇತ್ರ ನಿರ್ವಹಿಸುತ್ತಿದೆ. 62 ಲಕ್ಷ ಸದಸ್ಯರಿದ್ದಾರೆ. 917 ಕೋಟಿ ಶೇರು ಬಂಡವಾಳವಿದೆ. 21,578 ಕೋಟಿ ಠೇವಣಿ ಇದೆ. 17,322 ಕೋಟಿ ಸಾಲ ನೀಡಿದೆ. ಶೇಕಡಾ 85% ಸಹಕಾರಿ ಸಂಸ್ಥೆಗಳು ಲಾಭದಲ್ಲಿವೆ. ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಹೊಸ ತಲೆಮಾರಿನ ಹೊಸ ಸೌಹಾರ್ದ ಸಹಕಾರಿಗಳೆಂದು ಗುರುತಿಸಿ ಕೊಂಡಿವೆ. ವಿಶೇಷವಾಗಿ ಯುವಕರು ಈ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುತ್ತಿರುವುದು ಸ್ವಾಗತಾರ್ಹ. ರಾಷ್ಟ್ರದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿವೆ.

ಒಂದು ಸಂಸ್ಥೆಯ ಬೆಳವಣಿಗೆ ಒಬ್ಬ ಸಮರ್ಥ ನಾಯಕನನ್ನು ಅವಲಂಬಿಸಿರುತ್ತದೆ. ಒಳ್ಳೆಯ ನಾಯಕನು ತನ್ನ ಗುರಿಯನ್ನು ಸಾಧಿಸಲು ತನ್ನ ಸಂಗಡಿಗರಿಗೆ ಗುರಿಯನ್ನು ಗೊತ್ತುಪಡಿಸಿ ಮಾರ್ಗದರ್ಶನ ಮಾಡುವ ಹಾಗೂ ಕಾರ್ಯವನ್ನು ಸಾಧಿಸುವ ಛಲ ಹೊಂದಿರುತ್ತಾನೆ. ದೂರದೃಷ್ಟಿಯವನಾಗಿರುತ್ತಾನೆ. ಭಾವನಾತ್ಮಕವಾಗಿ ತನ್ನ ಸಂಗಡಿಗರೊಂದಿಗೆ ಬೆರೆತಿರುತ್ತಾನೆ. ಅವರ ಮನಸ್ಸಿನ ಆಳಕ್ಕೆ ಹೋಗಿ ವಿಚಾರಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಏನಾದರೊಂದು ಹೊಸತನವನ್ನು, ತಂತ್ರಗಾರಿಕೆಯನ್ನು ಅಳವಡಿಸಿ ಕಾರ್ಯಸಾಧಿಸಬೇಕೆಂದು ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಅನುಷ್ಠಾನಕ್ಕಾಗಿ ಎಲ್ಲರ ಸಹಕಾರವನ್ನು ಪಡೆಯುವ ಸಾಮರ್ಥ್ಯವನ್ನು ಹೊಂದಿದವನಾಗಿರುತ್ತಾನೆ.

ಈ ತರಹದ ಗುಣಾತ್ಮಕ ಅಭಿವೃದ್ಧಿಯ ಲೇಪವನ್ನು ಹೊಂದಿಸುವ ಸಮರ್ಥ್ಯ ಸಹಕಾರಿ ನಾಯಕತ್ವ ನಮ್ಮ ಸಹಕಾರಿ ಕ್ಷೇತ್ರಕ್ಕೆ ಬೇಕಾಗಿದೆ. ವಿಶೇಷವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮ ಯುವ ಸಹಕಾರಿ ನಾಯಕತ್ವವನ್ನು ಹೊಂದಿರುವುದು ಈ ಕ್ಷೇತ್ರದ ಸೌಭಾಗ್ಯ. ಸಹಕಾರಿಗಳು ಪ್ರಾರಂಭದಿಂದಲೇ ಸಹಕಾರಿ ತತ್ವಗಳನ್ನು ಅಧ್ಯಯನಮಾಡಿ, ಈ ಸೌಹಾರ್ದ ಸಹಕಾರಿ ಕ್ಷೇತ್ರದ ಆಶಯವನ್ನು ಅರ್ಥಮಾಡಿಕೊಂಡು ಕಾರ್ಯನಿರ್ವಹಿಸುತ್ತಿರುವುದರಿಂದ ಈ ಕ್ಷೇತ್ರ ಅಂದುಕೊಂಡಷ್ಟು ಹಿನ್ನಡೆ ಕಾಣದಿರುವುದು ಸಮಾಧಾನಕರ ವಿಷಯ.

ಯಾವುದೇ ಸಮಸ್ಯೆಗಳು ಉದ್ಭವವಾದಾಗ ಜತೆಯಲ್ಲಿ ಪರಿಹಾರವನ್ನು ತಂದಿರುತ್ತದೆ. ಆದರೆ ಅದನ್ನು ಹುಡುಕುವುದು ಅವಶ್ಯಕ. ಪರಿಹಾರವನ್ನು ಹುಡುಕಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವುದು ನಾಯಕತ್ವದ ಸಾಮರ್ಥ್ಯತೆಯನ್ನು ಅವಲಂಬಿಸಿರುತ್ತದೆ. ಅಂತಹ ನಾಯಕತ್ವಕ್ಕೆ ಈಗ ಹೊಸತನದ ಗುಣಾತ್ಮಕ ಅಭಿವೃದ್ಧಿಯ ಲೇಪವನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕಾರ್ಯಗತಗೊಳಿಸುವಿರಾಗಿ ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 5-14
ಸರ್ಕಾರದ ಸುತ್ತೋಲೆಗಳು ............... 15-17
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ........................................ 18-24
ನಿಮ್ಮ ಪ್ರಶ್ನೆ - ನಮ್ಮ ಉತ್ತರ ................. 25
ಲೇಖನ........................................ 26-33
ಸಹಕಾರ ಮೌಲ್ಯಗಳ ವಿಶ್ಲೇಷಣೆ......... 34-36
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-6) .................................. 37-38

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ : ಸಹಕಾರಿಗಳ ಗುಣಮಟ್ಟ ಹೆಚ್ಚಳಕ್ಕೆ ಆದ್ಯತೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಸಂಯುಕ್ತ ಸಹಕಾರಿಯು ಕಳೆದ ನವೆಂಬರ 2019 ರಿಂದ ಇಲ್ಲಿಯವರೆಗೆ ಸುಮಾರು 101 ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ನಡೆಸುತ್ತಿದೆ. ಇವು 30 ಕೋಟಿ ರೂಗಳಿಗಿಂತಲೂ ಹೆಚ್ಚಿನ ದುಡಿಯುವ ಬಂಡವಾಳವನ್ನು ಹೊಂದಿರುವ ಸಹಕಾರಿಗಳು. ಇವುಗಳ ಹಣಕಾಸಿನ ಆರೋಗ್ಯಕ್ಕೆ ಅಗತ್ಯವಾದ ವಿಷಯಗಳನ್ನು ಪರಿವೀಕ್ಷಣೆಯ ಮುಖಾಂತರ ಅವರುಗಳಿಗೆ ಮಾಹಿತಿ ನೀಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಆಶಯ ಹಾಗೂ ಸಹಕಾರಿಗಳಲ್ಲಿ ಹಣಕಾಸಿನ ಶಿಸ್ತು ಅಳವಡಿಸುವುದು ಸಂಯುಕ್ತ ಸಹಕಾರಿಯ ಪ್ರಮುಖ ಉದ್ದೇಶ. ಹಂತ ಹಂತವಾಗಿ ಎಲ್ಲಾ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ ನಡೆಸುವ ಕಾರ್ಯಯೋಜನೆ ರೂಪಿಸಲಾಗಿದೆ.

ಪರಿವೀಕ್ಷಣೆಯನ್ನು ಜರುಗಿಸಿದ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳಲ್ಲಿ ಆಡಳಿತ ವ್ಯವಸ್ಥೆ, ಆಡಳಿತ ಮಂಡಳಿ ಸಭೆಗಳು ಕ್ರಮಬದ್ಧವಾಗಿ ನಡೆಯುತ್ತಿರುವ ಹಾಗೂ ನಡೆಯದಿರುವ ಬಗ್ಗೆ, ದ್ರವ್ಯಾಸ್ತಿಗಳ ನಿರ್ವಹಣೆಯ ಬಗ್ಗೆ ಸಂಯುಕ್ತ ಸಹಕಾರಿಯ ಸುತ್ತೋಲೆ ನಿಯಮಗಳ ಬಗ್ಗೆ, ಹೂಡಿಕೆಗಳ ನಿಯಮಗಳ ಪಾಲನೆ ಮಾಡಿರುವ ಅಥವಾ ಮಾಡದಿರುವ ಬಗ್ಗೆ, ಸಾಲ, ಸಿಬ್ಬಂದಿ, ಠೇವಣಿ ನಿಯಮಾವಳಿಗಳ ರಚನೆ ಇರುವ ಅಥವಾ ಇರದಿರುವ ಬಗ್ಗೆ ಮತ್ತು ಸಾಲಗಳನ್ನು ನಿಯಮಾವಳಿಗನುಗುಣವಾಗಿ ನೀಡಿರುವ ಅಥವಾ ನೀಡದಿರುವ ವಿವರಗಳ ಬಗ್ಗೆ ವರದಿಗಳನ್ನು ನೀಡಿದ್ದು ಈ ಸೌಹಾರ್ದ ಸಹಕಾರಿಗಳು ಈ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಮುಂದುವರೆದು ಸಂಯುಕ್ತ ಸಹಕಾರಿಯು ಆಡಳಿತ ಮಂಡಳಿಯವರು ಸಹ ಠೇವಣಿದಾರರ ಹಿತದೃಷ್ಟಿಯಿಂದ ಸಕಾಲದಲ್ಲಿ ಸದಸ್ಯರ ಠೇವಣಿ ಹಿಂದುರುಗಿಸದ ಸಹಕಾರಿಗಳ ಮೇಲೆ ನಿರ್ದಾಕ್ಷಣೀಯ ಕ್ರಮ ಜರುಗಿಸಲು ಮುಂದಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ದೃಷ್ಟಿಯಿಂದ ಈ ಪರಿವೀಕ್ಷಣಾ ವರದಿಯ ವಿವರಗಳ ಬಗ್ಗೆ ಸೌಹಾರ್ದ ಸಹಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿ ತಮ್ಮ ತಮ್ಮ ಸೌಹಾರ್ದ ಸಹಕಾರಿಗಳಲ್ಲಿನ ಲೋಪದೊಷಗಳನ್ನು ತಕ್ಷಣದಿಂದ ಸರಿಪಡಿಸಿಕೊಳ್ಳಲು ಕ್ರಮವಿಡುವುದು ಅಗತ್ಯ. ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆ ಸೌಹಾರ್ದ ಸಹಕಾರಿಗಳು ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಬೇಕು ಸ್ವೇಚ್ಛಾಚಾರದಿಂದಲ್ಲ ಎಂಬುದನ್ನು ಸಂಯುಕ್ತ ಸಹಕಾರಿಯು ಸಹಕಾರಿಗಳಿಗೆ ಜ್ಞಾಪಿಸ ಬಯಸುತ್ತದೆ. ಇದೊಂದು ಗುಣಮಟ್ಟದೆಡೆಗೆ ನಡೆವ ಹೆಜ್ಜೆಯಾಗಿ ಸ್ವೀಕರಿಸಿ ಆಗಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡಿಕೊಂಡು ಇತರರಿಗೆ ಮಾದರಿಯಾಗಿ ಕಾರ್ಯನಿರ್ವಹಿಸುವುದು ಇಂದಿನ ಅಗತ್ಯತೆ.

## "ಮಾನವನು ಅಂತಿಮವಾಗಿ ಒಂಟಿಯೇ"

ಶ್ರೇಣಿ 54



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಸರ್ವೇಜನಾ ಸುಖಿನೋಭವಂತು, ವಸುದೈವ ಕುಟುಂಬ ಮತ್ತು ಮಾನವ ಸಂಘಜೀವಿಯೆಂದೆಲ್ಲಾವನೇ ಹೇಳಿದರೂ ಮಾನವನ ಹುಟ್ಟು, ಸಾವು, ಕರ್ಮಫಲ, ಕಷ್ಟಗಳ ಎದುರಿಸುವಿಕೆಗಳ ದೃಷ್ಟಿಯಿಂದ ಈತನನ್ನು ಒಂಟಿ ಎಂದೇ ಪರಿಗಣಿಸಬೇಕಾದ ಅನಿವಾರ್ಯತೆಯನ್ನು ಆಧ್ಯಾತ್ಮ ಕವಿ ಡಿವಿಜಿಯವರ ಪದ್ಯವು ವಿವರಿಸುತ್ತದೆ.

ಈ ಜಗತ್ತಿನ ಎಲ್ಲ ಜನಗಳ ಸಂಬಂಧಗಳನ್ನು ಪರಿಶೀಲಿಸಲಾಗಿ ಒಬ್ಬರಿಗೊಬ್ಬರಿಗೆ ಯಾವುದಾದರೂ ರೀತಿಯ ಸಂಬಂಧ ಇದ್ದೇ ಇರುತ್ತದೆ. ಮಾಡುವ ಊಟದ ವಿಚಾರವನ್ನೇ ತೆಗೆದುಕೊಳ್ಳಿ, ಬೆಳೆ ಬೆಳೆದವರು ಯಾರೋ, ಸುಗ್ಗಿ ಮಾಡಿದವರ್‍ಯಾರೋ, ಧಾನ್ಯ ಹಸನುಗೊಳಿಸಿದವರು ಯಾರೋ, ಅಡಿಗೆ ಒಲೆ ಹಚ್ಚಿದವರು ಯಾರೋ, ಕಾರ ಅರೆದವರು ಯಾರೋ, ಒಗ್ಗರಣೆ ಹಾಕಿದವರು ಯಾರೋ, ಹೀಗೆ ಒಬ್ಬೊಬ್ಬರ ಪರಿಶ್ರಮದಿಂದ ಕ್ರೂಡೀಕರಣದಿಂದ ಊಟ ತಯಾರಾಗಲಿದೆ.

ನಂಟು ತಂಟೆಗಳ ಗಂಟೀ ಬ್ರಹ್ಮಭಂಡಾರ
ಅಂಟಿಲ್ಲವೆನಗಿದರೊಳೆನ್ನದಿರದೆಂದುಂ
ಒಂಟಿ ನೀನೊಳಜಗಕ್ಕೆ ಭಂಟ ಹೊರಜಗಕಾಗಿ
ಒಂಟಿಸಿಕೊ ಜೀವನವ ॥ ಮಂಕುತಿಮ್ಮ ॥

ನನಗೆ ಇದರ, ಇಂಥಹವರ ಸಂಬಂಧವಿಲ್ಲವೆಂದು ನಿರಾಕರಿಸುವಂತೆಯೂ ಇಲ್ಲ, ಸರ್ವರೂ ಸಂಬಂಧಿಗಳೆಂಬ ಭಾವದಿಂದ ಬದುಕುವುದರ ಜೊತೆಗೆ ತಾನು ಎಸಗಿದ ಕಾರ್ಯದ ಗುಣಮಟ್ಟ ಉತ್ತಮವಾಗಿ ತನಗೆ ಸತ್ಫಲ ಬರಲೆಂಬ ಉದ್ದೇಶದಿಂದ, ತಾನು ಒಂಟಿ ತನ್ನ ಕಾರ್ಯದ ಉತ್ಕೃಷ್ಟಯೇ ತನ್ನ ಮೋಕ್ಷಕ್ಕೆ ದಾರಿಯೆಂದು ತಿಳಿ ಎಂಬುದೇ ಈ ಪದ್ಯದ ಸಾರಾಂಶ.

## ಸೌಹಾರ್ದ ಫೆಡರಲ್ 'ಯು' ಟ್ಯೂಬ್ ಚಾನೆಲ್ ಆರಂಭ

ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ನಿರಂತರ ಅಧ್ಯಯನಕ್ಕಾಗಿ ಸಂಯುಕ್ತ ಸಹಕಾರಿಯ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳ ನುರಿತ ಉಪನ್ಯಾಸಕರ ಉಪನ್ಯಾಸಗಳನ್ನು ನಿರಂತರ ಪ್ರಸಾರಮಾಡುವ, ಯಾವುದೇ ಸೌಹಾರ್ದ ಸಹಕಾರಿಗಳು ತಮಗೆ ಬೇಕೆನಿಸಿದಾಗ ಬೇಕಾದ ವಿಷಯಗಳ ಬಗ್ಗೆ ಉಪನ್ಯಾಸವನ್ನು ಕೇಳಲು ಅನುಕೂಲವಾಗುವಂತಹ ಸೌಹಾರ್ದ ಫೆಡರಲ್ **'ಯು' ಟ್ಯೂಬ್** ಚಾನೆಲ್‌ನ್ನು ಸಂಯುಕ್ತ ಸಹಕಾರಿಯು ಸೆಪ್ಟೆಂಬರ್ 2020ರಲ್ಲಿ ಪ್ರಾರಂಭಿಸಲಾಗಿದೆ.

ಈ ಚಾನೆಲ್‌ನಲ್ಲಿ Subscribe ಆಗುವುದರಿಂದ ಸಂಯುಕ್ತ ಸಹಕಾರಿಯು ಆಯೋಜಿಸುವ ಹೊಸ ಹೊಸ ಉಪನ್ಯಾಸಗಳ ಬಗ್ಗೆ ಸಬ್‌ಸ್ಕ್ರೈಬರ್‌ರಿಗೆ ಮಾಹಿತಿ ಬರುತ್ತಿರುತ್ತದೆ. ಈ ಚಾನೆಲ್‌ನ್ನು **"Souharda", Souharda Federal Cooperative, Federal Cooperative, Federal** ಹೀಗೆ ಹಲವು ವಿಧವಾಗಿ Search ಮಾಡುವುದರಿಂದ ಕೂಡ ತೆರೆಯಬಹುದಾಗಿದೆ.

ಸದರಿ ಲಿಕ್‌ನಲ್ಲಿ **https://www.youtube.com/channel/UCiZg79933WYB-aBAjcOJmvQ** ಹಲವಾರು ಉಪನ್ಯಾಸಗಳನ್ನು ಆಪ್‌ಲೋಡ್ ಮಾಡಲಾಗುವುದು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 14,631 ಆಗಿರುತ್ತದೆ. ಇವುಗಳ ಪೈಕಿ 6,862 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,769.

**ಸೆಪ್ಟೆಂಬರ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 407, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 618, ಮಧ್ಯಸ್ಥದಾರರಿಗೆ ವಹಿಸಿದ ಪ್ರಕರಣಗಳು 180.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,483 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 260 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,053 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 92 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 429 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸೆಪ್ಟೆಂಬರ್ ತಿಂಗಳಿನಲ್ಲಿ 01 ಪ್ರಕರಣ ದಾಖಲಾಗಿರುತ್ತವೆ.

## ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಕಾರ ಕ್ಷೇತ್ರದ ವಿವಿಧ ಯೋಜನೆಗಳ ಕುರಿತು ಆರ್ಥಿಕ ಸ್ಪಂದನ ಕಾರ್ಯಕ್ರಮ



**ಬೆಂಗಳೂರು** : ದಿನಾಂಕ 16.09.2020 ರಂದು ಬ್ಯಾಂಕ್ವೆಟ್ ಹಾಲ್ ವಿಧಾನಸೌಧದಲ್ಲಿ ನಡೆದ ಕೋವಿಡ್–19 ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಕಾರ ಕ್ಷೇತ್ರದ ವಿವಿಧ ಯೋಜನೆಗಳ ಆರ್ಥಿಕ ಸ್ಪಂದನ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಿ.ಎಸ್ ಯಡಿಯೂರಪ್ಪ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ ಸವದಿ, ಶ್ರೀ ಗೋವಿಂದ ಕಾರಜೋಳ, ಶ್ರೀ ಸಿ.ಎನ್. ಅಶ್ವಥ್ ನಾರಾಯಣ, ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ್, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ ಹಾಗೂ ರಾಜ್ಯದ ವಿವಿಧ ಸಹಕಾರ ಮಹಾಮಂಡಳದ ಅಧ್ಯಕ್ಷರು, ಸಹಕಾರಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಲೆಕ್ಕ ಪರಿಶೋಧನಾ ಇಲಾಖೆಯ ಸನ್ನದು ಲೆಕ್ಕಪರಿಶೋಧಕರ ಸಭೆ



**ಬೆಳಗಾವಿ** : ದಿನಾಂಕ 16.09.2020 ರಂದು ಲೆಕ್ಕ ಪರಿಶೋಧನಾ ಇಲಾಖೆಯ ಸನ್ನದು ಲೆಕ್ಕ ಪರಿಶೋಧಕರ ಸಭೆಯು ಸುವರ್ಣ ಸೌಧದಲ್ಲಿ ನಡೆಯಿತು. ಸದರಿ ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಶಶಿಕಲಾ, ಮಾನ್ಯ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ, ಇವರು ವಹಿಸಿದರು. ಕಾರ್ಯಕ್ರಮದಲ್ಲಿ ಜಂಟಿ ನಿರ್ದೇಶಕರಾದ ಶ್ರೀ ಸುರೇಶರಾವ ಹಾಗೂ ಪ್ರಾಂತಿಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಇವರು ಉಪಸ್ಥಿತರಿದ್ದರು.



## ಸಂಯುಕ್ತ ಸಹಕಾರಿಯ ದಾವಾ ಪಂಚಾಯ್ತಿ ನ್ಯಾಯಾಲಯದ ನೂತನ ಪೀಠಾಧಿಕಾರಿಯಾಗಿ ಶ್ರೀ ಎಸ್.ಜಿ ಮಂಜುನಾಥ್ ಸಿಂಗ್

**ಬೆಂಗಳೂರು** : ಸಂಯುಕ್ತ ಸಹಕಾರಿಯ ದಾವಾ ಪಂಚಾಯ್ತಿ ನ್ಯಾಯಾಲಯದ ನೂತನ ಪೀಠಾಧಿಕಾರಿಯಾಗಿ ಶ್ರೀ ಎಸ್.ಜಿ ಮಂಜುನಾಥ್ ಸಿಂಗ್ (ಅಧಿಕ ಪ್ರಭಾರ) ಇವರು ನೇಮಕವಾಗಿದ್ದಾರೆ.



## ಅಭಿನಂದನೆ

**ಬೆಂಗಳೂರು** : ಸಂಯುಕ್ತ ಸಹಕಾರಿಯ ದಾವಾ ಪಂಚಾಯ್ತಿ ನ್ಯಾಯಾಲಯದ ನೂತನ ಪೀಠಾಧಿಕಾರಿಯಾದ ಶ್ರೀ ಎಸ್.ಜಿ ಮಂಜುನಾಥ್ ಸಿಂಗ್ ಇವರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭೇಟಿ ನೀಡಿ ಅಭಿನಂದಿಸಿದರು.

# ಸಂಯುಕ್ತ ಸಹಕಾರಿಯ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳು

## ಮೈಸೂರು ವಿಭಾಗ

## ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳ ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು ಮತ್ತು ಕೊಡಗು :** ಮೈಸೂರು ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 04.09.2020 ಶುಕ್ರವಾರ ಮಧ್ಯಾಹ್ನ 03:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸ್ವಾಗತ ಭಾಷಣವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ಮತ್ತು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಗಳು ಹಾಗೂ ಸಹಕಾರಿಯ ಅಭಿವೃದ್ಧಿಯ ಕುರಿತು ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ಮಾಡಿದರು. ನಂತರ ಶ್ರೀ ಶ್ರೀಕಾಂತ್ ಬರುವೆ, ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ ಇವರು "ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳು" ಕುರಿತು ಉಪನ್ಯಾಸ ನೀಡಿದರು. ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ 38 ಸೌಹಾರ್ದ ಸಹಕಾರಿಗಳಿಂದ 46 ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾಸನ ಮತ್ತು ಚಿಕ್ಕಮಗಳೂರು :** ಚಿಕ್ಕಮಗಳೂರು ಮತ್ತು ಹಾಸನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ತರಬೇತಿ ಕಾರ್ಯಕ್ರಮವನ್ನು ದಿನಾಂಕ 05 ಸೆಪ್ಟಂಬರ್ 2020 ಶನಿವಾರದಂದು ಮಧ್ಯಾಹ್ನ 03.00 ಗಂಟೆಗೆ ಆನ್–ಲೈನ್ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಸ್ವಾಗತ ಭಾಷಣ ಶ್ರೀ ಶಿವಕುಮಾರ ಬಿರಾದಾರ್‌ರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ಮಾಡಿದರು, ಸಂಪನ್ಮೂಲ ವ್ಯಕ್ತಿಗಳಾಗಿ ಹಿರಿಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳು ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು, ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆ ನಡೆಸುವುದರ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿದರು, ಸದರಿ ಸಭೆಯಲ್ಲಿ 78 ಸೌಹಾರ್ದ ಸಹಕಾರಿಗಳಿಂದ 38 ಪ್ರತಿನಿಧಿಗಳು ಭಾಗವಹಿಸಿದ್ದರು.

**ಉಡುಪಿ :** ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ದಿನಾಂಕ 5.09.2020 ರ ಶನಿವಾರದಂದು ಸಭೆಯನ್ನು ಬೆಳಗ್ಗೆ 11.00 ಘಂಟೆಗೆ ಆಯೋಜಿಸಲಾಗಿತ್ತು, ಸದರಿ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾನ್ಯ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಮಾತನಾಡಿ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾ ಅಧಿಕಾರಿಗಳು ಕಾಯ್ದೆಯ ಅನುಗುಣವಾಗಿ ಕಾರ್ಯನಿರ್ವಹಿಸಬೇಕಾಗಿರುತ್ತದೆ ಹಾಗೂ ತಮ್ಮ ಆಡಳಿತ ಮಂಡಳಿಗೆ ಕಾಯ್ದೆಯ ಕುರಿತು ಅರಿವನ್ನು ಮೂಡಿಸುವ ಜವಾಬ್ದಾರಿಯುತ ಸ್ಥಾನದಲ್ಲಿದ್ದು ಅತ್ಯಂತ ಪ್ರಾಮಾಣಿಕವಾಗಿ ತಮ್ಮ ಕಾರ್ಯವನ್ನು ನಿರ್ವಹಿಸಬೇಕೆಂದು ತಿಳಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಬೆಳಗಾವಿ ಪ್ರಾಂತದ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಮುಖ್ಯ ಕಾರ್ಯನಿರ್ವಾಹಕರುಗಳು ಸೌಹಾರ್ದ ಕಾಯ್ದೆ ಹಾಗೂ ಪೂರಕವಾಗಿ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವ ಇತರೆ ಕಾಯ್ದೆಗಳ ಬಗ್ಗೆ ಬಹಳ ವಿಸ್ತಾರವಾಗಿ ತಿಳಿಸಿದರು. ಸದರಿ ಸಭೆಯಲ್ಲಿ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ್, ಉಡುಪಿ ಜಿಲ್ಲಾ ಸೌಹಾರ್ದ ಸಂಯೋಜಕರಾದ ವಿಜಯ್ ಬಿ, ಎಸ್ ಹಾಗೂ ಜಿಲ್ಲೆಯ 95 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 19.09.2020 ಶನಿವಾರ ಬೆಳಗ್ಗೆ 10:30 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ಸ್ವಾಗತವನ್ನು ಹಿರಿಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ಮತ್ತು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಗಳು ಹಾಗೂ ಸಹಕಾರಿಯ ಅಭಿವೃದ್ಧಿಯ ಕುರಿತು ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ಮಾಡಿದರು. ನಂತರ ಶ್ರೀ ಶ್ರೀಕಾಂತ್ ಬರುವೆ, ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ ಇವರು "ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳು" ಕುರಿತು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮದಲ್ಲಿ 71 ಸೌಹಾರ್ದ ಸಹಕಾರಿಗಳಿಂದ 80 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಾಮರಾಜನಗರ ಮತ್ತು ಮಂಡ್ಯ :** ದಿನಾಂಕ 03.09.2020 ರಂದು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ "ಶಾಸನಾತ್ಮಕ ಜವಾಬ್ದಾರಿಗಳು" ವಿಷಯದ ಬಗ್ಗೆ 'ವೀಡಿಯೋ ಕಾನ್ಫೆರೆನ್ಸ್' ಮೂಲಕ ತರಬೇತಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 25 ಸೌಹಾರ್ದ ಸಹಕಾರಿಗಳಿಂದ 30 ಪ್ರತಿನಿಧಿಗಳು, ಷೇರು ಮೊತ್ತವನ್ನು ಸಂಗ್ರಹಿಸುತ್ತಿರುವ ಉದ್ದೇಶಿತ ಸಹಕಾರಿಗಳಿಂದ 07 ಪ್ರತಿನಿಧಿಗಳು ಮತ್ತು ಇತರೇ ಆಸಕ್ತ 04 ಪ್ರತಿನಿಧಿಗಳು ಸೇರಿ ಒಟ್ಟು 45 ಜನರು ಭಾಗವಹಿಸಿದ್ದರು.

ಸದರಿ ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ಶಿವಕುಮಾರ ಬಿರಾದರ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ಮಾಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸೂರ್ಯಕಾಂತ ರ‍್ಯಾಕಲೆ, ಹಿರಿಯ ವ್ಯವಸ್ಥಾಪಕರು, ಕಲಬುರಗಿ ಪ್ರಾಂತೀಯ ಕಛೇರಿ, ಕಲಬುರಗಿ ಇವರು ಉಪನ್ಯಾಸ ನೀಡಿದರು. ನಂತರದಲ್ಲಿ ಪ್ರತಿನಿಧಿಗಳ ಕೇಳಿದ ಪ್ರಶ್ನೆಗಳಿಗೆ ಸಂಪನ್ಮೂಲ ವ್ಯಕ್ತಿಗಳು ವಿವರಣೆ ಸಹಿತ ಉತ್ತರವನ್ನು ನೀಡಿದರು. ಚಂದ್ರಶೇಖರಯ್ಯ .ಎಂ, ಜಿಲ್ಲಾ ಸಂಯೋಜಕರು ವಂದನಾರ್ಪಣೆ ಮಾಡಿದರು.

## ಕಲಬುರಗಿ ವಿಭಾಗ

# ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಸಭೆ

**ಕಲಬುರಗಿ :** ದಿನಾಂಕ 03.09.2020 ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ "ಸಹಕಾರಿಗಳ ಸ್ವಂತ ದುಡಿಯುವ ಬಂಡವಾಳಕ್ಕಿಂತ ಅಧಿಕ ನಷ್ಟವನ್ನು ಹೊಂದಿರುವ ಸಹಕಾರಿಗಳಿಗೆ ಸಭೆಯನ್ನು ಕರೆಯಲಾಗಿತ್ತು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಆರ್ ತಿಮ್ಮಯ್ಯಶೆಟ್ಟಿ, ಶ್ರೀ ವೈ.ಟಿ ಪಾಟೀಲ, ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಸಂಜೀವ ಮಹಾಜನ, ಶ್ರೀ ಜಿ. ಶ್ರೀಧರ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಮತ್ತು ಕಾನೂನೂ ವ್ಯವಸ್ಥಾಪಕರು, ಜಿಲ್ಲಾ ಸಂಯೋಜಕರು ತರಬೇತಿಯಲ್ಲಿ ಉಪಸ್ಥಿತರಿದ್ದರು. ತರಬೇತಿಯಲ್ಲಿ 19 ಸೌಹಾರ್ದ ಸಹಕಾರಿಯಿಂದ 17 ಪ್ರತಿನಿಧಿಗಳು ಭಾಗವಹಿಸಿದರು.

## ಬೆಂಗಳೂರು ವಿಭಾಗ

# ಲೆಕ್ಕಪತ್ರಗಳ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ

**ಶಿವಮೊಗ್ಗ :** ದಿನಾಂಕ 19.09.2020 ರಂದು ಬೆಂಗಳೂರು ಪ್ರಾಂತದ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಲೆಕ್ಕಪತ್ರಗಳ ನಿರ್ವಹಣೆ ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು, ಸದರಿ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಯುತ ಮಧುಕರ ಹೆಗಡೆ, ಸನ್ನದು ಲೆಕ್ಕಪರಿಶೋಧಕರು, ಶಿವಮೊಗ್ಗ ರವರು ಭಾಗವಹಿಸಿ ಉಪಯುಕ್ತ ಮಾಹಿತಿ ನೀಡಿದರು. ತರಬೇತಿಯ ಸ್ವಾಗತ ಮತ್ತು ವಂದನಾರ್ಪಣೆಯನ್ನು ಬೆಂಗಳೂರು ಪ್ರಾಂತದ ಹಿರಿಯ ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶಿವಮೊಗ್ಗ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್, ರವರು ನೆರವೇರಿಸಿದರು. 72 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

# ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆ ಜರುಗಿಸುವ ವಿಧಾನಗಳ ಕುರಿತು ತರಬೇತಿ ಕಾರ್ಯಕ್ರಮ

**ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ :** ದಿನಾಂಕ 24.09.2020 ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆ ಜರುಗಿಸುವ ವಿಧಾನಗಳು" ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು, ಸದರಿ ತರಬೇತಿ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ ರವರು ಭಾಗವಹಿಸಿ ಉಪಯುಕ್ತ ಮಾಹಿತಿ ನೀಡಿದರು. ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ಇವರು ನೆರವೇರಿಸಿದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಸ್ವಾಗತ ಕೋರಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ. ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ 91 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದರು.

## ಸೌಹಾರ್ದ ಸಹಕಾರಿಗಳ ಗಮನಕ್ಕೆ

### ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆಯ ವರದಿ ಹಾಗೂ ಸೌಹಾರ್ದ ಸಹಕಾರಿಗಳ ಇತರೆ ಸಮಾಚಾರಗಳನ್ನು ಡಿಜಿಟಲ್ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಹಾಗೂ ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ

ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯ ವರದಿ ಹಾಗೂ ಸೌಹಾರ್ದ ಸಹಕಾರಿಗಳ ಇತರೆ ಸಮಾಚಾರಗಳನ್ನು ಡಿಜಿಟಲ್ ಸ್ವಾಭಿಮಾನಿ ಸಹಕಾರಿ ಪತ್ರಿಕೆಯನ್ನು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ **whatsapp** ಮೂಲಕ ಕಳುಹಿಸಲಾಗುವುದು ಹಾಗೂ ಸಂಯುಕ್ತ ಸಹಕಾರಿಯ **www.Souharda.coop** ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸೌಹಾರ್ದ ಸಹಕಾರಿಗಳು ಸಹಕರಿಸಲು ಕೋರಿದೆ.

– ಸಂಪಾದಕರು

ಬೆಳಗಾವಿ ವಿಭಾಗ

# ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ಕುರಿತು ತರಬೇತಿ ಕಾರ್ಯಕ್ರಮ

**ಬಾಗಲಕೋಟ :** ದಿನಾಂಕ 11 ಸೆಪ್ಟೆಂಬರ್ 2020 ರಂದು ಬಾಗಲಕೋಟ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎಸ್ ಪಾಟೀಲ, ಮುಖ್ಯ ಅತಿಥಿಗಳು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಬಾಗಲಕೋಟ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 98 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

**ವಿಜಯಪುರ :** ದಿನಾಂಕ 14 ಸೆಪ್ಟೆಂಬರ್ 2020 ರಂದು ವಿಜಯಪುರ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ ಉಪ್ಪಿನ, ಮುಖ್ಯ ಅತಿಥಿಗಳು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ವಿಜಯಪುರ ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ ಎಸ್ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 78 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

**ಗದಗ ಮತ್ತು ಧಾರವಾಡ :** ದಿನಾಂಕ 16 ಸೆಪ್ಟೆಂಬರ್ 2020 ರಂದು ಗದಗ ಮತ್ತು ಧಾರವಾಡ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರುಗಳಾದ ಶ್ರೀ ಆರ್.ಎಸ್ ದೇಶಪಾಂಡೆ ಹಾಗೂ ಶ್ರೀ ಚಂದ್ರಕಾಂತ ಪಡಚಣ್ಣವರ, ಮುಖ್ಯ ಅತಿಥಿಗಳು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ವಿಜಯಪುರ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 56 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

**ಉತ್ತರಕನ್ನಡ :** ದಿನಾಂಕ 18 ಸೆಪ್ಟೆಂಬರ್ 2020 ರಂದು ಉತ್ತರಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎಸ್ ರವಿ, ಮುಖ್ಯ ಅತಿಥಿಗಳು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ವಿಜಯಪುರ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 80 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

**ಹಾವೇರಿ :** ದಿನಾಂಕ 21 ಸೆಪ್ಟೆಂಬರ್ 2020 ರಂದು ಹಾವೇರಿ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಎಮ್.ಬಿ. ಕಲಾಲ, ಮುಖ್ಯ ಅತಿಥಿಗಳು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಹಾವೇರಿ ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಮುಡೆಕ್ಕನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 85 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

**ಬೆಳಗಾವಿ :** ದಿನಾಂಕ 22 ಸೆಪ್ಟೆಂಬರ್ 2020 ರಂದು **ಬೆಳಗಾವಿ ಜಿಲ್ಲೆಯ ಗೋಕಾಕ ಹಾಗೂ ಮೂಡಲಗಿ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಡಿ ಬೆಳವಿ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 84 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

ದಿನಾಂಕ 23 ಸೆಪ್ಟೆಂಬರ್ 2020 ರಂದು **ಬೆಳಗಾವಿ ಜಿಲ್ಲೆಯ ಅಥಣಿ ಮತ್ತು ಚಿಕ್ಕೋಡಿ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ

ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 51 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

ದಿನಾಂಕ 24 ಸೆಪ್ಟೆಂಬರ್ 2020 ರಂದು **ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಕಾಗವಾಡ ಮತ್ತು ರಾಯಭಾಗ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ “ಗೋ ಟು ಮೀಟಿಂಗ್ ಆ್ಯಪ್” ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 63 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

ದಿನಾಂಕ 25 ಸೆಪ್ಟೆಂಬರ್ 2020 ರಂದು **ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ “ಗೋ ಟು ಮೀಟಿಂಗ್ ಆ್ಯಪ್” ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರಿ ಶರಣಗೌಡ ಜಿ ಪಾಟೀಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ವೃಷಭನಾಥ ಪರಪ್ಪನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 109 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದರು.

ದಿನಾಂಕ 29 ಸೆಪ್ಟೆಂಬರ್ 2020 ರಂದು **ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಖಾನಾಪೂರ, ಸವದತ್ತಿ, ರಾಮದುರ್ಗ್ ಮತ್ತು ಕಿತ್ತೂರು ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ “ಗೋ ಟು ಮೀಟಿಂಗ್ ಆ್ಯಪ್” ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರು/ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 76 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ.

ದಿನಾಂಕ 30 ಸೆಪ್ಟೆಂಬರ್ 2020 ರಂದು **ಬೆಳಗಾವಿ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್ ಲೈನ್ ಮುಖಾಂತರ “ಗೋ ಟು ಮೀಟಿಂಗ್ ಆ್ಯಪ್” ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಕಿರಿಯ ವ್ಯವಸ್ಥಾಪಕರಾದ ಶ್ರೀ ಸಂತೋಷ ಬಸಣ್ಣವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 40 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ.

**ಈ ಮೇಲಿನ ಎಲ್ಲಾ ತರಬೇತಿ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಇವರು ಆಡಳಿತ ಮಂಡಲಿ ಸಭೆ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಉಪನ್ಯಾಸ ನೀಡಿದರು.**

## ಕಲ್ಯಾಣ ಕರ್ನಾಟಕ ದಿನಾಚರಣೆ

**ಕಲಬುರಗಿ :** ದಿನಾಂಕ 17.09.2020 ರಂದು ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ದ್ವಜಾರೋಹಣವನ್ನು ಕಾನೂನು ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಅಭಿನಂದನೆ

**ಬೆಂಗಳೂರು :** ಸಂಯುಕ್ತ ಸಹಕಾರಿಯ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಪೀಠಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಬೆಂಗಳೂರಿನ ಉಪನಿಬಂಧಕರ ಕಛೇರಿ ವಲಯ 2ಕ್ಕೆ ವರ್ಗಾವಣೆಗೊಂಡ ಶ್ರೀಮತಿ ಹೆಚ್. ವಿ ಸಂಧ್ಯಾ ಇವರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭೇಟಿ ನೀಡಿ ಅಭಿನಂದಿಸಿದರು.



## ಸಹಕಾರಿ ಪ್ರಕೋಷ್ಟದ ಸಹ ಸಂಚಾಲಕರಾಗಿ
## ಶ್ರೀ ಜಿ. ನಂಜನಗೌಡ ಆಯ್ಕೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ನಂಜನಗೌಡ ಇವರು ಭಾರತೀಯ ಜನತಾ ಪಕ್ಷದ ಸಹಕಾರಿ ಪ್ರಕೋಷ್ಟ ಸಹ ಸಂಚಾಲಕರಾಗಿ ನೇಮಕವಾಗಿದ್ದಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.**

# "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ"
## 3ನೇ ತಂಡದ ಪ್ರವೇಶ ಅರ್ಜಿಗಳ ಆಹ್ವಾನ
## ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ 6 ತಿಂಗಳ ದೂರ ಶಿಕ್ಷಣ ಕೋರ್ಸ್"
## 1ನೇ ಜನವರಿ 2021 ರಿಂದ ಪ್ರಾರಂಭ

## Applications called for 3rd Batch of "Diploma in Cooperation and Banking Management"(DCBM) 6 Months Distance Education Course starts from 1st January 2021

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 6 ತಿಂಗಳ ದೂರ ಶಿಕ್ಷಣ "ಡಿಪ್ಲೋಮಾ ಇನ್ ಕೋ-ಆಪರೇಶನ್ & ಬ್ಯಾಂಕಿಂಗ್ ಮೆನೇಜಮೆಂಟ"ನ 3ನೇ ತಂಡದ ಕೋರ್ಸ್‌ನ್ನು ಇದೇ ಜನವರಿ 2021 ರಿಂದ ಪ್ರಾರಂಭಿಸಲಾಗುತ್ತದೆ.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು, ಕೇಸ್‌ಸ್ಟಡಿಗೆ 40 ಅಂಕಗಳು ಹಾಗೂ ಕಂಟ್ಯಾಕ್ಟ ಕ್ಲಾಸ್‌ಗಳಿಗೆ 60 ಅಂಕಗಳು (ಒಟ್ಟು 100 ಅಂಕಗಳು) ಒಟ್ಟು 700 ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 2 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳ ಕೊನೆಯಲ್ಲಿ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು. ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1997 ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ವಿದ್ಯಾರ್ಥಿಗಳು, ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.**

**ಕೋರ್ಸ್ ಫೀ :** ರೂ. 5000/- (ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/- ಕೋರ್ಸ ಮೆಟಿರಿಯಲ್ ರೂ 2000/- ಪರೀಕ್ಷಾ ಫೀ 1000/-) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ.

2 ದಿನಗಳ 3 ಕಂಟ್ಯಾಕ್ಟ ತರಗತಿಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/- ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಕಂಟ್ಯಾಕ್ಟ ತರಗತಿ ಸಮಯದಲ್ಲಿ ಅಭ್ಯರ್ಥಿಗಳ ಊಟ, ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. 3 ಕಂಟ್ಯಾಕ್ಟ ತರಗತಿಗಳ ವೆಚ್ಚ ರೂ 1500/- ಪ್ರತ್ಯೇಕ. **ಕೋರ್ಸ್‌ನ ಒಟ್ಟು ಫೀ ರೂ. 7670/- (6500 + 18% ಜಿಎಸ್‌ಟಿ)**

**ಡಿಸೆಂಬರ 31 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಪರ್ಕ ವ್ಯಕ್ತಿಗಳ ಹೆಸರುಗಳ ನಂಬರ್‌ಗಳನ್ನು www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ : 080-23378375-80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080-23525546, ಮೈಸೂರು ಪ್ರಾಂತೀಯ ಕಛೇರಿ: 0821-2332299, ಬೆಳಗಾವಿ ಪ್ರಾಂತೀಯ ಕಛೇರಿ: 0831-2401551, ಕಲಬುರಗಿ ಪ್ರಾಂತೀಯ ಕಛೇರಿ: 08472-270222.

ಸಹಿ/-

(ಶರಣಗೌಡ ಜಿ. ಪಾಟೀಲ)

**ವ್ಯವಸ್ಥಾಪಕ ನಿರ್ದೇಶಕರು**

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

ಸಂಖ್ಯೆ : ಸಂಸ/67ನೇ ಅ.ಭಾ.ಸ.ಸ./2020–21 ದಿನಾಂಕ : 08.10.2020

ಮಾನ್ಯರೇ,

**ವಿಷಯ : 67ನೇ ಅಖಿಲ ಭಾರತ ಸಹಕಾರ ಸಪ್ತಹದ ಆಚರಣೆಯ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷ ರಾಷ್ಟ್ರಾದ್ಯಂತ ನವೆಂಬರ್ 14ರಿಂದ 20ರ ವರೆಗೆ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ನಡೆಯುತ್ತದೆ. ಅದರಂತೆ ಕರ್ನಾಟಕ ರಾಜ್ಯದಾದ್ಯಂತ ಒಂದು ವಾರಗಳ ಕಾಲ ಸಹಕಾರ ಸಪ್ತಾಹದ ಒಂದೊಂದು ದಿನಕ್ಕೂ ಒಂದೊಂದು ವಿಷಯಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಗುತ್ತಿದೆ.

ಪ್ರಸ್ತುತ ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿ ಇವರು ದಿನಾಂಕ 14 ರಿಂದ 20ನೇ ನವೆಂಬರ್ 2020ರ ವರೆಗೆ 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯನ್ನು ಆಚರಿಸಲು ಸೂಚಿಸಲಾಗಿದ್ದು, ಪ್ರತಿ ದಿನದ ವಿಷಯವು ಕೆಳಕಂಡಂತಿದೆ.

67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ :

"ಕೊರೋನ ಸೋಂಕು– ಆತ್ಮನಿರ್ಭರ ಭಾರತ– ಸಹಕಾರ ಸಂಸ್ಥೆಗಳು

COVID Pandemic – Atmanirbhar Bharat – Coopeartives"

| ದಿನಾಂಕ | ವಿಷಯ |
|---|---|
| 14.11.2020 | ಕೊರೋನೋತ್ತರ, ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ<br>Post Covid-19, Role & Responsibility of Cooperatives |
| 15.11.2020 | ಸಹಕಾರಿ ಮಾರಾಟ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ<br>Cooperative Marketing, Consumers, Processing and Value addition |
| 16.11.2020 | ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರಿ ಶಿಕ್ಷಣ, ತರಬೇತಿ ಪುನರ್‌ಮನನ<br>Re-orienting Training & Education through OnlineCommunication |
| 17.11.2020 | ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು<br>Strengthening cooperation among Cooperatives |
| 18.11.2020 | ವ್ಯವಹಾರ, ಉದ್ಯೋಗ ಕಳೆದುಕೊಂಡವರು, ಬಾಧಿತರು ಪುನರುದ್ಯೋಗಸ್ಥರಾಗಲು ಕೌಶಲ್ಯಾಭಿವೃದ್ಧಿ<br>Skill development to re amploy the job/business looser/victims |
| 19.11.2020 | ಯುವಜನ ಮಹಿಳಾ ಮತ್ತು ಅಬಲ ವರ್ಗದವರಿಗಾಗಿ ಸಹಕಾರ ಸಂಸ್ಥೆಗಳು<br>Cooperatives for youth, women and weaker secions |
| 20.11.2020 | ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಿಟಲೈಜೇಷನ್ ಮತ್ತು ಸಾಮಾಜಿಕ ಜಾಲತಾಣ<br>Financial inclusion, Digitalization and social media through Cooperatives |

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ಹಾಗೂ ವ್ಯವಸ್ಥಿತವಾಗಿ ಸಪ್ತಾಯವನ್ನು ಅರ್ಥಪೂರ್ಣವಾಗಿ ಆಚರಿಸಲು ವಿನಂತಿಯೊಂದಿಗೆ ಕಳುಹಿಸಲಾಗಿದೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080–23378375–80, Email:souharda@souharda.coop

ಸಂಖ್ಯೆ : ಸಂಸ/ಶಿವಿ/ಆ.ತ (JSS)/1/2020–21 ದಿನಾಂಕ: 08.10.2020

ಇವರಿಗೆ,

ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು

ರಾಜ್ಯದ ಸೌಹಾರ್ದ ಸಹಕಾರಿಗಳು

ಮಾನ್ಯರೇ,

**ವಿಷಯ : ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಿರುವ ಚಿನ್ನ ಮೌಲ್ಯಮಾಪನ (Gold Appraisal) ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಕುರಿತು.**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಶಾಸನಬದ್ಧವಾಗಿ ರಚನೆಗೊಂಡು, ಅರೆನ್ಯಾಯಿಕ ಅಧಿಕಾರ(Quasi Judicial)ವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಕೋವಿಡ್ ಮಹಾಮಾರಿಯ ಕಾರಣದಿಂದಾಗಿ ಹಾಗೂ ಆರೋಗ್ಯದ ಹಿತದೃಷ್ಟಿಯಿಂದ ಸಂಯುಕ್ತ ಸಹಕಾರಿಯಿಂದ ಸೌಹಾರ್ದ ಸಹಕಾರಿಗಳಿಗಾಗಿ ಆನ್‌ಲೈನ್ ತರಬೇತಿಯನ್ನು ಜಾರಿಗೆ ತರಲಾಗಿದೆ. ಸಂಯುಕ್ತ ಸಹಕಾರಿಯು ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳು ಕ್ರಿಯಾಶೀಲವಾಗಿ ಭಾಗವಹಿಸಿದ್ದು ಹೊಸ ಸಾಧ್ಯತೆಯನ್ನು ತಕ್ಷಣದಲ್ಲಿ ಅಳವಡಿಸಿಕೊಂಡಿದೆ.

ಪ್ರಸ್ತುತ ಸಂಯುಕ್ತ ಸಹಕಾರಿಯು ಜೆಎಸ್‌ಎಸ್ ಜಿವಲರಿ ಟೆಕ್ನೊಲಾಜಿ ಸೆಂಟರ್, ಬೆಂಗಳೂರು ಸಂಸ್ಥೆಯವರೊಂದಿಗೆ ಚರ್ಚಿಸಿ ಸೌಹಾರ್ದ ಸಹಕಾರಿಗಳಿಗಾಗಿ ಚಿನ್ನ ಮೌಲ್ಯಮಾಪನದ ಕುರಿತಾದ ತರಬೇತಿ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಆಯೋಜಿಸಲು ಉದ್ದೇಶಿಸಲಾಗಿದೆ.

ಜೆಎಸ್‌ಎಸ್ ಜಿವಲರಿ ಟೆಕ್ನೊಲಾಜಿ ಸೆಂಟರ್, ಬೆಂಗಳೂರು 2004ರಲ್ಲಿ ಸ್ಥಾಪಿತವಾಗಿ ಇಡೀ ದಕ್ಷಿಣ ಭಾರತದಲ್ಲಿ ಆಭರಣ ವಿನ್ಯಾಸ ಮತ್ತು ತಯಾರಿಕೆಯಲ್ಲಿ ತರಬೇತಿ ನೀಡುವ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಆಭರಣಗಳ ವಿನ್ಯಾಸ ಉತ್ಪಾಧನಾ ಕ್ಷೇತ್ರದಲ್ಲಿ ಇತ್ತೀಚಿನ ತಂತ್ರಜ್ಞಾನವನ್ನು ಒದಗಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಚಿನ್ನದ ಶುದ್ದತೆಯ ನಿರ್ಣಯಿಸುವ ಕುರಿತು, ಆಭರಣಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ, ಈ ಸಂಸ್ಥೆಯವರು ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಾಗೂ ಕೋರ್ಸಗಳನ್ನು ಆಯೋಜಿಸುತ್ತಾರೆ.

ಸಂಯುಕ್ತ ಸಹಕಾರಿಯು ಜೆಎಸ್‌ಎಸ್ ಅಡ್ವಾಂಸಡ್ ಜಿವಲರಿ ಟೆಕ್ನೊಲಾಜಿ ಸೆಂಟರ್ ಸಂಸ್ಥೆಯೊಂದಿಗೆ ಚರ್ಚಿಸಿ ನಿರ್ಣಯಿಸಿರುವಂತೆ ತರಬೇತಿ ವಿವರ ಈ ಕೆಳಗಿನಂತಿದೆ.

## ಆನ್‌ಲೈನ್ ತರಬೇತಿ ಕಾರ್ಯಕ್ರಮದ ವಿವರ :

| | |
|---|---|
| ಆನ್‌ಲೈನ್ ಕೋರ್ಸ್‌ನ ವಿವರ | ಚಿನ್ನದ ಮೌಲ್ಯಮಾಪನ |
| ಆನ್‌ಲೈನ್ ಕೋರ್ಸ್‌ನ ಅವಧಿ | ಪ್ರತಿ ದಿನ 11.30 ರಿಂದ 01.30 ರವರೆಗೆ, 2 ದಿನ |
| ದಿನಾಂಕ | 100 ಜನ ನೋಂದಣಿಯಾದ ನಂತರದಲ್ಲಿ ದಿನಾಂಕವನ್ನು ನಿರ್ಧರಿಸಿ ನೋಂದಾಯಿತ ಪ್ರತಿನಿಧಿಗಳಿಗೆ ತಿಳಿಸಲಾಗುವುದು |
| ಭಾಗವಹಿಸಬೇಕಾದ ಪ್ರತಿನಿಧಿಗಳು | ಆಭರಣ ಸಾಲದ ಬಗ್ಗೆ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳು |
| ಕೋರ್ಸ್ ಶುಲ್ಕ | ಶುಲ್ಕ ರೂ. 100/– +18% ಜಿಎಸ್‌ಟಿ, ಎರಡು ದಿನಕ್ಕೆ |
| ಶುಲ್ಕ ಪಾವತಿಸುವ ವಿಧಾನ | NEFT/RTGS, Google Pay ಮೂಲಕ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರಿಗೆ ಪಾವತಿಸುವುದು.<br>**Bank Name : IDBI BANK LTD**<br>**A/C No : 0243102000013873**<br>**Branch Name : MALLESHWARAM BRANCH.**<br>**IFSC Code : IBKL0000243**<br>**Name : Karnataka State Souharda Federal Cooperative Ltd., Bangalore** |
| ಕೋರ್ಸ್‌ನ ನೋಂದಣಿ ಪ್ರಕ್ರಿಯೆ | ತರಬೇತಿ ಶುಲ್ಕ ಪಾವತಿಸಿ, ಪಾವತಿ ವಿವರದೊಂದಿಗೆ ಈ ಪತ್ರದೊಂದಿಗೆ ಕಳುಹಿಸಲಾಗಿರುವ ನೋಂದಣಿ ಅರ್ಜಿಯನ್ನು ಭರ್ತಿಮಾಡಿ kssfcltrg@souharda.coop ಇ–ಮೇಲ್ ಐಡಿಗೆ ಕಳುಹಿಸುವುದು. |
| ಕೋರ್ಸ್‌ನ ವಿಧಾನ | ಆನ್‌ಲೈನ್ ಕೋರ್ಸ್‌ನ ಲಿಂಕನ್ನು ಶಿಭಿರಾರ್ಥಿಗಳಿಗೆ ಇ–ಮೇಲ್ ಹಾಗೂ ವಾಟ್ಸ್ ಆಪ್ ಮೂಲಕ ಕಳುಹಿಸಲಾಗುವುದು |
| | Google meet ಆಪ್ ಮೂಲಕ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಆರಂಭದಲ್ಲಿ ಚಿನ್ನ ಮೌಲ್ಯಮಾಪನದ ಕುರಿತು ತರಬೇತಿ ನೀಡಲಾಗುವುದು ಅವಧಿಯ ಮಕ್ತಾಯದ ಸಮಯದಲ್ಲಿ ಚರ್ಚೆಗೆ ಅವಕಾಶವಿರುತ್ತದೆ. |
| ಸಂಪನ್ಮೂಲ ವ್ಯಕ್ತಿಗಳು | ಜಿಎಸ್‌ಎಸ್ ಅಡ್ವಾನ್ಸಡ್ ಜಿವಲರಿ ಟೆಕ್ನೋಲಾಜಿ ಸೆಂಟರ್ ಇವರ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕಾರ್ಯಕ್ರಮ. |

ಚಿನ್ನದ ಮೌಲ್ಯ ಮಾಪನ ಆನ್‌ಲೈನ್ ತರಬೇತಿ ಕಾರ್ಯಕ್ರಮಕ್ಕೆ ಪ್ರತಿ 100 ಜನ ನೋಂದಣಿಯಾದ ನಂತರದಲ್ಲಿ ಒಂದು ತರಬೇತಿ ಕಾರ್ಯಕ್ರಮದ ದಿನಾಂಕವನ್ನು ನಿಗಧಿಪಡಿಸಲಾಗುವುದು ನೂರಕ್ಕಿಂತ ಹೆಚ್ಚಾದಲ್ಲಿ ಎರಡನೇ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಸಂಯುಕ್ತ ಸಹಕಾರಿ ವತಿಯಿಂದ ನೂತನವಾಗಿ ಆಯೋಜಿಸುತ್ತಿರುವ ಈ ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಲು ಕೋರಿದೆ.

ವಂದನೆಗಳೊಂದಿಗೆ,

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

## ನೋಂದಣಿ ಅರ್ಜಿ

| | | |
|---|---|---|
| 1 | ಅಭ್ಯರ್ಥಿಯ ಹೆಸರು | |
| 2 | ಲಿಂಗ | ಪುರುಷ / ಮಹಿಳೆ |
| 3 | ಹುದ್ದೆ | |
| 4 | ಮೊಬೈಲ್ ಸಂಖ್ಯೆ(ವಾಟ್ಸ್ ಆಪ್ ನಂ) | |
| 5 | ಇ– ಮೇಲ್ ಐಡಿ | |
| 6 | ಆಧಾರ ಸಂಖ್ಯೆ | |
| 7 | ಸೌಹಾರ್ದ ಸಹಕಾರಿಯ ಹೆಸರು ಹಾಗೂ ವಿಳಾಸ | |
| | | |
| | | |
| | | ದೂ. |
| 8 | ಕೋರ್ಸನ ಶುಲ್ಕ ಪಾವತಿಸಿರುವ ವಿವರ | 1. NEFT/RTGS/Google pay :<br>2. ಚೆಕ್/ಡಿಡಿ ಆಗಿದ್ದಲ್ಲಿ ಚೆಕ್/ ಡಿಡಿ ನಂ–––––– ಬ್ಯಾಂಕ್–––– ದಿನಾಂಕ–––<br>ಸೂಚನೆ : ಶುಲ್ಕ ಪಾವತಿಸಿದ ವಿವರವನ್ನು ಲಗತ್ತಿಸತಕ್ಕದ್ದು. |

ಮುಖ್ಯಕಾರ್ಯನಿರ್ವಾಹಕರ ಸಹಿ ಹಾಗೂ ಮೊಹರು

# ಆಡಳಿತ ಮಂಡಳಿಯ ಪದಾವಧಿ ಮುಗಿದಿರುವ ಮತ್ತು ಮುಗಿಯಲಿರುವ ಸಹಕಾರಿಗಳ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಕುರಿತು ಸರ್ಕಾರದ ಆದೇಶ

**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಪ್ರಾಧಿಕಾರ**

3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್.
ಶಾಂತಿನಗರ. ಬೆಂಗಳೂರು–5600027
ದಿನಾಂಕ: 19–09–2020.

ಸಂಖ್ಯೆ:ಸಚುಪ್ರಾ/ಆಡಳಿತ/31/2020–21

**ಚುನಾವಣಾ ತುರ್ತು**

**:ಜ್ಞಾಪನಾ:**

**ವಿಷಯ:–** ಈಗಾಗಲೇ ಆಡಳಿತ ಮಂಡಳಿಯ ಪದಾವಧಿ ಮುಗಿದಿರುವ ಮತ್ತು ಮುಗಿಯಲಿರುವ ಸಹಕಾರಿಗಳ ಆಡಳಿತ ಮಂಡಲಿಯ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಬಗ್ಗೆ.(ರಿಟ್ ಪಿಟಿಷನ್ ಸಂಖ್ಯೆ: 8920/2020 ಹಾಗೂ 9001/2020)

**ಉಲ್ಲೇಖ:**
1. ಈ ಕಛೇರಿ ಪತ್ರ ಸಂಖ್ಯೆ: ಬೆಂಪ್ರಾ/ಪ್ರಾ.ಮಾ.ಫೆ/ಚುನಾವಣೆಗಳು/02/2020, ದಿನಾಂಕ: 08–09–2020.
2. ಈ ಕಛೇರಿ ಪತ್ರ ಸಂಖ್ಯೆ: ಬೆಂಪ್ರಾ/ಪ್ರಾ.ಮಾ.ಫೆ/ಚುನಾವಣೆಗಳು/03/2020, ದಿನಾಂಕ: 11–09–2020.

***

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರಗಳಲ್ಲಿ, ಕಂಟೈನ್ಮೆಂಟ್ ಪ್ರದೇಶದಲ್ಲಿ ಬಂದಲ್ಲಿ ಅಂತಹ ಚುನಾವಣೆಗಳನ್ನು ಹೊರತುಪಡಿಸಿ, ಉಳಿದಂತೆ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ/ಮಾಧ್ಯಮಿಕ/ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಲಿ ಪದಾವಧಿಯು ಮುಕ್ತಾಯಗೊಂಡಿರುವ ಮತ್ತು ಮುಗಿಯಲಿರುವ ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿಯ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಉಲ್ಲೇಖ(1)ರ ಪತ್ರದಲ್ಲಿ ಕಾಲಮಿತಿಯೊಳಗೆ ಚುನಾವಣಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ತಿಳಿಸಲಾಗಿರುತ್ತದೆ.

ಆದಾಗ್ಯೂ ಕೆಲವು ಚುನಾವಣಾಧಿಕಾರಿಗಳು, ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ ಈ ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ.

ಉಲ್ಲೇಖ(1) ಮತ್ತು (2)ರ ಪತ್ರಗಳನ್ನು ಈ ಪತ್ರಕ್ಕೆ ಲಗತ್ತಿಸುತ್ತಾ, ಉಲ್ಲೇಖ (1)ರ ಪತ್ರದಲ್ಲಿ ಕಾಲಮಿತಿಯೊಳಗೆ ಚುನಾವಣೆ ನಡೆಸಲು ತಿಳಿಸಲಾಗಿರುವಂತೆ ಹಾಗೂ ಉಲ್ಲೇಖ(2) ಪತ್ರದಲ್ಲಿ ಈ ಕಛೇರಿಯಿಂದ ನೀಡಲಾಗಿರುವ ನಿರ್ದೇಶನದಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.

(ಡಾ.ಎನ್.ಎಸ್. ಚನ್ನಪ್ಪಗೌಡ)
**ಆಯುಕ್ತರು,**
**ಸಹಕಾರ ಚುನಾವಣಾ ಪ್ರಾಧಿಕಾರ,**
**ಬೆಂಗಳೂರು.**

# ರಾಜ್ಯದ ಸೌಹಾರ್ದ ಸಹಕಾರಿಯ ಪದಾವಧಿ ಮುಗಿಯಲಿರುವ / ಆಕಸ್ಮಿಕವಾಗಿ ತೆರವಾಗುವ ಸ್ಥಾನಗಳಿಗೆ / ಹೊಸದಾಗಿ ನೋಂದಣಿಯಾಗುವ ಎಲ್ಲಾ ರೀತಿಯ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ ನಡೆಸುವ ಕುರಿತು ಸರ್ಕಾರದ ಆದೇಶ

ಕರ್ನಾಟಕ ಸರ್ಕಾರ

ಸಹಕಾರ ಚುನಾವಣಾ ಪ್ರಾಧಿಕಾರ 1170/17

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027

ವಿಷಯ: ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 26 ಎ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 2(ಜಿ-2) ರಂತೆ ದಿನಾಂಕ 01.01.2020ರಿಂದ 31.12.2020ರವರೆಗೆ ಪದಾವಧಿ ಮುಗಿಯಲಿರುವ/ ಆಕಸ್ಮಿಕವಾಗಿ ತೆರವಾಗುವ ಸ್ಥಾನಗಳಿಗೆ/ ಹೊಸದಾಗಿ ನೋಂದಣಿಯಾಗುವ ಎಲ್ಲಾ ರೀತಿಯ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ:
(1) ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ:ಸಚುಪ್ರಾ/ ಆಡಳಿತ/ಪ್ರಾಸಂಚು/05/2019-20, ದಿನಾಂಕ: 30-09-2019 ಮತ್ತು 05-11-2019.
(2) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಹಾಸನ ಜಿಲ್ಲೆ, ಹಾಸನ ರವರ ಪತ್ರ ಸಂಖ್ಯೆ: ಜನಿಹಾ/ಸಿಬ್ಬಂದಿ/ಸೌಹಾರ್ದ/ 116/2020-21, ದಿ: 27-07-2020.


★★★

**ಪ್ರಸ್ತಾವನೆ**

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ)ರ ನಿಯಮ 2(ಜಿ-2) ಪ್ರದತ್ತವಾದ ಅಧಿಕಾರದಂತೆ, 2020ನೇ ಸಾಲಿನಲ್ಲಿ ಅಂದರೆ ದಿನಾಂಕ: 01.01.2020 ರಿಂದ 31.12.2020 ರವರೆಗೆ ಸಹಕಾರಿಗಳ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ, ಆಕಸ್ಮಿಕವಾಗಿ ತೆರವಾದ ನಿರ್ದೇಶಕರ ಸ್ಥಾನಗಳಿಗೆ / ವಿಶೇಷಾಧಿಕಾರಿ ನೇಮಕಗೊಂಡ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಈಗಾಗಲೇ ಉಲ್ಲೇಖ (1)ರಂತೆ ಆದೇಶ ಹೊರಡಿಸಿದೆ.

ಸದರಿ ಆದೇಶದಲ್ಲಿ ಕ್ರಮ ಸಂಖ್ಯೆ: (8) ರಲ್ಲಿ ಕೊಡಗು ಮತ್ತು ಹಾಸನ ಜಿಲ್ಲೆಗಳಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕೊಡಗು ಜಿಲ್ಲೆ, ಮಡಿಕೇರಿ ಇವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

ಶ್ರೀ.ಹೆಚ್.ಸಿ.ಬಸವರಾಜು, ಜಂಟಿ ನಿರ್ದೇಶಕರು ದಿನಾಂಕ: 09-07-2020 ರಂದು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಹಾಸನ ಹುದ್ದೆಯ ಪ್ರಭಾರ ವಹಿಸಿಕೊಂಡಿರುವುದರಿಂದ, ದಿನಾಂಕ: 05-11-2019 ರ ಆದೇಶದಲ್ಲಿ ಕ್ರಮ ಸಂಖ್ಯೆ: (8) ರಲ್ಲಿ ಕೊಡಗು ಮತ್ತು ಹಾಸನ ಜಿಲ್ಲೆಗಳಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ


ನಿರ್ದೇಶಕರು, ಕೊಡಗು ಜಿಲ್ಲೆ, ಮಡಿಕೇರಿ ಇವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಲಾಗಿರುವುದನ್ನು ಮಾರ್ಪಡಿಸಿ, ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಹಾಸನ ಜಿಲ್ಲೆ ಇವರನ್ನು ಹಾಸನ ಜಿಲ್ಲೆಗೆ ಚುನಾವಣಾಧಿಕಾರಿಯನ್ನಾಗಿ ನೇಮಿಸುವುದು ಸೂಕ್ತವೆಂದು ಪರಿಗಣಿಸಿ, ಈ ಕೆಳಕಂಡಂತೆ ಭಾಗಶಃ ಮಾರ್ಪಾಡು ಆದೇಶವನ್ನು ಹೊರಡಿಸಿದೆ

ಮಾರ್ಪಾಡು ಆದೇಶ

ಸಂಖ್ಯೆ: ಸಚುಪ್ರಾ/ಆಡಳಿತ/ಪ್ರಾಸಚು/05/2019-20

ದಿನಾಂಕ: 11.09.2020

| ಕ್ರ.ಸಂ. | ಜಿಲ್ಲೆಯ ಹೆಸರು | ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಅಧಿಕಾರಿ |
|---|---|---|
| 8 | ಕೊಡಗು ಜಿಲ್ಲೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕೊಡಗು ಜಿಲ್ಲೆ, ಮಡಿಕೇರಿ |
| 8(ಎ) | ಹಾಸನ ಜಿಲ್ಲೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಹಾಸನ ಜಿಲ್ಲೆ |

ಉಲ್ಲೇಖ(1)ರ ಆದೇಶಗಳಲ್ಲಿನ ಇತರ ಸೂಚನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

(ಡಾ.ಎನ್.ಎಸ್. ಚನ್ನಪ್ಪಗೌಡ)
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

## ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉದ್ಘಾಟನೆ




**ಮೈಸೂರು** : ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉದ್ಘಾಟನೆಯು ದಿನಾಂಕ 03-10-2020 ರಂದು ಗ್ರೀನ್ ಹೆರಿಟೇಜ್ ಹೋಟೆಲ್ ಸಭಾಂಗಣ ಮೈಸೂರು ಇಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ನೆರವೇರಿಸಿದರು. ನಂತರ ಮಾತನಾಡಿ ರಾಜ್ಯದಲ್ಲಿ ಎಲ್ಲ ಕಡೆಯೂ ಸಹಕಾರ ಒಕ್ಕೂಟಗಳು ಹೆಚ್ಚಾಗಬೇಕು, ಸಹಕಾರ ಸಂಸ್ಥೆಗಳು ಠೇವಣಿ ಪಡೆದು ಸಾಲ ನೀಡುವುದಕ್ಕಷ್ಟೇ ಸೀಮಿತವಾಗಬಾರದು. ಜನರಿಗೆ ಸಹಾಯವಾಗುವಂತಹ ಕೆಲಸಗಳನ್ನು ಮಾಡಬೇಕೆಂದು ಕರೆ ನೀಡಿದರು. ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಸಮಸ್ಯೆ ಹೆಚ್ಚಾಗಿದ್ದು ಇಷ್ಟರಲ್ಲೇ ಅದೂ ಬಗೆಹರಿಯುತ್ತಿದೆ. ವಾರ್ಷಿಕವಾಗಿ 50 ಕೋಟಿ ರೂ ಗಿಂತಲೂ ಹೆಚ್ಚು ವಹಿವಾಟು ನಡೆಸುವ ಕಂಪನಿಗಳಿಗೆ ಮಾತ್ರ ಟಿ.ಡಿ.ಎಸ್ ವಿಧಿಸಬೇಕು ಎಂದು ನಿರ್ಧರಿಸಲಾಗಿದೆ. ಅಧಿಕೃತವಾಗಿ ಈ ನಿರ್ಧಾರ ಜಾರಿಗೆ ಬಂದರೆ ಮೈಸೂರು ಭಾಗದ ಯಾವ ಸಂಸ್ಥೆಗಳೂ ಆದಾಯ ತೆರಿಗೆಯ ಬಗ್ಗೆ ಯೋಚಿಸುವಷ್ಟಿಲ್ಲ ಎಂದು ತಿಳಿಸಿದರು.

ನಂತರ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ ರಾಜೀವ್ ರವರಿಗೆ ಸಹಕಾರ ಭಾರತೀಯ ರಾಜ್ಯಾಧ್ಯಕ್ಷರಾದ ಶ್ರೀ ಎಸ್.ಆರ್ ಸತೀಶ್‌ಚಂದ್ರ ರವರು ಸನ್ಮಾನಿಸಿದರು.

ಸದರಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಪ್ರಕಾಶ್ ರಾವ್, ಸಹಕಾರಿಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಶ್ರೀ ವಿಜಯ್ ಕುಮಾರ್ ಸಹಕಾರಿಗಳ ಉಪನಿಬಂಧಕರು, ಮೈಸೂರು, ಶ್ರೀ ಬಿ.ಮಹದೇವಸ್ವಾಮಿ ಅಧ್ಯಕ್ಷರು, ಸಹಕಾರ ಭಾರತಿ, ಮೈಸೂರು ಜಿಲ್ಲೆ, ಶ್ರೀ ಹೆಚ್.ಎನ್ ನವೀನ್, ಅಧ್ಯಕ್ಷರು, ಸಹಕಾರ ಭಾರತಿ, ಮೈಸೂರು ನಗರ, ಶ್ರೀಮತಿ ಹೇಮಾಗಂಗಪ್ಪ ಅಧ್ಯಕ್ಷರು, ಸಹಕಾರ ಭಾರತಿ, ಮಹಿಳಾ ವಿಭಾಗ ಮೈಸೂರು ಜಿಲ್ಲೆ ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾರಾಯಣ ರಾವ್ ಎಸ್.ಆರ್‌ರವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಜಗದೀಶ್ ಹೆಬ್ಬಾರ್‌ರವರು ಮಾಡಿದರು. ಕಾರ್ಯಕ್ರಮದ ಸ್ವಾಗತವನ್ನು ಒಕ್ಕೂಟದ ನಿರ್ದೇಶಕರಾದ ಶ್ರೀ ಗಿರೀಶ್ ರವರು ಹಾಗೂ ವಂದನಾರ್ಪಣೆಯನ್ನು ಒಕ್ಕೂಟದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಭಗೀರಥ ರವರು ಮಾಡಿದರು. ಸದರಿ ಕಾರ್ಯಕ್ರಮದಲ್ಲಿ 38 ಸೌಹಾರ್ದ ಸಹಕಾರಿಗಳಿಂದ 58 ಪ್ರತಿನಿಧಿಗಳು ಭಾಗವಹಿಸಿದ್ದರು.



## ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಶ್ರೀ ಟಿ. ಬದರಿನಾಥ್ ಆಯ್ಕೆ

**ಚಿತ್ರದುರ್ಗ :** ಶ್ರೀ ಕನ್ಯಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಸಹಕಾರಿಯ ನಿರ್ದೇಶಕರಾದ ಶ್ರೀ ಟಿ. ಬದರಿನಾಥ್ ರವರು, ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸರಕಾರ ನೇಮಿಸಿದೆ. ಇವರಿಗೆ ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ. ಎಸ್. ನಾಗರಾಜ ಶೆಟ್ಟಿಯವರು ಹಾಗೂ ಉಪಾಧ್ಯಕ್ಷರಾದ ಶ್ರೀ ಎಂ. ಹೆಚ್. ಪ್ರಾಣೇಶ್ ರವರು ಶ್ರೀಯುತರನ್ನು ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯ ಕಾರ್ಯ ನಿರ್ವಾಹಕರಾದ ಶ್ರೀಮತಿ ಶೈಲಜಾ ರವರು ಉಪಸ್ಥಿತರಿದ್ದರು.

## ಶಿಕ್ಷಕರ ದಿನಾಚರಣೆ



**ಅಂಕೋಲಾ :** ದಿನಾಂಕ 05.09.2020 ರಂದು ವಿವೇಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕೋಲಾ ಸಹಕಾರಿ ವತಿಯಿಂದ ಶಿಕ್ಷಕರ ದಿನಾಚರಣೆಯನ್ನು ಬೇಲೇಕೆರಿ ಸರಕಾರಿ ಪ್ರೌಢಶಾಲೆಯಲ್ಲಿ ಅಶ್ವತ್ಥವೃಕ್ಷವನ್ನು ನೆಟ್ಟುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಮಾತನಾಡಿ ಅಜ್ಞಾನದಿಂದ ಸುಜ್ಞಾನದ ಕಡೆಗೆ ವಿದ್ಯಾರ್ಥಿಗಳನ್ನು ಕರೆದೊಯ್ಯುವ ಕಾಯಕ ಯೋಗಿ ಶಿಕ್ಷಕ. ಗುರುವಿಗೆ ಇರುವಷ್ಟು ಮೌಲ್ಯ ಇನ್ನಾರಿಗೂ ಸಿಗಲಾರರು. ಪುರಾತನ ಸಂಸ್ಕೃತಿಯಿಂದ ಹಿಡಿದು ಇಂದಿನವರೆಗೆ ಗುರುವೇ ಶ್ರೇಷ್ಠ. ಇಂದಿನ ಶಿಕ್ಷಕ ದಿನಾಚರಣೆಯಲ್ಲಿ ಪ್ರಾಣವಾಯುವನ್ನು ಹೇರಳವಾಗಿ ನೀಡುವ ಅಶ್ವತ್ಥವೃಕ್ಷವನ್ನು ನೆಟ್ಟುವ ಮೂಲಕ ಆಚರಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂತೋಷ ಶೇಣ್ವಿ, ಲಕ್ಷ್ಮಣ ನಾಯಕ, ಏಸು ಗೌಡ, ಬೀರಣ್ಣ, ಸಹ ಶಿಕ್ಷಕರಾದ ಜಿ.ಟಿ.ತೊರ್ಕೆ, ಮಂಜುನಾಥ ನಾಯಕ, ಅನಿತಾ ನಾಯಕ, ಮಹಾದೇವಿ ನಾಯಕ, ಪ್ರಶಾಂತ ನಾಯಕ, ಮಂಗಲಾ ನಾಯಕ, ಸುಬ್ರಾಯ ಗೌಡ, ನಾಗರತ್ನ ಮಹಾಲಿಂಗಣ್ಣನವರ, ರೇಣುಕಾ ಮಂಜುಬಳ್ಳಿ, ರೇಣುಕಾ ದುಂಡಶಿಕರ ಉಪಸ್ಥಿತರಿದ್ದರು.

## 2ನೇ ವಾರ್ಷಿಕ ಸಾಮಾನ್ಯ ಸಭೆ



**ಕೊಪ್ಪಳ :** ಶ್ರೀಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಿ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 12.09.2020 ರಂದು ಎಸ್.ಬಿ.ಐ ಬ್ಯಾಂಕ್ ಹತ್ತಿರ ಸಾಮ್ರಾಟ್ ಹೋಟೆಲ್ ಕಾಂಪ್ಲೆಕ್ಸನ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು ಹಾಗೂ ವಿಶ್ವಗುರು ಬಸವಣ್ಣನವರ ಮೂರ್ತಿಗೆ ಪೂಜೆ ಮಾಡುವ ಮುಖಾಂತರ ಕಾರ್ಯಕ್ರಮವನ್ನು ಹಾಗೂ ಕುಮಾರಿ ಚೈತ್ರ ಪಲ್ಲೆದ್ ಇವರು ಪ್ರಾರ್ಥನೆ ಗೀತೆಯಿಂದ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಗಿತ್ತು.

ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ಕುಲಕರ್ಣಿ ಇವರು ಮಾತನಾಡಿ ಸಹಕಾರಿಯ ಕಾರ್ಯಚಟುವಟಿಕೆಯನ್ನು ಶ್ಲಾಘಿಸಿ ಉತ್ತಮ ಸಲಹೆಗಳನ್ನು ನೀಡಿದರು. ಸಹಕಾರಿ ಉಪಾಧ್ಯಕ್ಷರಾದ ಶ್ರೀ ಗಾಳಪ್ಪ ಗೊರವರ್ ಸಹಕಾರಿಯ ಕಿರುಪರಿಚಯವನ್ನು ಮಾತನಾಡಿ ಆಡಳಿತ ಮಂಡಳಿಯವರ ಶ್ರಮದಿಂದಾಗಿ ಪ್ರತಿಷ್ಠಿತ ಸಹಕಾರ ಸಂಸ್ಥೆಯಾಗಿ ಹೊರಹೊಮ್ಮಿದೆ ಹಾಗೂ ಸದಸ್ಯರ ಅನುಕೂಲತೆಗಾಗಿ ನಾವು ಯಾವಾಗಲೂ ಬೆನ್ನೆಲುಬಾಗಿ ನಿಂತಿರುತ್ತೇವೆ ಎಂದು ವ್ಯಕ್ತಪಡಿಸಿದ್ದಾರೆ ಹಾಗೂ ಹಿರಿಯ ನಿರ್ದೇಶಕರಾದ ಶ್ರೀ ಶಂಭುಲಿಂಗ ಶೆಟ್ಟಿ ಇವರು ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ ಶ್ರೀ ನಿಂಗಪ್ಪ ನಾಯಕ್ ಹಾಗೂ ಇನ್ನೂ ಅನೇಕ ಮುಖಂಡರು ಸಹಕಾರಿ ಏಳಿಗೆಗಾಗಿ ಎಲ್ಲರೂ ಶ್ರಮಿಸೋಣ ಎಂದು ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸಹಕಾರಿಯಿಂದ ಸನ್ಮಾನ ಸಮಾರಂಭ ಹಾಗೂ ಕಾಣಿಕೆ ಮತ್ತು ಪ್ರೋತ್ಸಾಹ ಧನ ಮತ್ತು ಅಭಿನಂದನಾ ಪತ್ರ ಮತ್ತು ಸಂಬಂಧಪಟ್ಟ ಸಾಮಾನ್ಯ ಜ್ಞಾನ ಪುಸ್ತಕವನ್ನು ಉಡುಗೊರೆಯನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು, ಪಿಗ್ಮಿ ಸಂಗ್ರಹಕಾರರು ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಿವಕುಮಾರ ಏಣಿಗಿ ನೆರವೇರಿಸಿಕೊಟ್ಟರು ವಂದನಾರ್ಪಣೆಯನ್ನು ಶ್ರೀ ಶಿವಕುಮಾರ್ ಕಾಕಿ ಅವರು ನಡೆಸಿಕೊಟ್ಟರು.

# ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ 9ನೇ ವಾರ್ಷಿಕ ಸಾಮಾನ್ಯ ಸಭೆ



**ಬೀದರ :** ಕೊರೋನ ಮಹಾಮಾರಿಯು ಸಹಕಾರಿಗಳಿಗೆ ಹೊಸ ಚಿಂತನೆಗೆ ದಾರಿ ಮಾಡಿದೆ ಎಂದು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ ಅಭಿಪ್ರಾಯಪಟ್ಟರು. ನಗರದ ಶಾರದಾ ರೋಡಸೆಟ್ ಬೀದರನಲ್ಲಿ ಆಯೋಜಿಸಿದ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ ಒಂಬತ್ತನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಕೊರೋನಾ ವೈರಸ್ ನಿಂದ ಸಹಕಾರಿಯ ಕಾರ್ಯಚಟುವಟಿಕೆಯ ಮೇಲೆ ನೇರ ಪರಿಣಾಮ ಬೀರಿದೆ, ಬದಲಾದ ಸಂದರ್ಭದಲ್ಲಿ ಬದಲಾವಣೆಯ ಮೂಲಕ ಕಾರ್ಯನಿರ್ವಹಣೆ ಪದ್ಧತಿಯು ಸಹಕಾರಿಗಳು ಅಳವಡಿಸಿಕೊಂಡು ಸದಸ್ಯರಿಗೆ ಅಗತ್ಯ ಸೇವೆಯನ್ನು ನೀಡುವ ಜವಾಬ್ದಾರಿ ನಮ್ಮ ಸಹಕಾರಿಗಳ ಮೇಲಿದೆ ಎಂದರು. ಇಡೀ ಸಮಾಜವು ಸಂಕಷ್ಟದ ಸಮಯದಲ್ಲಿ ಇರುವಾಗ ಸಹಕಾರಿಗಳಾದ ನಾವು ಕೊರೋನ ವಾರಿಯರಸ್‌ಗಳಾದ ರಾಜ್ಯದ ಎಲ್ಲಾ ಆಶಾ ಕಾರ್ಯಕರ್ತರಿಗೆ ತಲಾ ರೂ.3000/–ಗಳ ಪ್ರೋತ್ಸಾಹ ಧನ ನೀಡುವ ಮೂಲಕ ತನು ಮನ, ಧನದಿಂದ ಸಹಕಾರಿಗಳು ಸರ್ಕಾರದ ಬೆಂಬಲಕ್ಕೆ ನಿಲ್ಲುವ ಮೂಲಕ ಇಡೀ ಸಮಾಜಕ್ಕೆ ಮಾದರಿಯಾಗಿವೆ ಎಂದು ತಿಳಿಸಿದರು.

ಸಾಮಾನ್ಯ ಸಭೆಯ ಕಾರ್ಯಕ್ರಮವನ್ನು ಸಹಕಾರ ಗೀತೆಯೊಂದಿಗೆ ಪ್ರಾರಂಭಿಸಲಾಯಿತ್ತು. ಹಿಂದಿನ ಮಹಾಸಭೆಯ ನಡಾವಳಿ ಮತ್ತು ನಿರ್ಣಯಗಳನ್ನು ಒಕ್ಕೂಟ ಸಹಕಾರಿಯ ನಿರ್ದೇಶಕರಾದ ಶ್ರೀ ರಾಜಶೇಖರ ನಾಗಮೂರ್ತಿ, ಮಂಡಿಸಿದರು. ಲೆಕ್ಕಪರಿಶೋಧನಾ ವರದಿಯನ್ನು ನಿರ್ದೇಶಕರಾದ ಶ್ರೀ ಸಂಜಯ ಕ್ಯಾಸಾ, ಮಂಡಿಸಿ ಸಭೆಯ ಅನುಮೊದನೆ ಪಡೆದುಕೊಂಡರು. ವಾರ್ಷಿಕ ವರದಿಯನ್ನು ಶ್ರೀಕಾಂತ ಸ್ವಾಮಿ ಸೋಲಪೂರ ಮಂಡಿಸಿದರು. ಮುಂಬರುವ ವರ್ಷದ ಕ್ರಿಯಾಯೋಜನೆಯ ಮಂಡನೆಯ ಕುರಿತು ಕ್ರಾಂತೀಕುಮಾರ ಕುಲಾಲ್ ಮಂಡಿಸಿ ಅನುಮೊದಿಸಿದರು. 2019–20ನೇ ಸದಸ್ಯತ್ವ ಪಡೆದ ಸಹಕಾರಿಗಳ ಪಟ್ಟಿಯನ್ನು ಶಿವಬಸಪ್ಪ ಚನ್ನಮಲ್ಲೆ ಮಂಡಿಸಿದರು. ಮುಂಬರುವ ವರ್ಷದ ಆಯ–ವ್ಯಯ ಮಂಡನೆಯನ್ನು ಪ್ರೊ. ಹಾವಗೀರಾವ ಮೈಲಾರೆ ಮಂಡಿಸಿದರು. ನಂದಾವಿವೇಕಾನಂದ ಪ್ರಾಸ್ತಾವಿಕ ಮತ್ತು ಸ್ವಾಗತ ನಡೆಸಿಕೊಟ್ಟರು. ನೋಟಿಸ್ ಮುಖ್ಯ ಕಾರ್ಯನಿರ್ವಾಹಕರಾದ ಅಮೃತ ಹೊಸಮನಿ ಓದಿದರು. ವೀರಶೆಟ್ಟಿ ನಿರೂಪಿಸಿದರು. ರಮೇಶ ರಡ್ಡಿ ವಂದಿಸಿದರು. ಸಭೆಯಲ್ಲಿ ಹಿರಿಯ ಸಹಕಾರಿಗಳಾದ ಡಾ॥ ಅಶೋಕ ಕುಮಾರ ನಾಗೂರೆ, ಜಿಲ್ಲೆಯ 30ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಸಿಬ್ಬಂದಿಗಳು ಭಾಗವಹಿಸಿದರು.

# ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ 20ನೇ ವಾರ್ಷಿಕ ಸಾಮಾನ್ಯ ಸಭೆ



**ಬೀದರ :** ಸದಸ್ಯರ ಸಹಕಾರ, ಆಡಳಿತ ಮಂಡಳಿಯ ಬೆಂಬಲದೊಂದಿಗೆ ಸಹಕಾರಿಯು ಲಾಭದಲ್ಲಿ ಮುನ್ನುಗ್ಗುತ್ತಿದೆ ಎಂದು ಸಹಕಾರಿಯ ಅಧ್ಯಕ್ಷರಾದ ಗುರುನಾಥ ಜ್ಯಾಂತೀಕರ ಹರ್ಷ ವ್ಯಕ್ತಪಡಿಸಿದರು. ನಗರದ ಮೊಹನ ಮಾರ್ಕೆಟ್‌ನಲ್ಲಿರುವ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ ಕೇಂದ್ರ ಕಛೇರಿಯಲ್ಲಿ ನಡೆದ 20ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು.

ಸದಸ್ಯರ ಸಹಕಾರ ಆಡಳಿತ ಮಂಡಳಿಯ ನಿರ್ದೇಶಕರ ಮಾರ್ಗದರ್ಶನ ಹಾಗೂ ಸಿಬ್ಬಂದಿಗಳ ಪರಿಶ್ರಮದಿಂದ ಸಹಕಾರಿಯು ಉತ್ತಮ ಲಾಭದತ್ತ ಮುನ್ನಡೆಯುತ್ತಿದೆ ಎಂದರು ಸದಸ್ಯರು ತಮ್ಮ ಹೆಚ್ಚಿನ ವ್ಯವಹಾರವನ್ನು ಸಹಕಾರಿಯಿಂದ ನಡೆಸುವಂತೆ ಮನವಿ ಮಾಡಿದರು. ಸಭೆಯನ್ನು ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿ ಸಹಕಾರ ಗೀತೆಯೊಂದಿಗೆ ಪ್ರಾರಂಭಿಸಲಾಯಿತ್ತು. ಉದ್ಘಾಟನೆಯನ್ನು ವೇದಿಕೆ ಮೇಲಿನ ಮಾನ್ಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ, ಉಪಾಧ್ಯಕ್ಷರಾದ ಶ್ರೀ ಬಸವರಾಜ ಸ್ವಾಮಿ, ನಿರ್ದೇಶಕರಾದ ಶ್ರೀ ಎಸ್.ಬಿ. ಸಜ್ಜನಶೆಟ್ಟಿ, ರಾಜಕುಮಾರ ಧುಮ್ಮನಸೂರೆ, ಶ್ರೀಮತಿ ದೀಪಾ ಸುನೀಲಕುಮಾರ, ಶ್ರೀಮತಿ ರೋಮಾದೇವಿ ಹುಡೆದ್ ಉದ್ಘಾಟಿಸಿದರು.

ಸೂಚನಾ ಪತ್ರದಲ್ಲಿ ತಿಳಿಸಿರುವಂತೆ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶಿವರಾಜ ಹೂಗಾರ ಇವರು ವಿಷಯಗಳನ್ನು ಮಂಡಿಸಿ ಅನುಮೊದನೆ ಪಡೆದುಕೊಂಡರು. ಮೂರು ವರ್ಷಗಳ ಅಂದಾಜು ಕ್ರಿಯಾ ಯೋಜನೆಯನ್ನು ಉಪಾಧ್ಯಕ್ಷರಾದ ಶ್ರೀ ಬಸವರಾಜ ಸ್ವಾಮಿ ಮಂಡಿಸಿದರು. ಸಹಕಾರಿಯು ಸದರಿ ಸಾಲಿನಲ್ಲಿ 12% ಲಾಭಾಂಶವನ್ನು ಘೋಷಿಸಿದರು.

ಇದೇ ಸಂದರ್ಭದಲ್ಲಿ ಸಹಕಾರಿಯ ಸದಸ್ಯರ ಪ್ರತಿಭಾವಂತ ಮಕ್ಕಳಾದ ಕು. ರೀತಿಕಾ ಅಗ್ರವಾಲ್, ಕು. ರಕ್ಷಿತಾ, ವೀವೆಕ ಹೊಸಮನಿ ಹಾಗೂ ಉತ್ತಮ ಸೇವೆಯನ್ನು ನೀಡಿರುವ ಸದಸ್ಯರಾದ ಶ್ರೀ ರಮೇಶ ನರಸಿಂಗ್, ಸತ್ಯನಾರಾಯಣ, ಚನ್ನರೆಡ್ಡಿ, ರಾಜೇಂದ್ರ ಅವರಿಗೆ ಸನ್ಮಾನಿಸಲಾಯಿತ್ತು.

ಶಿವರಾಜ ಹೂಗಾರ ಪ್ರಾರ್ಥಿಸಿದರು, ರಾಜಕುಮಾರ ಧುಮ್ಮನಸೂರೆ ಸ್ವಾಗತಿಸಿದರು ವೀರಶಟ್ಟಿ ಕಾಮಣ್ಣಾ ವಂದಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಸದಸ್ಯರು, ಸಿಬ್ಬಂದಿಗಳಾದ ಅನೀಲಕುಮಾರ, ಶಿವಾನಂದ, ಸಂಜೀವಕುಮಾರ, ಮನ್ಮಥಪ್ಪ, ರವಿ ಅಮೃತ ಹೊಸಮನಿ, ಕು.ಸಲೋಮಿನಾ, ದೇವಿ, ಶ್ವೇತಾ ಉಪಸ್ಥಿತರಿದ್ದರು.

## ಸಿದ್ಧಸಿರಿ ಸೌಹಾರ್ದ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ



**ವಿಜಯಪುರ** : ದಿನಾಂಕ : 06.09.2020 ರಂದು ಸಿದ್ಧಸಿರಿ ಸೌಹಾರ್ದ ಸಹಕಾರಿಯ 14ನೇ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಬಸನಗೌಡ ರಾ ಪಾಟೀಲ (ಯತ್ನಾಳ) ಇವರ ಅನುಪಸ್ಥಿತಿಯಲ್ಲಿ ಯುವ ನಿರ್ದೇಶಕರಾದ ರಾಮನಗೌಡ ಬ ಪಾಟೀಲ (ಯತ್ನಾಳ) ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅಧ್ಯಕ್ಷರ ನುಡಿ ನಮನಗಳನ್ನು ಮತ್ತು ಸಹಕಾರಿ ಅಂಕಿ ಅಂಶ ಮತ್ತು ವ್ಯವಹಾರದ ಬಗ್ಗೆ ಹೇಳಿದರು. ಸಭೆಯ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಸಿದ್ರಾಮಪ್ಪಣ್ಣ ಉಪ್ಪಿನ, ಸಹಕಾರಿಯ ನಿರ್ದೇಶಕರಾದ ಬಸಯ್ಯಾ ಹಿರೇಮಠ. ಸಂಗನಬಸಪ್ಪ ಸಜ್ಜನ. ಶಿವಾನಂದ ಅಣೆಪ್ಪನವರ, ಸಾಯಿಬಾಬಾ ಸಿಂದಗೇರಿ, ಜಗದೀಶ ಕ್ಷತ್ರಿ. ಪ್ರಭುಗೌಡ ದೇಸಾಯಿ, ರಮೇಶ ಬಿರಾದಾರ, ವಿಜಯಕುಮಾರ ಚವ್ಹಾಣ, ಅಶೋಕಗೌಡ ತೊರವಿ, ಶೈಲಜಾ ಪಾಟೀಲ. ಸೀಮಾ ಕೋರೆ, ಗಣಪತಿ ಜಾಧವ. ವ್ಯವಸ್ಥಾಪಕ ನಿರ್ದೇಶಕರಾದ ಜೊತಿಬಾ ಖಂಡಾಗಳೆ, ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ರಾಘವೇಂದ್ರ ಅಣ್ಣಿಗೇರಿ. ಸಲಹಾ ಸಮಿತಿ ಸದಸ್ಯರಾದ ಹನಮಂತ ಕರ್ವೆ. ಕಳಕನಗೌಡ ಪಾಟೀಲ, ದಾದಾಸಾಹೇಬ ಗುಮಾಸ್ತೆ, ಆಕಾಶ ಗುತ್ತೆದಾರ ಲೆಕ್ಕಪರಿಶೋಧಕರಾದ ಶಿವಾನಂದ ಬೂಸಾರಿ, ವಕೀಲರಾದ ಸತೀಶ ಕುಲಕರ್ಣಿ, ತುಳಸಿರಾಮ ಸೂರ್ಯವಂಶಿ. ಸಹಾಯಕ ಪ್ರಧಾನ ವ್ಯವಸ್ಥಾಪಕಾರದ ರಾಜಶೇಖರ ಸ್ವಾಮಿ ಮತ್ತು ಸಹಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸದರಿ ಸಾಮಾನ್ಯ ಸಭೆಯು ಕೋವಿಡ 19ರ ಸರಕಾರ ಆದೇಶದ ಪ್ರಕಾರ ನಿಯಮಗಳನ್ನು ಪಾಲಿಸಿ ಸಭೆಯನ್ನು ಜರುಗಿಸಲಾಯಿತು.




**ವಿಜಯಪುರ** : ಸಿದ್ಧಸಿರಿ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯ 2019-20ನೇ ಸಾಲಿನ ಶಿಕ್ಷಣ ನಿಧಿ ರೂ. 6,66,726/- ಮತ್ತು ವಾರ್ಷಿಕ ಶಿಲ್ಕು ರೂ. 50,000/ ಮೊತ್ತದ ಚೆಕ್‌ನ್ನು ಸಹಕಾರಿ ಯುವ ನಿರ್ದೇಶಕರಾದ ಶ್ರೀ ರಾಮನಗೌಡ ಬ ಪಾಟೀಲ (ಯತ್ನಾಳ) ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಜೊತಿಬಾ ಎಮ್ ಖಂಡಾಗಳೆ ಇವರು ವಿಜಯಪುರ ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ ಇವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಎ ಜಿ ಎಮ್ ರಾಜಶೇಖರ ಸ್ವಾಮಿ ಉಪಸ್ಥಿತರಿದ್ದರು.

## ಸನ್ಮಾನ



**ಮೈಸೂರು** : ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿ ವತಿಯಿಂದ ನೂತನ ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ಇವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ವಿ. ಕೃಷ್ಣಾ, ಉಪಾಧ್ಯಕ್ಷರಾದ ಶ್ರೀ ಭಗವಾನ್ ಹಾಗೂ ನಿರ್ದೇಶಕರಾದ ಶ್ರೀ ಪರಶರಣ್ ಉಪಸ್ಥಿತರಿದ್ದರು.

## ವಾರ್ಷಿಕೋತ್ಸವ



**ಮಂಡ್ಯ** : ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಮದ್ದೂರು ಸಹಕಾರಿಯ ಒಂದನೇ ವರ್ಷದ ವಾರ್ಷಿಕೋತ್ಸವವನ್ನು ಸಹಕಾರಿಯ ಆವರಣದಲ್ಲಿ ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ ಹಾಗೂ ಆಡಳಿತ ಮಂಡಳಿ ಸದಸ್ಯರು & ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಪೂರ್ಣಿಮಾ ಉಪಸ್ಥಿತರಿದ್ದರು

## ಅಭಿನಂದನೆ



**ಮೈಸೂರು :** ತುಳುಶಿವಳ್ಳಿ ಮಾಧ್ವಬ್ರಾಹ್ಮಣ ಸೌಹಾರ್ದ ಸಹಕಾರಿ ನಿ., ಹಾಗೂ ಶ್ರೀ ಕೃಷ್ಣ ಮಿತ್ರಮಂಡಳಿ, ಮತ್ತು ತು.ಶಿ.ಮಾ.ಮ ವತಿಯಿಂದ ನೂತನ ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ಇವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷರಾದ ಶ್ರೀ ಶೇಖರ್. ಪಿ.ಎಸ್, ತು.ಶಿ.ಮಾ.ದ ಅಧ್ಯಕ್ಷ ಎಂ.ಕೆ. ಪುರಾಣಿಕ್, ಟಿ.ಎಸ್.ಎಸ್.ಎಂ.ಬಿ. ಸೌಹಾರ್ದ ಸಹಕಾರಿಯ ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್.ಕೆ ಮತ್ತು ವಿವೇಕ ಬಾಲೋದ್ಯಾನದ ಅಧ್ಯಕ್ಷ ವಾಸುದೇವ ರಾವ್, ಶ್ರೀ ಕೃಷ್ಣ ಮಿತ್ರಮಂಡಲಿಯ ಮಾಜಿ ಅಧ್ಯಕ್ಷ ರವಿಶಾಸ್ತ್ರಿ, ಪುಟ್ಟಣ್ಣ ಭಟ್.ಎಸ್ ಮತ್ತು ರಾಮತಂತ್ರಿ ಉಪಸ್ಥಿತರಿದ್ದರು.

## 15ನೇ ವಾರ್ಷಿಕ ಸಾಮಾನ್ಯ ಸಭೆ



**ಶಿವಮೊಗ್ಗ :** ದಿನಾಂಕ 20.09.2020 ರಂದು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣ ಮೂರ್ತಿ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ವಿಪ್ರ ಸೌಹಾರ್ದ ಸಹಕಾರಿಯ ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಪ್ರಸನ್ನ ಕುಮಾರ್ ರವರು ಉಪಸ್ಥಿತರಿದ್ದರು.

## ಉದ್ಘಾಟನೆ



**ಉಡುಪಿ :** ದಿನಾಂಕ 24.09.2020 ರಂದು ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನಲ್ಲಿ ಶಾಂತಿನಿಕೇತನ ಸೌಹಾರ್ದ ಸಹಕಾರಿ ನಿ. ಸಹಕಾರಿಯ ಉದ್ಘಾಟನೆಯನ್ನು ಶ್ರೀ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು ಅದಮಾರು ಮಠ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಕಲ್ಲಡ್ಕ ಪ್ರಭಾಕರ ಭಟ್ ಉಪಸ್ಥಿತರಿದ್ದರು.

**ಮೈಸೂರು :** ದಿನಾಂಕ 03–09–2020 ರಂದು ಮೈಸೂರು ಪತ್ತಿನ ಸೌಹಾರ್ದ ಸಹಕಾರಿಯಿಂದ ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಂಯುಕ್ತ ಸಹಕಾರಿಯ ಬ್ಯಾಂಕ್ ಖಾತೆಗೆ ರೂ. 25,000/– ಗಳನ್ನು ನೆಫ್ಟ್ ಮೂಲಕ ನೀಡಲಾಯಿತು.



**ಚಾಮರಾಜನಗರ :** ಗ್ರೀನ್ ವ್ಯಾಲಿ ಸೌಹಾರ್ದ ಸಹಕಾರಿ ನಿ., ಕೂಡಲೂರು, ಹನೂರು ತಾಲ್ಲೂಕು ಇದರ ಉದ್ಘಾಟನೆ & ಸರ್ವಸದಸ್ಯರ ಪ್ರಥಮ ವಾರ್ಷಿಕ ಮಹಾಸಭೆಯನ್ನು ಶ್ರೀ ಶ್ರೀ ಶ್ರೀ ನಾಗೇಂದ್ರಸ್ವಾಮಿಗಳು, ಸಾಲೂರು ಬೃಹ್ಮಠ, ಮಹದೇಶ್ವರ ಬೆಟ್ಟ, ಇವರು ಉದ್ಘಾಟನೆ ಮಾಡಿ ದಿವ್ಯ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ದಿನೇಶ್ ಗುಪ್ತಾ, ಮಾಜಿ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು, ಶ್ರೀ ಎಸ್. ಬಾಲಸುಬ್ರಮಣ್ಯ, ಅಧ್ಯಕ್ಷರು, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಶ್ರೀ ರಾಜೇಂದ್ರ ಕುಮಾರ್, ಅಧ್ಯಕ್ಷರು, ಮೈಸೂರು ಜಿಲ್ಲಾ ಛಾಯಾಸ್ನೇಹ ಸೌಹಾರ್ದ ಸಹಕಾರಿ ನಿ., ಇವರುಗಳು ಉಪಸ್ಥಿತರಿದ್ದರು. ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಹಾಗೂ ಶ್ರೀ ಚಂದ್ರಶೇಖರ ಪಾಟೀಲ, ಸಿಇಓ, ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಗಂಗಾಧರ್ .ಎಸ್, ಮುಖ್ಯ ಪ್ರವರ್ತಕರು ವಹಿಸಿದ್ದರು.

## ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ



**ಕೊಪ್ಪಳ :** ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಹಳ್ಳಿ, ಕೊಪ್ಪಳ ಸಹಕಾರಿಯ 2019-20 ಸಾಲಿನ 3ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಮಹಾಸಭೆಯು ದಿನಾಂಕ 27-9-2020 ರಂದು ಭಾನುವಾರ ಬೆಳಗ್ಗೆ 10:00 ಗಂಟೆಗೆ ಹೊಸಹಳ್ಳಿಯ ಸಹಕಾರಿ ಕಟ್ಟಡದ ಸಭಾಂಗಣದಲ್ಲಿ ಜರುಗಿತು. ಸಹಕಾರಿ ಆಂತರಿಕ ಲೆಕ್ಕಪರಿಶೋಧಕರಾದ ಶ್ರೀ ಶಶಿಕುಮಾರ್ ಗಡ್ಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ ಗೊಂದಿಹೊಸಳ್ಳಿ ರವರು ಅಧ್ಯಕ್ಷತೆಯನ್ನು ವಹಿಸಿ ಅಢಾವೆ ಪತ್ರಿಕೆಯ ವರದಿಯನ್ನು ಮಂಡಿಸಿದರು. ನಂತರ ಮಾತನಾಡಿದ ಅವರು ನಾವು ಗ್ರಾಮೀಣ ಭಾಗದ ಸಣ್ಣ ಪುಟ್ಟ ಉದ್ಯಮಗಳಿಗೆ, ವ್ಯಾಪಾರಸ್ಥರಿಗೆ ಹಾಗೂ ಇನ್ನಿತರ ಗ್ರಾಮೀಣ ಕಸುಬುಗಳಿಗೆ ಸಾಲ ನೀಡುವುದರ ಮೂಲಕ ಅವರ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿ ಜನಮನ್ನಣೆ ಗಳಿಸಿದ ನಮ್ಮ ಸಹಕಾರಿ ಸದಸ್ಯರ ಪಾಲಿಗೆ ಸಂಜೀವಿನಿ ಸಹಕಾರಿ ಎಂದರು.

ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಯಂಕನಗೌಡ ಪಾಟೀಲ್, ಶ್ರೀ ಅಂಜಿನಪ್ಪ ಸಿಂದೋಗಿ, ಶ್ರೀ ಮಂಜುನಾಥ ಬೆಟಗೇರಿ, ಶ್ರೀ ಷಣ್ಮುಖಪ್ಪ ಅಡ್ಗಿ ಸಹಕಾರಿ ಬೆಳವಣಿಗೆಯ ಮುಂದಿನ ಗುರಿಗಳ ಬಗ್ಗೆ ಮಾತನಾಡಿದರು. ಶ್ರೀ ನಾಗರಾಜ್ ಎಸ್.ಬಿ, ಶ್ರೀ ಬೆಳ್ಳಪ್ಪ ಈ.ಡಿ, ಶ್ರೀ ಶಿವಮೂರ್ತಿ ನೇಕಾರ, ಶ್ರೀ ಗವಿಸಿದ್ದಪ್ಪ ಬೆಟಗೇರಿ, ಶ್ರೀ ಮಾರುತಿ ಆರ್.ಎಸ್ ಮತ್ತು ವಕೀಲರಾದ ಶ್ರೀ ಫಯಾಜ್ ಪಟೇಲ್, ಸಿಬ್ಬಂದಿಗಳಾದ ಶ್ರೀ ಗವಿಸಿದ್ದಯ್ಯ ,ಶ್ರೀ ಚನ್ನಯ್ಯ, ಶ್ರೀ ದೇವರಾಜ, ಶ್ರೀ ಅರುಣ್ ಮತ್ತು ಸಹಕಾರಿಯ ಸದಸ್ಯರುಗಳು ಭಾಗವಹಿಸಿದ್ದರು. ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕನಕರಾಯ ನಿರೂಪಿಸಿದರೆ, ನಿರ್ದೇಶಕರಾದ ಶ್ರೀ ಮಂಜುನಾಥ ಪ್ರಾರ್ಥಿಸಿದರು. ಶ್ರೀ ದೇವೇಂದ್ರ ಸ್ವಾಗತವನ್ನು ಕೋರಿದರು ಮತ್ತು ಕ್ಯಾಶಿಯರ್ ಶಹನಾ ವಂದಿಸಿದರು.

## ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆ



**ಕೊಪ್ಪಳ :** ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ, ಕೊಪ್ಪಳ ಸಹಕಾರಿಯ 5ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಮಹಾಸಭೆಯು ದಿನಾಂಕ 26/09/2020 ರಂದು ಬೆಳಗ್ಗೆ 11:00 ಗಂಟೆಗೆ ವೀರ ಮಹೇಶ್ವರ ಸಮುದಾಯ ಭವನ, ಕೊಪ್ಪಳದಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ರವರು ಅಧ್ಯಕ್ಷತೆ ವಹಿಸಿ ಸಾಧನೆಗೈದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ನಂತರ ಅಢಾವೆ ಪತ್ರಿಕೆಯ ವರದಿಯನ್ನು ಮಂಡಿಸುತ್ತ ಮಾತನಾಡಿದ ಅವರು ನಮ್ಮ ಸಹಕಾರಿ 2020 ಮಾರ್ಚ್ ಅಂತ್ಯಕ್ಕೆ 3,12,41,648/-ರೂ ಗಳ ಸಾಲ ನೀಡಿ 10,39,000/- ರೂ ಲಾಭ ಪಡೆದು 4,50,00,000/- ರೂ ದುಡಿಯುವ ಬಂಡವಾಳ ಹೊಂದಿ ಸರಿಸುಮಾರಾಗಿ 10,00,00,000/- ರೂ ವ್ಯವಹಾರ ಮಾಡಿರುತ್ತದೆ ಎಂದರು ಮತ್ತು ಮುಂದಿನ ವರ್ಷದೊಳಗೆ ಸಹಕಾರಿಯ ಸ್ವಂತ ಜಾಗದಲ್ಲಿ ಸ್ವಂತ ಕಟ್ಟಡ ನಿರ್ಮಿಸಲೂ ಯೋಜನೆ ಹಾಕಿಕೊಂಡಿದ್ದೇವೆ. ಹೀಗಾಗಿ ತಮ್ಮೆಲ್ಲರ ಸಹಕಾರ ಇರಲಿ ಎಂದರು.

ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ಡಾ॥ ಬಸವರಾಜ್, ಶ್ರೀ ಪುಟ್ಟಪ್ಪ ವಾರದ್, ಶ್ರೀ ಕರಿಬಸವರಾಜ್ ಗಡ್ಡಿ ಸೇರಿದಂತೆ 176ಕ್ಕೂ ಹೆಚ್ಚು ಸದಸ್ಯರುಗಳು ಭಾಗವಹಿಸಿದ್ದರು. ಮ್ಯಾನೇಜರ್ ಶ್ರೀ ವೆಂಕಟೇಶ್ ನಿರೂಪಿಸಿದರೆ ಶ್ರೀ ಪುಟ್ಟಪ್ಪ ಸ್ವಾಗತವನ್ನು ಕೋರಿದರು. ಶ್ರೀ ಶರಣಪ್ಪ ಕೋಟೆ ರವರು ವಂದನಾರ್ಪಣೆಯನ್ನು ನೆರವೇರಿಸಿದರು.



## 5ನೇ ವಾರ್ಷಿಕ ಸಾಮಾನ್ಯ ಸಭೆ

**ಚಾಮರಾಜನಗರ :** ದಿನಾಂಕ 27.09.2020 ರಂದು ನಡೆದ ಸಂಗಮ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಸಹಕಾರಿಯ 5ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗಸುಂದರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಕು. ರಮ್ಯ ಉಪಸ್ಥಿತರಿದ್ದರು.

## ಸಮಾಲೋಚನಾ ಸಭೆ



**ಕೊಪ್ಪಳ :** ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ; ಹೊಸಹಳ್ಳಿ ಹಾಗು ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ; ಗಿಣಿಗೇರಾ, ಕೊಪ್ಪಳ ಇವರುಗಳ ಸಂಯುಕ್ತ ಆಶ್ರಯದಲ್ಲಿ ಹೊಸಹಳ್ಳಿಯ ಶ್ರೀ ಮಾತೋಶ್ರೀ ಸಹಕಾರಿಯಲ್ಲಿ "ಸೌಹಾರ್ದ ಸಹಕಾರಿಗಳ ಏಳಿಗೆಗಾಗಿ ಹಾಗೂ ಸಹಕಾರಿ ಕ್ಷೇತ್ರದ ಬಲವರ್ಧನೆಗಾಗಿ ಸಮಾಲೋಚನಾ ಸಭೆ" ಯನ್ನು ಆಯೋಜಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದ ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ ಗೊಂದಿಹೊಸಳ್ಳಿ ರವರು ಕೊರೋನಾ ಭೀತಿ ಹಿನ್ನೆಲೆಯಲ್ಲಿ ಸುಮಾರು ತಿಂಗಳಿಂದ ಸೌಹಾರ್ದ ಸಹಕಾರಿಗಳ ಸಭೆಗಳು ನಡೆಯದೇ ಇರುವುದರಿಂದ ನಮ್ಮ ಸೌಹಾರ್ದ ಸಹಕಾರಿಗಳಿಗೆ ಕಾರ್ಮೋಡ ಕವಿದಂತೆ ಆಗಿತ್ತು. ಹೀಗಾಗಿ ಚೈತನ್ಯ ತುಂಬಲೂ ಈ ಭಾಗದ ಎಲ್ಲ ಸಹಕಾರಿಗಳನ್ನು ಒಂದಡೆ ಸೇರಿಸಿ ಸಹಕಾರಿಯ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುವ ಉದ್ದೇಶದಿಂದ ಸಭೆ ಆಯೋಜನೆ ಮಾಡಿದ್ದೇವೆ ಎಂದರು. ಈ ಸಭೆಯ ಕಾರ್ಯಾಗಾರ ನಡೆಸಿಕೊಟ್ಟ ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ರವರು ಸಹಕಾರಿಗಳಿಗೆ ಉಪಯುಕ್ತ ಮಾಹಿತಿ ನೀಡಿದರು ಹಾಗೂ ನಂತರ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಾಗಾರದಲ್ಲಿ ಕೊಪ್ಪಳದ ಶಾಂಭವಿ ಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಭುಲಿಂಗಯ್ಯ ಎಸ್.ಎಲ್, ಉದಯೋನ್ಮುಖ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ, ಶಿವಗಂಗಾಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ, ಹುಲಿಗಿಯ ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ದೇವರಾಜ ಪಲ್ಲೇದ್, ಶ್ರೀ ಮಾತಾ ಹುಲಿಗೆಮ್ಮದೇವಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಶ್ರೀ ಸೋಮನಾಥ್, ಶ್ರೀ ಮನೋಹರ, ಶ್ರೀ ಗುರು ಸಾಯಿ ಕರುಣಾಮಯಿ ಪತ್ತಿನ ಸೌಹಾರ್ದ ಸಹಕಾರಿಯ ಶ್ರೀ ಸಂಜೀವ ಮೂರ್ತಿ, ಉಮೇಶ್, ಕೂಕನಪಳ್ಳಿಯ ಶ್ರೀ ಸ್ವಯಂ ಪತ್ತಿನ ಸೌಹಾರ್ದ ಸಹಕಾರಿಯ ಶ್ರೀ ಅಮರೇಶ ಸಹಕಾರಿಗಳ ಅಧ್ಯಕ್ಷರು ಹಾಗು ಇನ್ನಿತರು, ಆಡಳಿತ ಮಂಡಳಿಯವರು ಭಾಗಿಯಾಗಿ ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಶ್ರೀ ದೇವೇಂದ್ರ ನಿರೂಪಿಸಿದರೆ, ಉಪಾಧ್ಯಕ್ಷರಾದ ಶ್ರೀ ಯಂಕನಗೌಡ ಸ್ವಾಗತಿಸಿದರು.ಸಹಕಾರಿಯ ನಿರ್ದೇಶಕರಾದ ಶ್ರೀ ಷಣ್ಮುಖಪ್ಪ ವಂದನಾರ್ಪಣೆಯನ್ನು ನೆರವೇರಿಸಿದರು.

## ಸನ್ಮಾನ



**ಬೀದರ :** ಶ್ರೀ ರೇಣುಕ ಮಾಹೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೀದರ್ ಸಹಕಾರಿ ವತಿಯಿಂದ ಡಾ ಶರಣಾಯ್ಯ ಹಿರೆಮಠ ಇವರು ಡಾ ದೆವಿದಾಸ್ ಜಿ ಮಾಲೆ, ಕಾನೂನು ವಿಭಾಗದ ಮುಖ್ಯಸ್ಥರು, ಗುಲ್ಬಾರ್ಗ ವಿಶ್ವವಿದ್ಯಾಲಯ ಇವರ ಮಾರ್ಗದರ್ಶನದಲ್ಲಿ working of district consumer fourms with special reference to Hyderabad Karnataka regions A study's Guide ವಿಷಯಕ್ಕೆ PHD ಪ್ರಬಂಧ ಮಂಡಿಸಿದ್ದು Doctorate award ಲಭಿಸಿದ್ದು ಇವರನ್ನು ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಮಹೇಶ್ವರ ಸ್ವಾಮಿ ಉಪಾಧ್ಯಕ್ಷರಾದ ಶ್ರೀಕಾಂತ ಸ್ವಾಮಿ ಸೊಲ್ಲಪೂರ, ನಿರ್ದೇಶಕರಾದ ಬಸವರಾಜ ಚಿಟಾ, ಸುರೇಶ, ಸಂತೋಷ, ಶ್ರೀ ಆರ್ ಜಿ ಮಠಪತಿ ಹಾಗು ರಾಜು ಸಲಿ ದಂಪತಿ ಉಪಸ್ಥಿತರಿದರು.

## ಪ್ರೋತ್ಸಾಹ ಧನ ವಿತರಣೆ



**ಧಾರವಾಡ :** ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ. ಧಾರವಾಡ ಸಹಕಾರಿ ವತಿಯಿಂದ ದಿನಾಂಕ 18.09.2020 ರಂದು ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ನೀಡಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪನಿಬಂಧಕರ ಕಛೇರಿಯ ಅಧೀಕ್ಷಕರಾದ ಶ್ರೀ ವಿರುಪಾಕ್ಷಯ್ಯ ಚಿಕ್ಕಮಠ, ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರು ಹಾಗೂ ಧಾರವಾಡ ಶಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ವಂದೇಮಾತರಂ ಸೌಹಾರ್ದ ಸಹಕಾರಿಗೆ ಆರ್.ಟಿ.ಸಿ ಸೇವೆಯಿಂದ ಹೆಚ್ಚಿನ ಲಾಭ

**ದಕ್ಷಿಣ ಕನ್ನಡ** : 2011 ಮಾರ್ಚ್ ತಿಂಗಳಲ್ಲಿ ಉದ್ಘಾಟನೆಗೊಂಡ ವಂದೇಮಾತರಂ ಸೌಹಾರ್ದ ಸಹಕಾರಿ ದಶಮಾನೋತ್ಸವದ ಹೊಸ್ತಿಲಲ್ಲಿದೆ. ಬ್ಯಾಂಕಿಂಗ್ ವ್ಯವಹಾರದ ಜೊತೆಗೆ ಬ್ಯಾಂಕೇತರ ಚಟುವಟಿಕೆಗಳತ್ತ ತನ್ನನ್ನು ತೆರೆದುಕೊಂಡು ಮೂಡುಬಿದಿರೆಯ ಜನಪ್ರಿಯ ಸಹಕಾರಿಯಾಗಿ ಹೊಮ್ಮಿರುವುದು ತುಂಬ ಸಂತಸ ತರುವಂತಹದು. ಬ್ಯಾಂಕಿಂಗ್ ಜೊತೆಯಲ್ಲಿ ಇ–ಸ್ಟಾಂಪಿಂಗ್, ಸ್ವದೇಶಿ ಉತ್ಪನ್ನಗಳ ಮಾರಾಟ, ಮಹಿಳಾ ಸ್ವಾವಲಂಬನೆ, ಸಬಲೀಕರಣ ಮತ್ತು ಸಾಂಸ್ಕೃತಿಕ ಜಾಗ್ರತಿಗಾಗಿ ದೊಡ್ಡ ಸಂಖ್ಯೆಯ ಸ್ವಸಹಾಯ ಸಂಘಗಳ ಸಂಘಟನೆ ಮತ್ತು ಕಾರ್ಯಾಚರಣೆಯ ಜವಾಬ್ದಾರಿಯನ್ನು ಸಹಕಾರಿ ಸಮರ್ಥವಾಗಿ ನಿರ್ವಹಿಸುತ್ತಾ ಬಂದಿದೆ. ಇದೀಗ ಕಳೆದ ಎರಡು ವರ್ಷಗಳಿಂದ ಆರ್.ಟಿ.ಸಿ ಸೇವಾಕೇಂದ್ರವೂ ಇಲ್ಲಿ ಪ್ರಾರಂಭಗೊಂಡು ಪ್ರವರ್ಧಮಾನಕ್ಕೆ ಬರುತ್ತಿದೆ. ಆಗಿದಾಂಗ್ಗೆ ಸಾವಯವ ತರಕಾರಿ ಮಾರಾಟವನ್ನು ಮಾಡಲಾಗುತ್ತಿದೆ.

ನಮ್ಮ ಸಹಕಾರಿಯ ಆರ್.ಟಿ.ಸಿ ಕೇಂದ್ರವು ಆಸುಪಾಸಿನ ಪೇಟೆ ಮತ್ತು ಗ್ರಾಮೀಣ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಸಹಕಾರಿಯ ಹಣಕಾಸಿನ ವ್ಯವಹಾರದ ಜೊತೆಗೆ ಸಾರ್ವಜನಿಕರ ಹೆಚ್ಚಿನ ಸಂಪರ್ಕ ವ್ಯವಸ್ಥೆ ಹಾಗೂ ಅನುಕೂಲಕ್ಕಾಗಿ ಸ್ವದೇಶಿ ಮಳಿಗೆಯೊಂದನ್ನು ಪ್ರಾರಂಭಿಸಲಾಗಿದ್ದು, ಅದು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಇದರ ಜೊತೆಗೆ ಕಳೆದ ಎರಡು ವರ್ಷಗಳಿಂದ ಆರ್.ಟಿ.ಸಿ ಸೇವಾ ಕೇಂದ್ರವು ಕೂಡ ಕಾರ್ಯನಿರ್ವಹಿಸುತ್ತಿದೆ. ಸಹಕಾರಿಯಲ್ಲಿ ಈಗಿರುವ ಸಿಬ್ಬಂದಿಯೇ ಇದನ್ನು ನಿರ್ವಹಿಸುತ್ತಿದ್ದಾರೆ.

ಸ್ಥಳೀಯ ತಾಲೂಕು ಕಛೇರಿಯಲ್ಲದೆ ಇನ್ನಿತರ ಮೂರು ಕಡೆಗಳಲ್ಲಿಯೂ ಆರ್.ಟಿ.ಸಿ ಸೇವಾ ಕೇಂದ್ರಗಳಿದ್ದರೂ ಹೆಚ್ಚಿನ ಜನತೆ ಆರ್.ಟಿ.ಸಿ.ಗಾಗಿ ಆಶ್ರಯಿಸಿರುವುದು ವಂದೇಮಾತರಂ ಸಹಕಾರಿಯನ್ನು ಅನ್ನುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ. ಬೆಳ್ತಂಗಡಿ, ವೇಣೂರು, ನಾರಾವಿ, ಶಿರ್ತಾಡಿ, ಬೆಳುವಾಯಿ ಮತ್ತಿತರ ಕಡೆಗಳಿಂದ ಬರುವ ಗ್ರಾಹಕರು ನೇರವಾಗಿ ವಂದೇಮಾತರಂ ಸಹಕಾರಿಗೆ ಬರುತ್ತಿದ್ದಾರೆ, ಇಲ್ಲಿಯ ಸಿಬ್ಬಂದಿಯ ಕ್ಷಿಪ್ರ ಸೇವೆ ಜನರ ಮನಗೆದ್ದಿರುವುದಕ್ಕೆ ಇದೇ ಸಾಕ್ಷಿಯಾಗಿದೆ.

ಆರ್.ಟಿ.ಸಿ ಗೆಂದು ಬಂದ ಗ್ರಾಹಕರು ಸಹಕಾರಿಯ ಕಾರ್ಯಚಟುವಟಿ–ಕೆಗಳಿಂದ ಪ್ರೇರಿತರಾಗಿ ಇಲ್ಲಿ ಸದಸ್ಯರಾಗಿ, ಶೇರುದಾರರಾಗಿಯೂ ಸೇರಿದ್ದಾರೆ. ಹಲವರು ಪಿಗ್ಮಿ, ಉಳಿತಾಯ ಖಾತೆಗಳನ್ನು ತೆರೆದಿದ್ದಾರೆ. ಆರ್.ಟಿ.ಸಿ ಗೆಂದು ಬಂದವರಿಗೆ ಇಲ್ಲಿ ದಸ್ತಾವೇಜು ನೋಂದಾವಣೆಗೆ ಬೇಕಾಗುವ ಇ–ಸ್ಟಾಂಪ್ ಪೇಪರ್ ಲಭ್ಯವಿರುವುದನ್ನು ಗಮನಿಸಿ ಅದರ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ. ಸಹಕಾರಿಯ ಅಂಗವಾಗಿರುವ ಸ್ವದೇಶಿ ಮಳಿಗೆಗೂ ಭೇಟಿ ನೀಡುವ ಅನೇಕ ಸಾರ್ವಜನಿಕರು ಅಲ್ಲಿನ ಉತ್ಪನ್ನಗಳನ್ನು ಖರೀದಿಸುತ್ತಾರೆ. ಹೀಗೆ ಆರ್.ಟಿ.ಸಿ ಕೇಂದ್ರದಿಂದ ಸಹಕಾರಿಯ ಇತರ ಸೇವೆಗಳು ಜನರಿಗೆ ಪರಿಚಯವಾಗಿ ಬ್ಯಾಂಕಿನ ಆರ್ಥಿಕ ವ್ಯವಹಾರ ವೃದ್ಧಿಗೂ ಪರೋಕ್ಷವಾಗಿ ಕಾರಣವಾಗುತ್ತಿದೆ. ಸಹಕಾರಿಯ ಆರ್.ಟಿ.ಸಿ ಸೇವಾ ಕೇಂದ್ರವಾಗಲಿ, ಇ–ಸ್ಟಾಂಪ್ ಸೌಲಭ್ಯವಾಗಲಿ, ಇತರ ಹಣಕಾಸಿನ ವ್ಯವಹಾರವಾಗಲಿ, ಸ್ವದೇಶಿ ಮಳಿಗೆಯಾಗಲಿ ಇದಕ್ಕೆಲ್ಲ ಇಲ್ಲಿಗೆ ಭೇಟಿ ನೀಡುವ ಸಂತೃಪ್ತ ಗ್ರಾಹಕರೇ ರಾಯಭಾರಿಗಳಾಗಿ ಸಹಕಾರಿಯು ಜನಪ್ರಿಯವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ವಾರದ ಆರು ದಿನಗಳಲ್ಲಿಯೂ ಸಹಕಾರಿಯು ನಿರಂತರಕಾರ್ಯನಿರ್ವಹಿಸುತ್ತಿರುವುದರಿಂದ ಗ್ರಾಹಕರಿಗೂ ಇದು ಅನುಕೂಲಕರವಾಗಿದೆ. ಇದನ್ನು ಗುರುತಿಸಿದ ಸಹಕಾರಿ ಒಕ್ಕೂಟ 2019–2020ನೇ ಸಾಲಿನ 5 ಉತ್ತಮ ಸಹಕಾರಿಗಳಲ್ಲಿ ನಮ್ಮ ಸಹಕಾರಿ ಮೊದಲ ಸ್ಥಾನವನ್ನು ಪಡೆದಿರುವುದು ತುಂಬಾ ಸಂತಸದ ವಿಚಾರ.

# ಗಾಂಧೀ ಜಯಂತಿ ಆಚರಣೆ



**ಉಡುಪಿ :** ಶಾಂತಿನಿಕೇತನ ಸೌಹಾರ್ದ ಸಹಕಾರಿ ನಿ., ಕುಡಿಬೈಲು ಕುಚ್ಚೂರು ಸಹಕಾರಿಯಲ್ಲಿ ಗಾಂಧಿ ಜಯಂತಿ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿ ಅವರ ಜನ್ಮ ದಿನಾಚರಣೆ ಆಚರಣೆ ಮಾಡಲಾಯಿತು. ನಂತರ ಕುಚ್ಚೂರಿನಲ್ಲಿ ಸಹಕಾರಿ ವತಿಯಿಂದ ಸ್ವಚ್ಛತಾ ಕೆಲಸ ಮಾಡಲಾಯಿತು ಹಾಗೂ ಹೆಬ್ರಿ ತಾಲ್ಲೂಕಿನ ಮೂರು ರಸ್ತೆಯಲ್ಲಿ ಸ್ವಚ್ಛತೆ ಮಾಡುವುದರ ಜೊತೆಗೆ ಪಕ್ಕದ ತಂಗುದಾಣಕ್ಕೆ ಬಣ್ಣ ಮಾಡಲಾಯಿತು.



**ಚಾಮರಾಜನಗರ :** ಶ್ರೀ ಮುರಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ನಿ., ಮರಿಯಾಲ, ಚಾಮರಾಜನಗರ ತಾಲ್ಲೂಕು ಇದರ ನೂತನ ಕಛೇರಿಯನ್ನು ಶ್ರೀಶ್ರೀಶ್ರೀ ಇಮ್ಮಡಿ ಮುರಘರಾಜೇಂದ್ರ ಸ್ವಾಮಿಗಳು ಹಾಗೂ ಶ್ರೀಶ್ರೀಶ್ರೀ ಚೆನ್ನಬಸವ ಸ್ವಾಮಿಗಳು ಉದ್ಘಾಟನೆ ಮಾಡಿ ನೂತನ ಕಛೇರಿಯಲ್ಲಿ ಮಹಾತ್ಮ ಗಾಂಧಿಯವರು & ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಜರಿದ್ದರು.

ನಿಮ್ಮ ಪ್ರಶ್ನೆ



ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ.

– ಸಂಪಾದಕರು

– ಶ್ರೀ ಶ್ರೀಕಾಂತ ಬರುವೆ, ಪ್ರಾಂತೀಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ವಿಭಾಗ.

**ಪ್ರಶ್ನೆ 1 : ಸೌಹಾರ್ದ ಸಹಕಾರಿಗಳಲ್ಲಿ ಆಂತರಿಕ ಲೆಕ್ಕಪರಿಶೋಧನೆಯು ಕಡ್ಡಾಯವಾಗಿರುತ್ತದೆಯೇ? ಆಂತರಿಕ ಲೆಕ್ಕಪರಿಶೋಧನೆಯನ್ನು ಸೌಹಾರ್ದ ಸಹಕಾರಿಯ ನಿರ್ದೇಶಕರು ಮಾಡಬಹುದೇ? ಅದೇ ರೀತಿ ಅವರಿಗೆ ಸಂಭಾವನೆಯನ್ನು ಯಾವ ರೀತಿಯಲ್ಲಿ ನಿಗದಿಪಡಿಸಬಹುದು ಮತ್ತು ಹಾಗೆ ಆಂತರಿಕ ಲೆಕ್ಕಪರಿಶೋಧನೆ ಮಾಡುವವರು ಲೆಕ್ಕಪರಿಶೋಧಕರ ವಿದ್ಯಾರ್ಹತೆಯನ್ನು ಹೊಂದಿರಬೇಕೇ?**

*– ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್, ಪರ್ಕಳ, ಉಡುಪಿ.*

**ಉತ್ತರ :** ಸೌಹಾರ್ದ ಸಹಕಾರಿಗಳಲ್ಲಿ ಆಂತರಿಕ ಲೆಕ್ಕಪರಿಶೋಧನೆಯು ಕಡ್ಡಾಯವಲ್ಲ. ಆಂತರಿಕ ಲೆಕ್ಕಪರಿಶೋಧನೆಯನ್ನು ಸೌಹಾರ್ದ ಸಹಕಾರಿಯ ನಿರ್ದೇಶಕರು ಮಾಡುವಂತಿಲ್ಲ. ಆಂತರಿಕ ಲೆಕ್ಕಪರಿಶೋಧಕನ ಸಂಭಾವನೆಯನ್ನು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿರ್ಧರಿಸತಕ್ಕದ್ದು, ಆಂತರಿಕ ಲೆಕ್ಕಪರಿಶೋಧನೆಯನ್ನು ಮಾಡುವವರು ಲೆಕ್ಕಪರಿಶೋಧನೆಯ ಕುರಿತು ಮತ್ತು ಲೆಕ್ಕಪರಿಶೋಧನಾ ಪದ್ಧತಿಗಳ ಕುರಿತು ಆಳವಾದ ಜ್ಞಾನವನ್ನು ಹೊಂದಿರತಕ್ಕದ್ದು, ಅಲ್ಲದೇ ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ, 1997 ರ ಕಲಂ 23(3)(ಬಿ) ರನ್ವಯ ಆಂತರಿಕ ಲೆಕ್ಕಪರಿಶೋಧಕನ ನೇಮಕಾತಿಯು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಆಗಬೇಕಿರುವುದರಿಂದ ಮತ್ತು ಅಪೇಕ್ಷಣೀಯ ಗುಣಮಟ್ಟದ ಲೆಕ್ಕಪರಿಶೋಧನಾ ವರದಿ ಪಡೆಯಬೇಕಿರುವುದರಿಂದ ಆಂತರಿಕ ಲೆಕ್ಕಪರಿಶೋಧಕನು ಸನ್ನದು ಲೆಕ್ಕಪರಿಶೋಧಕನಾಗಿರಬೇಕಾಗಿರುತ್ತದೆ, ಎಂದೇ ಪರಿಭಾವಿಸಬೇಕಾಗಿರುತ್ತದೆ.

**ಪ್ರಶ್ನೆ 2 : ನಿರ್ದೇಶಕರ ಮಂಡಲಿಯಲ್ಲಿ ನಿರ್ದೇಶಕರ ಹುದ್ದೆ ಖಾಲಿಯಾಗಿ ಎಷ್ಟು ಸಮಯದೊಳಗೆ ಭರ್ತಿ ಮಾಡಿಕೊಳ್ಳಬೇಕು? ಚುನಾವಣೆ ಮುಗಿದು ಎರಡೂವರೆ ವರ್ಷ ಕಳೆದ ಮೇಲೆ ಆಡಳಿತ ಮಂಡಲಿಯಲ್ಲಿ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಅಸಾಧ್ಯವಾದ ಸಂದರ್ಭದಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು?**

*– ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್, ಪರ್ಕಳ, ಉಡುಪಿ.*

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ನಿಯಮ ಸಂಖ್ಯೆ 5ಎ ರನ್ವಯ ಸಹಕಾರಿಯ ನಿರ್ದೇಶಕ/ಪ್ರತಿನಿಧಿಯ ಪದದಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ ಆ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯು ಅಂತಹ ರಿಕ್ತತೆ ಅಧಿಕೃತವಾಗಿ ತಿಳಿಯಲ್ಪಟ್ಟ 15 ದಿನಗಳ ಒಳಗಾಗಿ ಕಡ್ಡಾಯವಾಗಿ ಸಹಕಾರಿಯ ಚುನಾವಣಾ ಪ್ರಾಧಿಕಾರಕ್ಕೆ ಅಂತಹ ರಿಕ್ತತೆಯು ಉಂಟಾಗಿರುವ ಮಾಹಿತಿಯನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಆಡಳಿತ ಮಂಡಲಿಯ ಉಳಿದ ಪದಾವಧಿಯು ಎರಡೂವರೆ ವರ್ಷಕ್ಕಿಂತ ಕಡಿಮೆ ಇದ್ದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯು ಅಂತಹ ಆಕಸ್ಮಿಕ ರಿಕ್ತತೆಯನ್ನು ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರ ಒಳಗೆ ನಾಮ ನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳಬಹುದು. ಹೀಗೆ ಉಂಟಾದ ಆಕಸ್ಮಿಕ ರಿಕ್ತತೆಯನ್ನು ಸಹಮತದ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದೆಯೇ ಅಥವಾ ಚುನಾವಣೆ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದೆಯೇ ಎಂದು ಸ್ಪಷ್ಟವಾಗಿ ಅಂತಹ ಆಕಸ್ಮಿಕ ರಿಕ್ತತೆಯು ಅಧಿಕೃತವಾಗಿ ತಿಳಿಯಲ್ಪಟ್ಟ ದಿನಾಂಕದಿಂದ 30 ದಿನಗಳ ಒಳಗೆ ಸಹಕಾರ ಚುನಾವಣೆ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. ಸಹಕಾರಿಯು ಆಕಸ್ಮಿಕ ರಿಕ್ತತೆಗಳನ್ನು ಸಹಮತದ ಮೂಲಕ ಭರ್ತಿ ಮಾಡಿಕೊಳ್ಳಲು ತೀರ್ಮಾನಿಸಿದ್ದಲ್ಲಿ, ಅಂತಹ ಪ್ರಕ್ರಿಯೆಯನ್ನು ಆಕಸ್ಮಿಕ ರಿಕ್ತತೆಯು ಅಧಿಕೃತವಾಗಿ ತಿಳಿಯಲ್ಪಟ್ಟ 60 ದಿನಗಳ ಒಳಗಾಗಿ ಪೂರ್ಣಗೊಳಿಸತಕ್ಕದ್ದು, ಇಲ್ಲದಿದ್ದಲ್ಲಿ ಸಹಕಾರಿ ಚುನಾವಣಾ ಪ್ರಾಧಿಕಾರವು ಖಾಲಿ ಬಿದ್ದ ನಿರ್ದೇಶಕರ ಹುದ್ದೆಗಳಿಗೆ ಖಾಲಿ ಬಿದ್ದ 90 ದಿನಗಳ ಒಳಗಾಗಿ ಚುನಾವಣೆಯನ್ನು ನಡೆಸುತ್ತದೆ. ಈ ಹಿನ್ನೆಲೆಯಲ್ಲಿ ಚುನಾವಣೆ ಮುಗಿದು ಎರಡೂವರೆ ವರ್ಷ ಕಳೆದ ಮೇಲೆ ಆಡಳಿತ ಮಂಡಲಿ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಅಸಾಧ್ಯವಾದ ಸಂದರ್ಭದಲ್ಲಿ ಸಹಕಾರ ಚುನಾವಣಾ ಪ್ರಾಧಿಕಾರವು 90 ದಿನಗಳ ಒಳಗಾಗಿ ಚುನಾವಣೆಯನ್ನು ನಡೆಸುತ್ತದೆ.

# ನಾಯಕತ್ವಕ್ಕೆ ಹೊಸ ಆಯಾಮ – ಹೊಸ ಅವಕಾಶಗಳ ನಿರೀಕ್ಷೆ

ಮೂಲ : ಡಾ॥ ಅನಂತ ರಾಯ್, ಇಂಡಿಯನ್ ಕೋ–ಆಪರೇಟಿವ್ ರಿವ್ಯೂ

ಕನ್ನಡ ಅನುವಾದ : ಮಾಧುರಿ ದೇಶಪಾಂಡೆ

**ಪ್ರಸ್ತುತತೆ :**

ಪ್ರಸ್ತುತ ಪರಿಸ್ಥಿತಿಯಲ್ಲಿ ಕಾರ್ಯಕಾರಿ ನಾಯಕತ್ವವು ಸಾಂಸ್ಥಿಕ ರೂಪದಲ್ಲಿ ಮಾರ್ಪಾಡಾಗುತ್ತಿದೆ, ನವೀನ ವಿಚಾರಗಳು ತಮ್ಮ ಪ್ರಾಬಲ್ಯವನ್ನು ಪ್ರದರ್ಶಿಸುತ್ತಿವೆ. ಒಂದು ಅಧ್ಯಯನದ ಪ್ರಕಾರ ಇಂದಿನ ವ್ಯಾಪಾರ ವ್ಯವಹಾರಗಳಲ್ಲಿ ಇಂದಿನ ಉದ್ಯಮಿಗಳ ಪ್ರಕಾರನಾವಿನ್ಯತೆಯನ್ನು ಹೊಂದಿರುವ ಉದ್ಯಮದಲ್ಲಿ ಶೇಕಡಾ 78% ಬೆಳವಣಿಗೆಯನ್ನು ಕಾಣುತ್ತದೆ ಏಕಂದರೆ ನಾವಿನ್ಯತೆ ಬೆಳವಣಿಗೆಯ ಪ್ರಮುಖ ಅಂಶವಾಗಿರುತ್ತದೆ ಎಂದು ಹೇಳುತ್ತಾರೆ. ಒಬ್ಬ ಒಳ್ಳೆಯ ನಾಯಕನು ತನ್ನ ಅನುಯಾಯಿಗಳಿಗೆ ಒಂದು ಉತ್ತಮ ಗುರಿಯನ್ನು ನಿಗದಿ ಪಡಿಸಿ ಅದನ್ನು ಸಾಧಿಸಿ, ಅನುಯಾಯಿಗಳಿಗೆ ಆ ಗುರಿಯನ್ನು ಸಾಧಿಸಲು ಗುರಿಯನ್ನು ಮಾರ್ಗದರ್ಶನ ಮಾಡುವವನಾಗಿರುತ್ತಾನೆ. ಒಬ್ಬ ಒಳ್ಳೆಯ ನಾಯಕನು ತನ್ನ ಕೆಲಸಗಾರರೊಂದಿಗೆ ಭಾವನಾತ್ಮಕವಾಗಿ ಬೆರೆತಿರುತ್ತಾನೆ ಮತ್ತು ಅವರ ಮನಸ್ಸಿನಾಳಕ್ಕೆ ತಲುಪುವಂತಹವನಾಗಿರುತ್ತಾನೆ. ಉತ್ತಮ ನಾಯಕನೊಬ್ಬನಿಗೆ ಭವಿಷ್ಯವನ್ನು ಕಾಣುವ ಸಾಮರ್ಥ್ಯವಿರುತ್ತದೆ. ಡೇವಿಡ್ ಹಾರ್ತ್ ಮತ್ತು ಡಾನ್ ಬುಚ್‌ನರ್ ಅವರು ಹೇಳುವಂತೆ "ಹೊಸತನದ ನಾಯಕತ್ವ ಗುಣ ಹೊಂದಿರುವ ನಾಯಕನು ನವೀನ ವಿಚಾರಗಳನ್ನು ಪ್ರೋತ್ಸಾಹಿಸಿ ನವೀನತೆಯ ಆವಿಷ್ಕಾರವನ್ನು ಮಾಡುವವರಿಗೆ ಹೊಸ ಹಾದಿಗಳನ್ನು ಹುಡುಕವವರಿಗೆ, ಬೆಳವಣಿಗೆಯ ಹಾದಿವನ್ನು ತಮ್ಮದಾಗಿಸಿಕೊಂಡು ಮುನ್ನಗ್ಗುವವರ ಬೆನ್ನೆಲುಬಾಗಿರುತ್ತಾನೆ". ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಾವಿನ್ಯತೆಯನ್ನು ಹೊಂದಿರುವ ನಾಯಕತ್ವವು ಹೊಸದಾಗಿ ಯೋಚಿಸುವ ಮತ್ತು ನವೀನ್ಯತೆಯ ಮತ್ತು ಉತ್ತಮ ವಿಚಾರಗಳನ್ನು ಸಂರಚನೆ ಮಾಡುವ ಸಾಮರ್ಥ್ಯವನ್ನು ಹೊಂದಿ ಸಕರಾತ್ಮಕ ಫಲಿತಾಂಶವನ್ನು ತಂದುಕೊಡುವ ಸಾಮರ್ಥ್ಯವಿರುತ್ತದೆ. ಈ ರೀತಿಯ ನಾವಿನ್ಯತೆಯುಳ್ಳ ನಾಯಕತ್ವವು ಕೆಲಸಗಾರರ ಸಾಮರ್ಥ್ಯವನ್ನು ಗುರುತಿಸಿ ಅವರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗಿರುತ್ತದೆ. ಮತ್ತು ಕೆಲಸಗಾರರ ರಚನಾತ್ಮಕ ಕೌಶಲ್ಯವನ್ನು ಸದುಪಯೋಗ ಪಡೆಸಿಕೊಂಡು ಉದ್ದಿಮೆಯನ್ನು ಯಶಸ್ಸಿನಡೆಗೆ ಮುನ್ನಡೆಸುವ ಸಾಮರ್ಥ್ಯವನ್ನೂ ಹೊಂದಿರುತ್ತದೆ. ನಾವಿನ್ಯತೆಯುಳ್ಳ ನಾಯಕ್ವವು ತನ್ನ ಕೆಲಸಗಾರರನ್ನು ವಿವಿಧ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿ ಅವರ ಕಾರ್ಯಗಳಿಂದ ಮತ್ತು ಅವರ ಪ್ರತಿಭೆಗಳಿಂದ ಹೊರಹೊಮ್ಮುವ ಕೌಶಲ್ಯವನ್ನು ಬಳಸಿಕೊಂಡು ಉತ್ತಮವಾದ ಫಲಿತಾಂಶವನ್ನು ಕೊಡುವ ಯಶಸ್ವಿ ಉದ್ದಿಮೆಯನ್ನು ಸ್ಥಾಪಿಸುವಲ್ಲಿ ಸಹಕಾರಿಯಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ನಮಗೆ ಗಂಭೀರವಾದ ಪರಿಸ್ಥಿತಿಯನ್ನು ರಚನಾತ್ಮಕವಾಗಿ ಉತ್ತಮ ಫಲಿತಾಂಶ ಬರುವತ್ತ ಕೊಂಡೊಯ್ಯುವ ನಾವಿನ್ಯತೆಯನ್ನು ಹೊಂದಿರುವ ನಾಯಕ್ವದ ಅವಶ್ಯಕೆ ನಮಗೆ ಇದೆ.

ಪ್ರಸ್ತುತ ಕೋರೊನಾ ಮಹಾಮಾರಿ ಆರ್ಥಿಕ ಹಿಂಜರಿತಕ್ಕೆ ಕಾರಣವಾಗಿದೆ ಮತ್ತು ಜಾಗತಿಕ ಆರ್ಥಿಕತೆಯನ್ನು ನಿಂತ ನೀರಾಗಿಸಿದೆ. ದಶಕದಲ್ಲೇ ಅತೀ ದುಃಸ್ಥಿತಿಯ ಆರ್ಥಿಕತೆಯನ್ನು ನಾವು ಇಂದು ಎದುರಿಸುತ್ತಿದ್ದೇವೆ. ಐಎಮ್–ಎಫ್‌ರವರು ಹೇಳುವ ಪ್ರಕಾರ "ಮಾನವೀಯತೆಗೆ ಕತ್ತಲು ಕವಿದ ಸಮಯ" (ಇತ್ತೀಚಿಗೆ ಐಎಮ್‌ಎಫ್‌ನ ಎಮ್ ಡಿ ಕ್ರಿಸ್ಟಲೈನ್ ಜಿಂಯೋರ್ಜೀವಾರವರ ಏಪ್ರಿಲ್ 5, 2020ರ ಹೇಳಿಕೆ) ಮಾನ್ಯ ಪ್ರಧಾನಮಂತ್ರಿಗಳ ಹೇಳಿಕೆಯಲ್ಲಿ ಪುನಃ ಬಲವರ್ಧನೆಯ ಮಾಡುವ ಸಲುವಾಗಿ ಕರೆ ನೀಡುತ್ತಾ (ಟೈಮ್ಸ್ ಆಫ್ ಇಂಡಿಯಾ ಏಪ್ರಿಲ್ 20, 2020) ಈ ಮಹಾಮಾರಿ ಕೋರೋನಾ ವೈರಸ್ ಸಾಮಾನ್ಯ ಜನರ ವೃತ್ತಿಯನ್ನು ಜೀವನ ಶೈಲಿಯನ್ನು ಬದಲಿಸಿ ಬಿಟ್ಟಿದೆ ಮತ್ತು ಈ ಸಮಯದ ಅವಶ್ಯಕತೆ ಎಂದರೆ ಸುಲಭ ಮತ್ತು ಸರಳವಾದ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವುದಾಗಿದೆ. ಇಂದು ವಿಶ್ವವು ಹೊಸದಾದ ಉದ್ಯಮಗಳ ಮಾದರಿಯನ್ನು ಅನುಸರಿಸಿ ನಾವಿನ್ಯತೆಯುಕ್ತವಾದ ಪದ್ಧತಿಯನ್ನು ಅನುಸರಿಸಿ ಹೊಸ ಕೆಲಸದ ಸಂಸ್ಕೃತಿಗೆ ನಮ್ಮ ಉದ್ಯಮಗಳು ಜನ್ಮ ನೀಡಬೇಕಾಗಿದೆ. ತಂತ್ರಗಾರಿಕಾಗಾರರು ಸರಿಯಾದ ಕಹಳೆಯ ಮೂಲಕ ಸರಿಯಾದ ತಂತ್ರಗಾರಿಕೆಯ ಮೂಲಕ ಹಿನ್ನಡೆಗೆ ಒಳಗಾಗಿರುವ ಆರ್ಥಿಕತೆಯನ್ನು ಸಾಮಾನ್ಯ ಸ್ಥಿತಿಗೆ ತರಲು ಪರಿಣಾಮಕಾರಿಯಾದ ಕಾರ್ಯ ನಿರ್ವಹಣಾ ವೈಖರಿಯೊಂದಿಗೆ ಪರಿಸ್ಥಿತಿಯ ನಿಯಂತ್ರಣವನ್ನು ನಾವಿನ್ಯತೆಯುಕ್ತವಾದ ನಾಯಕತ್ವದಿಂದ ತರಬಹುದಾಗಿದೆ. "ಹೊಸ ರೀತಿಯ ಸಮಸ್ಯೆಯನ್ನು ನಿವಾರಿಸಲು ಹೊಸಬಗೆಯ ತತ್ವಗಳನ್ನು ಅನುಸರಿಸುವ ಬೇಡಿಕೆ" ಎಂದು ಬಹಳ ಸೊಗಸಾಗಿ ಹೇಳಲಾಗಿದೆ. ಹೊಸದಾದ ತಂತ್ರಗಾರಿಗೆಯನ್ನು ಅನುಸರಿಸುವ ವ್ಯವಸ್ಥಾಪಕರಾಗಲು ನೀವು ಬರೇ ನಿರ್ವಾಹಕರಾದರೆ ಸಾಕಾಗುವುದಿಲ್ಲ ನಿಮ್ಮಲ್ಲಿ ವಿಶೇಷವಾದ ಕೌಶಲ್ಯಗಳು ಇರಬೇಕಾಗುತ್ತದೆ. ಸದ್ಯದ ಹೊಸ ಆರ್ಥಿಕ ಪರಿಸ್ಥಿತಿಯಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸಾಮಾನ್ಯ ಸ್ಥಿತಿಗೆ

ತರುವುದು ಹೊಸ ಆವಿಷ್ಕಾರಕ್ಕೆ ಸಮನಾದ ಕಾರ್ಯವಾಗಿದೆ. ಆರ್ಥಿಕ ಹಿಂಜರಿತದಿಂದ ನಿಂತ ನೀರಾಗಿರುವ ಆರ್ಥಿಕ ಪರಿಸ್ಥಿತಿಯು ಈ ಮಹಾಮಾ–ರಿಯ ಆಘಾತದಿಂದ ಉಂಟಾಗಿರುವ ಸುಧಾರಿಸಿಕೊಳ್ಳಲು ತಮ್ಮ ಆಡಳಿತ ಪದ್ಧತಿಯಲ್ಲಿ ಕಾರ್ಯ ನಿರ್ವಹಣಾ ಶೈಲಿಯಲ್ಲಿ ವ್ಯಾಪಕ ಬದಲಾವಣೆಯನ್ನು ತಂದು ಆರ್ಥಿಕತೆಯನ್ನು ಬಲ ಪಡಿಸುವ ಹೊಸ ವಿಚಾರಧಾರೆಗಳುಳ್ಳ ನಾಯಕತ್ವದ ಅವಶ್ಯಕತೆ ಇದೆ.

**ಪ್ರವರ್ತಕರು :**

- ನಾವಿನ್ಯತೆಯ ನಾಯಕತ್ವವು ಸೃಜನಾತ್ಮಕತೆಯನ್ನು ಉದ್ದೇಶ ಮತ್ತು ಸೀಮಿತತೆಯ ಮೂಲಕ ಪ್ರೋತ್ಸಾಹಿಸುತ್ತದೆ.
- ನಾವಿನ್ಯತೆಯ ನಾಯಕತ್ವವು ಸ್ವಾಭಾವಿಕವಾದ ಪ್ರೇರಣೆಯ ನೀಡುವುದಕ್ಕೆ ಉತ್ತೇಜನ ನೀಡುತ್ತದೆ.
- ನಾವಿನ್ಯತೆಯ ನಾಯಕತ್ವವು "ಮುಖ್ಯ ಪ್ರೇರಣಾ ಅಧಿಕಾರಿಯ"ಯಂತೆ ಕೆಲಸ ನಿರ್ವಹಿಸುತ್ತದೆ.
- ಸಂಸ್ಥೆಯ ನಾವಿನ್ಯತೆಯ ಸಂಸ್ಕೃತಿಯನ್ನು ಸಕ್ರಿಯಗೊಳಿಸುತ್ತದೆ.
- ನಾವಿನ್ಯತಾ ಪ್ರಧಾನ ಆಡಳಿತವು ಎಲ್ಲ ಸ್ಥರದಲ್ಲಿ ಇರಬೇಕು – ಇದು ನಮ್ಮನ್ನು ನಾವು ಪುನಃ ವಿಮರ್ಶಿಸಿಕೊಂಡಂತೆ
- ಬಹಳಷ್ಟು ಸಂಸ್ಥೆಗಳು ತಮ್ಮ ನಾಯಕರಿಂದ ಹೊಸ ಹೊಸ ಸೃಜನಾತ್ಮಕ ಗುಂಪುಗಳ ಅಥವಾ ಕೆಲಸಗಾರರ ತಂಡದ ನಿರ್ಮಾಣವನ್ನು ಬಯಸುತ್ತಾರೆ.

ನಾವಿನ್ಯತೆಯುಕ್ತ ನಾಯಕತ್ವವನ್ನು ಹೊಂದಿರುವವರು ತಮ್ಮ ಅದ್ವಿತೀಯ ಉಪಾಯಗಳಿಂದ ದೂರದೃಷ್ಟಿಯ ದೃಷ್ಟಿಕೋನದಿಂದ ಬಹಳ ಮುಖ್ಯವಾಗಿ ಜನರನ್ನು ಪ್ರೇರಣಾದಾಯಕ ವಿಚಾರಗಳಿಂದ ಕಾರ್ಯ ಪ್ರವರ್ತರನ್ನಾಗಿ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಒಬ್ಬ ನಾವಿನ್ಯತೆಯುಕ್ತ ನಾಯತ್ವವು ಸೃಜನಶೀಲ ಪ್ರತಿಭೆಯುಳ್ಳವರಿಗಿಂತ ಹೆಚ್ಚಿನ ಮಹತ್ವವುಳ್ಳದ್ದ ಏಕೆಂದರೆ ಅಂತಹ ನಾಯಕತ್ವಕ್ಕೆ ಒಂದು ಉತ್ತಮ ದೃಷ್ಟಿಕೋನವನ್ನು ಜನರಿಗೆ ಹೊಸ ಹೊಸ ಉಪಾಯಗಳಿಂದ ಅಥವಾ ಉಪಾಯಗಳ ಭಂಡಾರದಿಂದ ಮುನ್ನಡೆಸುವ ಸಾಮರ್ಥ್ಯವಿರುತ್ತದೆ. ನಾವಿನ್ಯತೆಯುಕ್ತ ನಾಯಕತ್ವಕ್ಕೆ ತಾವು ಯೋಚಿಸುವ ಉಪಾಯದ ಮೂಲಕ ಜನ ಸಾಮಾನ್ಯರನ್ನು ಪ್ರಭಾವಿರನ್ನಾಗಿ ಮಾಡಿ ಹೊಸ ರೀತಿಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಯೋಚಿಸುವಂತೆ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತದೆ, ಈ ರೀತಿಯಿಂದಾಗಿ ಸಕಾರಾತ್ಮಕ ಫಲಿತಾಂಶವನ್ನು ತರುವ ಸಾಮರ್ಥ್ಯವೂ ಇರುತ್ತದೆ. ನಾವಿನ್ಯತೆಯುಕ್ತ ನಾಯಕತ್ವಕ್ಕೆ ಕೆಲಸಗಾರರಲ್ಲಿರುವ ಸಾಮರ್ಥ್ಯವನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡಿ ಅವರ ಸಾಮರ್ಥ್ಯವನ್ನು ಸರಿಯಾಗಿ ಉಪಯೋಗಿಸಿಕೊಂಡು ಯಶಸ್ವಿನತ್ತ ಮುನ್ನಡೆಯುವ ಗುಣವಿರುತ್ತದೆ. ಪ್ರತಿಯೊಂದು ಯಶಸ್ವಿ ಉದ್ಯಮದವು ಆರಂಭವಾದಾಗ ಅದರ ಹಿಂದ ನಾವಿನ್ಯತೆಯುಕ್ತ ನಾಯಕತ್ವದೊಂದಿಗೆ ಈ ಕೆಳಗಿನ ಅಂಶಗಳು ಇರುತ್ತವೆ; ನವೀನ ತಂತ್ರಗಾರಿಕೆ, ನಾವಿನ್ಯಯುಕ್ತ ಹೊಸ ಕೆಲಸದ ಸಂಸ್ಕೃತಿ, ಹೆಚ್ಚು ಹೆಚ್ಚು ನವೀನತೆಯ ಪ್ರಯೋಗಗಳು, ನಿರಂತರವಾಗಿ ಸುಧಾರಣಾ ಕ್ರಮಗಳು ಮತ್ತು ಆಮೂಲಾಗ್ರ ನಾವಿನ್ಯತೆ. ನಾವು ಗಮನೀಸದೇ ಇರುವ ಸಮಯದಲ್ಲಿ ಅನಾಹುತಗಳು ಬಹಳ ಶೀಘ್ರವಾಗಿ ನಡೆದು ಹೋಗುತ್ತವೆ. ಇದೇ ರೀತಿಯಾಗಿ ಕೋರೋನಾ ವೈರಸ್ ಸ್ಥಾನೀಯವಾಗಿ ಹೊಸರೀತಿಯಿಂದ ಬಹಳ ಬೇಗ ಹರಡಿ ಮಹಾಮಾರಿಯ ರೂಪವನ್ನು ತೆಗೆದುಕೊಂಡಿತು. ಆದ್ದರಿಂದ ನಾವಿನ್ಯತೆಯುಕ್ತ ನಾಯಕತ್ವಕವು ನಮ್ಮನ್ನು ತನ್ನ ಉತ್ತಮ ದೃಷ್ಟಿಕೋನದಿಂದ ಈ ಜನರನ್ನು ಅಂದರೆ ತನ್ನ ಸಂಪರ್ಕಕ್ಕೆ ಬರುವ ಸದಸ್ಯರು, ಪಾಲುದಾರರು ಮತ್ತು ತನ್ನ ಸರಬರಾಜು ಸರಪಳಿಯಲ್ಲಿ ಬರುವ ಜನರೊಂದಿಗೆ ಸಹಯೋಗ ಮತ್ತು ಸಹಕಾರದೊಂದಿಗೆ ಸಮಸ್ಯೆಯ ಪರಿಹಾರದೆಡೆಯ ಮುನ್ನುಗ್ಗಲು ತಳ್ಳುತ್ತದೆ.

ನಾವಿನ್ಯತೆಯುಕ್ತ ಆಡಳಿತವೆಂದರೆ ಹೊಸ ನಿರ್ವಹಣಾ ತಂಡ ಮತ್ತು ಹೊಸ ಕಾರ್ಯ ನಿರ್ವಹಣಾ ತಂತ್ರದ ಮಿಶ್ರಣವಾಗಿರುತ್ತದೆ. ಇದರಲ್ಲಿ ಸಾಮಗ್ರಿಗಳು, ಕಾರ್ಯವಿಧಾನ, ಮಾರುಕಟ್ಟೆ ಮತ್ತು ಸಂಸ್ಥಿಕ ಎಲ್ಲ ಸ್ಥಳಗಳಲ್ಲೂ ನಾವಿನ್ಯತೆಯನ್ನು ತರುವುದಾಗಿರುತ್ತದೆ, ಇದು ಒಂದು ರೀತಿಯ ಹೊಸದಾದ ತತ್ವ ಶಾಸ್ತ್ರ ವಿದ್ದಂತೆ ಇದರಲ್ಲಿ ಹಲವು ನಾಯಕರುಗಳ ಮಿಶ್ರಣವು ತನ್ನ ಕೆಲಸಗಾರರನ್ನು ತಮ್ಮ ಹೊಸ ರೀತಿಯ ಉಪಾಯಗಳಿಂದ ಪ್ರಭಾವಿತರನ್ನಾಗಿ ಮಾಡಿ ಉತ್ಪಾದನೆಯಲ್ಲಿ ಗಮನೀಯ ಏರಿಕೆಯನ್ನು ತಂದು ಕ್ರಿಯಾತ್ಮಕವಾಗಿ ಹೊಸ ರೀತಿಯಿಂದ ಉತ್ತಮ ಸೇವೆಯನ್ನು ನೀಡುವಲ್ಲಿ ಸಂಸ್ಥೆಯ ಅಭಿವೃದ್ಧಿಗೆ ಪ್ರೇರಣೆಯನ್ನು ನೀಡುತ್ತಾರೆ. ನಾವಿನ್ಯತೆಯುಕ್ತ ನಾಯಕತ್ವವು ಸಂಸ್ಥೆಯ ಅಭಿವೃದ್ಧಿಯ ಗುರಿಯನ್ನು ತಲುಪಲು ತನ್ನ ಉತ್ತಮ ದೃಷ್ಟಿಕೋನದಿಂದ ಮತ್ತು ತಂತ್ರಗಾರಿಕೆಯಿಂದ ಸಂಸ್ಥೆಯ ಯಶಸ್ಸಿನ ಹಾದಿಗೆ ಮಾರ್ಗದರ್ಶಕನಾಗಿ ನಿಂತು ಸಂಸ್ಥೆ ಅಥವಾ ಸಮೂಹದ ಯಶಸ್ಸನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾನೆ (ಇಎನ್.ವಿಕಿಪೊಡಿಯಾ.ಒಆರ್‌ಜಿ.ವಿಕಿ/ನಾವಿನ್ಯತೆಯುಕ್ತ/ನಾಯಕತ್ವ)

ಅದು ಏನೇ ಇರಲಿ, ವ್ಯವಸ್ಥಾಪಕರು ತಮ್ಮ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೇ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಮಾರುಕಟ್ಟೆಯ ಬೇಡಿಕೆಯ ಅನುಸಾರ ಪೂರೈಸಬೇಕಾಗುತ್ತದೆ. ನಾವಿನ್ಯತೆಯುಕ್ತ ನಾಯಕತ್ವವು ತಮ್ಮ ದೂರದೃಷ್ಟಿಯಿಂದ ಭವಿಷ್ಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು

ದೀರ್ಘಕಾಲಿಕ ಯೋಜನೆಗಳ ನಿರ್ವಹಣೆಯಿಂದ ಉತ್ತಮವಾಗಿ ಗುರಿಯನ್ನು ತಲುಪುತ್ತಾರೆ. ಅವರು ತಮ್ಮ ಕೆಲಸಗಾರರಲ್ಲಿ ವಿಶ್ವಾಸವನ್ನು ಇಟ್ಟು ಅವರ ವಿಶ್ವಾಸವನ್ನು ಗಳಿಸುವಲ್ಲಿ ಸಮರ್ಥರಾಗಿರುತ್ತಾರೆ. ಇಂತಹ ನಾಯಕತ್ವ ಗುಣವುಳ್ಳ ನಾಯಕರು ಒಂದು ರೀತಿಯ ವ್ಯವಹಾರ ವ್ಯಾಪಾರವನ್ನು ಮಾಡದೇ ಬದಲೀ ವ್ಯವಸ್ಥೆಯಯನ್ನು ಹೊಂದಿರುತ್ತಾರೆ. ಇದು ಗಣಕೀಕರಣದ ಮೂಲಕ ವಸ್ತುತಃ ಅಥವಾ ನೇರವಾಗಿ ಸಮಯಕ್ಕೆ ಸರಿಯಾಗಿ ಸಾಮಗ್ರಿಗಳನ್ನು ಪೂರೈಸುವ ತಂತ್ರವನ್ನು ಅನುಸರಿಸುತ್ತಾರೆ.

**ನಿರ್ಣಾಯಕ ನಾಯಕತ್ವದ ಕೌಶಲ್ಯಗಳು :**

ಫ್ರೋರ್ಬ್ಸ್ ಡಾಟ್ ಕಾಮ್‌ನ ರಾಬರ್ಟ್ ಟ್ರಕ್ಕರ್‌ರವರು ಹೇಳುವ ಅತಿ ಮುಖ್ಯ ಆರು ನಾವಿನ್ಯತೆಯ ನಾಯಕತ್ವ ಕೌಶಲ್ಯ ಗುಣಗಳು ಈ ರೀತಿಯಾಗಿವೆ :

- ಎಲ್ಲಿ ಅವಕಾಶ ಸಿಗುವುದೊ ಅದನ್ನು ಬಾಚಿಕೊಳ್ಳುವ ವಿಚಾರಧಾರೆ (ಯಾವುದೇ ಸ್ಥಳದಲ್ಲಿ ಸಮಸ್ಯೆಯ ಸಂಭಾವನೆಯ ಬಗ್ಗೆ ಅಥವಾ ಸಮಸ್ಯೆಗಳನ್ನು ಗುರುತಿಸುವುದು, ನಿಮಗೆ ಸಂಭಾವನೆ ಕಂಡಾಗ)
- ಆಕ್ರಮಕಣಕಾರಿ ಊಹೆಗಳನ್ನು ಅಳವಡಿಸಿಕೊಳ್ಳುವುದು (ಜನರಿಗೆ ಊಹೆಗಳ ಮೂಲಕ ಹೆದರುವುದರಿಂದ ದೂರ ಮಾಡುವುದು, ಗ್ರಹಿಕೆಯ ಅಡ್ಡದಾರಿ ಹಿಡಿಯದಂತೆ ನೋಡಿಕೊಳ್ಳುವುದು)
- ಪ್ರತಿಯೊಬ್ಬ ಗ್ರಾಹಕರೊಡನೆಯೂ ಒಂದೊಳ್ಳೆ ಅನುಭೂತಿಯನ್ನು ಇಟ್ಟುಕೊಳ್ಳುವುದು (ಸಂಪರ್ಕದಲ್ಲಿ ಬರುವ ಕಟ್ಟಕಡೆಯ ವ್ಯಕ್ತಿಯೊಂದಿಗೆ ಕೂಡ ಉತ್ತಮ ಸಂಬಂಧವನ್ನು ಬೆಳೆಸುವುದು)
- ಯೋಚಿಸದೇ ಇರುವ ರೀತಿಯ ಉಪಾಯಗಳನ್ನು ಮಾಡುವುದರ ಮೂಲಕ ಗುರಿಯನ್ನು ತಲುಪುವುದು (ಸಂಪ್ರಾದಾಯಿಕ ಪದ್ಧತಿಯನ್ನು ಬಿಟ್ಟು ಹೊಸದಾಗಿ ಯೋಚಿಸುವುದು)
- ನಿಮ್ಮ ಆಲೋಚನಾ ಶಕ್ತಿಯನ್ನು ಸದಾ ಕಾರ್ಯ ನಿರ್ವಹಣೆಗೆ ಒಳ ಪಡಿಸುವುದು ( ಆಲೋಚನೆಯ ಭಂಡಾರ)
- ಪದಾರ್ಥಗಳನನ್ನು ಜನರಿಗೆ ಮಾರಾಟ ಮಾಡುವ ಕೌಶಲ್ಯದಲ್ಲಿ ಪ್ರಾವಿಣ್ಯತೆಯನ್ನು ಪಡೆದಿರುವುದು (ಹೊಸ ಉಪಾಯಗಳೊಂದಿಗೆ ಮಾರಾಟ)

**ಡೇವಿಡ್ ಮತ್ತು ಡಾನ್‌ವರು ನಾವಿನ್ಯತೆಯ ನಾಯಕತ್ವದಲ್ಲಿ ನೋಡಿದ ಪ್ರಮುಖ ಅಂಶಗಳು :**

ಆಡಳಿತದಲ್ಲಿ ನಾವಿನ್ಯತೆಯು ಅಮಿತವಾದ ಯಶಸ್ಸನ್ನು ಪಡೆಯುತ್ತದೆ ಎಂಬುದನ್ನು ಕೇಳುತ್ತಿರುತ್ತೇವೆ. ಈಗ ಮುಂದಿನ ಪ್ರಶ್ನೆ ಏನೆಂದರೆ ಆಡಳಿತದಲ್ಲಿ ನಾವಿನ್ಯತೆಯನ್ನು ಹೇಗೆ ತರುವುದು? ಇಲ್ಲಿ ಕೆಲವು ವಿಷಯಗಳನ್ನು ಗಮನಿಸಬೇಕು

1. ನಾವಿನ್ಯತೆಯ ವಿಧಾನಗಳಿಂದ ನಾಯಕತ್ವವನ್ನು ನಿರ್ವಹಿಸುವುದು.
2. ನಾವಿನ್ಯತೆಯನ್ನು ಪಡೆಯಲು ನಾಯಕತ್ವವನ್ನು ನಿರ್ವಹಿಸುವುದು.

- ದೊಡ್ಡ ಸಮಸ್ಯೆಗಳನ್ನು ಶ್ರದ್ಧೆಯಿಂದ ಬದ್ಧತೆಯಿಂದ ನಿರ್ವಹಿಸುವುದು
- ಹೊಸ ಹೊಸ ತತ್ವಗಳನ್ನು ಹುಡುಕುವುದು
- ಪಾರಂಪರಾಗತವಾಗಿ ನಡೆಸುವ ಆಡಳಿತದ ಪದ್ಧತಿಯನ್ನು ಪುನಃ ಸಂರಚಿಸುವುದು
- ಸಾಮ್ಯತೆಯ ಗುಣಗಳಿಗೆ ಪ್ರೋತ್ಸಾಹಿಸುವುದು (ಹೊಸ ಪರ್ಯಾಯ ನಾಯಕತ್ವವನ್ನು ಕೆಲಸಗಾರರಲ್ಲಿ ಹುಡುಕುವುದು)
- ಈ ಎಲ್ಲ ನಾವಿನ್ಯತೆಯ ಕ್ರಮಗಳಿಗೆ ಅನುಮೋದನೆಯನ್ನು ಪಡೆಯುವುದು

ನಾವಿನ್ಯತೆಯ ನಾಯಕತ್ವ ಗುಣವುಳ್ಳ ನಾಯಕರ ವಿಶಿಷ್ಟವಾದ 10 ಗುಣಗಳು (ಅವರೋಹಣ ಕ್ರಮದಲ್ಲಿ)

- ಅತಿ ಉತ್ತಮವಾದ ಕಾರ್ಯತಂತ್ರದ ದೃಷ್ಟಿಕೋರಣವನ್ನು ಪ್ರದರ್ಶಿಸುತ್ತಾರೆ
- ಗ್ರಾಹಕರ ಬಗೆಗೆ ಆಳವಾದ ಮತ್ತು ಬಲವಾದ ಅಧ್ಯಯನವನ್ನು ಹೊಂದಿರುತ್ತಾರೆ
- ಪರಸ್ಪರ ನಂಬಿಕೆ ವಾತಾವ್ಯಣವನ್ನು ಸೃಷ್ಟಿಸುತ್ತಾರೆ
- ಸಂಸ್ಥೆ ಮತ್ತು ಗ್ರಾಹಕರ ಪರವಾದ ನಿಲುವನ್ನು ತೆಗೆದುಕೊಳ್ಳುವಲ್ಲಿ ಯಾವುದೇ ಹಿಂಜರಿಕೆ ಅಥವಾ ಭಯವನ್ನು ಪ್ರದರ್ಶಿಸದೇ ಪ್ರಾಮಾಣಿಕವಾಗಿ ಮುನ್ನುಗ್ಗುವುದು
- ಉತ್ತಮ ಸಂಪರ್ಕ ಕೌಶಲ್ಯವನ್ನು ಹೊಂದಿರುವವರಲ್ಲಿ ವಿಶ್ವಾಸವನ್ನಿಡುವ ಸಂಸ್ಕೃತಿಯನ್ನು ಎತ್ತಿ ಹಿಡಿಯುವುದು
- ಮನವೊಲಿಸುವ ಕಲೆಯನ್ನು ಪ್ರದರ್ಶಿಸುವವರು
- ನೀಡಿದ ಗುರಿಯನ್ನು ದಾಟಿ ಸಾಧನೆಯನ್ನು ಮಾಡುವ ಕೌಶಲ್ಯವನ್ನು ಹೊಂದಿರುವವರು
- ತ್ವರಿತವಾಗಿ ಕೆಲಸವಾಗುವುದುಕ್ಕೆ ಒತ್ತು ನೀಡುವವರು
- ಬಿಚ್ಚು ಮನಸ್ಸಿನಿಂದ ತಮ್ಮ ಸಂಪರ್ಕ ಕಲೆಯನ್ನು ಬಳಸುವವರು
- ತಮ್ಮ ಕಾರ್ಯ ಮತ್ತು ಕೃತಿಯಿಂದ ಬೇರೆಯವರಿಗೆ ಸ್ಫೂರ್ತಿಯಿಂದ ಪ್ರೇರಣಾದಾಯಕವಾಗಿ ನಡೆದುಕೊಳ್ಳುವವರು

**ಸಂಶೋಧನೆ :** ನಾವಿನ್ಯತೆಯ ನಾಯಕತ್ವ ಹೊಂದಿರುವವರ 10 ಪ್ರಮುಖ

ಗುಣಗಳು, ಜಾಕ್ ಜೆನ್‌ಗರ್ ಮತ್ತು ಜೋಸಫ್ ಪೋಕ್‌ಮನ್‌ರವರ ರಚಿತವಾದ) ಹಾರ್ವರ್ಡ್ ಬಿಸಿನೆಸ್ ರಿವ್ಯೂ ಎಚ್‌ಬಿಆರ್. ಒಆರ್‌ಜಿ/2014/ ಸಂಶೋಧನೆ – ನಾವಿನ್ಯತೆಯ ನಾಯಕತ್ವ ಹೊಂದಿರುವವರ 10 ಪ್ರಮುಖ ಗುಣಗಳು

**ಸಹಭಾಗಿತ್ವ ಮತ್ತು ಸಹಕಾರ :**

ಪ್ರಸ್ತುತ ಸಮಯದಲ್ಲಿ ಆಗುತ್ತಿರುವ ತೀವ್ರ ತಾಂತ್ರಿಕ ಮತ್ತು ಪ್ರಗತಿಶೀಲ ಬೆಳವಣಿಗೆ, ಗ್ರಾಹಕರ ಬೇಡಿಕೆ ಮತ್ತು ನಡವಳಿಕೆಯ ಕಾರಣದಿದ ನಾವಿನ್ಯತೆಯ ಮಹತ್ವ ಹೆಚ್ಚಾಗಿದೆ. ಸಹಕಾರಿ ಕ್ಷೇತ್ರವು ಬಹಳ ಕ್ರಿಯಾಶೀಲ ಕ್ಷೇತ್ರವಾಗಿದ್ದು ಇಲ್ಲಿ ಬೆಳವಣಿಗೆಗೆ ನಾವಿನ್ಯತೆಯು ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಈ ಕ್ಷೇತ್ರದಲ್ಲಿ ನಾಯಕತ್ವವು ಸಮುದಾಯದ ಏಳಿಗೆಗಾಗಿ ಜಾಗರೂಕತೆಯಿಂದ ಬದ್ಧತೆಯನ್ನು ತೋರಿಸಬೇಕಾಗುತ್ತದೆ. ಸಹಕಾರಿ ಕ್ಷೇತ್ರದಲ್ಲಿ ನಾಯಕರು, ತಮ್ಮನ್ನು ತಾವು ತೊಡಗಿಸಿಕೊಂಡು ವಿಭಿನ್ನ ರೀತಿಯಿಂದ ಗ್ರಹಿಸಿ ತಮ್ಮಲ್ಲಿರುವ ಸಾಮರ್ಥ್ಯ ಮತ್ತು ಬಲವನ್ನು ಸಹಕಾರಿ ಸಂಸ್ಥೆಗನ್ನು ಪುನಃ ಸ್ಥಾಪಿಸಲು/ ಬಲಪಡಿಸಲು ತೊಡಗಿಸಿಕೊಳ್ಳಬೇಕಾಗಿದೆ. ಕೋಪಾಕ್ ನಲ್ಲಿ ಹೇಳಿದಂತೆ (ಜಗತ್ತನ್ನು ಬದಲಿಸುವ : ಸಹಕಾರಿ 2030): ಸಹಕಾರಿ ಸಂಸ್ಥೆಗಳು ಆರ್ಥಿಕತೆ ಮತ್ತು ಸಾಮಾಜಿಕತೆಯ ಶಕ್ತಿಯುತ ಮಾಧ್ಯಮಗಳೆನ್ನಬಹುದು, ಪ್ರಸ್ತುತ ಪರಿಸ್ಥಿತಿಯಲ್ಲಿ ವಿಶ್ವದ ಬಹಳಷ್ಟು ರಾಷ್ಟ್ರಗಳಲ್ಲಿ ಆರ್ಥಿಕತೆಯಲ್ಲಿ ಸಹಕಾರಿ ಕ್ಷೇತ್ರವು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ಸಹಕಾರಿ ಚಳುವಳಿಯಲ್ಲಿ ಸುಮಾರು ಶತಕೋಟಿ ಜನರಿಗಿಂತಲೂ ಹೆಚ್ಚು ಜನ ಸಕ್ರಿಯರಾಗಿದ್ದಾರೆ. ಇವರುಗಳು ನಿರಂತರ ಉನ್ನತಿಯನ್ನು ಅಭಿವೃದ್ಧಿಯನ್ನು ಹೊಂದುತ್ತಲೇ ಇದ್ದಾರೆ, ಇದರ ತಾತ್ಪರ್ಯವೆಂದರೆ ನಾವು ಯಾವ ಪದಾರ್ಥಗಳನ್ನು ಉತ್ಪಾದಿಸಬೇಕು, ನಮ್ಮ ಗ್ರಾಹಕರ ಬೇಡಿಕೆಯ ಸಾಮಗ್ರಿಗಳು ಯಾವುವು ಮತ್ತು ನಮ್ಮ ಸೇವೆ ಹೇಗಿರಬೇಕು ಇವು ಎಲ್ಲವೂ ಮಹತ್ವವನ್ನು ಪಡೆಯುತ್ತವೆ.

**ಆವಿಷ್ಕಾರದಲ್ಲಿ ಬರುವ ವಿಚಾರಗಳು :**

- ನೀವು ಸ್ಥಳೀಯರಾಗಿ ಯೋಚಿಸಿ ಜಾಗತಿಕವಾದ ನಡವಳಿಕೆಯನ್ನು ತೋರಬೇಕು.
- ಸದಸ್ಯರು ನಾವಿನ್ಯ ಪೂರ್ಣವಾಗಿ ಭಾಗವಹಿಸಬೇಕು.
- ಹೊಂದಾಣಿಕೆ, ಚುರುಕುತನ, ಕ್ಷಮತೆ ಮತ್ತು ಸಾಮಿಪ್ಯ ಸಹಕಾರಿ ಸಂಸ್ಥೆಗಳ ನಾವಿನ್ಯತೆಯ ವಿಧಾನಗಳು ಎಸ್‌ಡಿಜಿಗಳನ್ನು ಸಾಧಿಸಲು ಅನುಕೂಲ : ನಾಯಕರ ಅಭಿಪ್ರಾಯ
- ಸಹಕಾರಿ ಸಂಸ್ಥೆಯು ಸಾಮಾಜಿಕವಾಗಿ ಜವಾಬ್ದಾರಿಯುತ ಸಂಸ್ಥೆಯಾಗಿರುತ್ತದೆ ( ಏರಿಯಲ್ ಗುರಾಕೋ)
- ಬೇರೆಲ್ಲ ವ್ಯವಸ್ಥೆಗಳಿಗಿಂತ ಸಹಕಾರಿ ಕ್ಷೇತ್ರವನ್ನು ವಿಭಿನ್ನ ಮತ್ತು ಆಕರ್ಷಕವನ್ನಾಗಿ ಮಾಡುವುದು ಅದರ ಸದಸ್ಯರಿಗೆ ನೀಡುವ ಅಧಿಕಾರ (ಡೇನಿಯಲ್ ಬಾಗ್)
- ಸಹಕಾರಿ ಸಂಸ್ಥೆಗಳು ಸ್ವಾಭಾವಿಕವಾಗಿ ಉತ್ತಮ ಗುಣ ಮಟ್ಟದ ಉದ್ಯೋಗ ಸೃಷ್ಟಿಯನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಸಾಮಾಜಿವಾಗಿ ತನ್ನ ಸದಸ್ಯರು–ಮಾಲಿಕರು, ಸಮುದಾಯಕ್ಕೆ ಸುರಕ್ಷತೆಯ ಅನುಭವವನ್ನೂ ನೀಡಿದೆ. (ಗಿಲ್‌ಬರ್ಟ್)
- ಇಂದಿನ ದಿನ ನಾವು ಅಭಿವೃದ್ಧಿಯ ಸಮಸ್ಯೆಗೆ ನವೀನ ರೀತಿಯ ಪರಿಹಾರವನ್ನು ಹುಡುಕುತ್ತಿರುತ್ತೇವೆ ಸಹಕಾರಿ ಚಳುವಳಿಯಲ್ಲಿ ಅದನ್ನು ಕಾಣಬಹುದಾಗಿದೆ. (ಮಹಮೌದ್)
- ಸಹಕಾರಿ ಕ್ಷೇತ್ರವು ಪ್ರಪಂಚದಲ್ಲಿ ತನ್ನ ವ್ಯಾಪಕ ಅಭಿವೃದ್ಧಿ ಮತ್ತು ತಮ್ಮ ಸಂಪತ್ತನ್ನು ಸಂಗ್ರಹಿಸುವ ಸಾಮರ್ಥ್ಯ ಹಾಗೂ ಸಂಗ್ರಹಿಸಿದ ಸಂಪತ್ತನ್ನು ಸ್ವತಂತ್ರವಾಗಿ ಜೊತೆಗೆ ಪ್ರಜಾಸತ್ತಾತ್ಮಕ ರೀತಿಯಿಂದ ಹಂಚುವುದರಲ್ಲಿ ಬಹಳ ಅವಶ್ಯಕವಾಗಿ ಕಾರ್ಯ ನಿರ್ವಹಿಸುವ ವಿಧಾನವನ್ನು ಹೊಂದಿದೆ. ( ಏರಿಯಲ್ ಗುರಾಕೋ, ಅಧ್ಯಕ್ಷರು, ಕೋಪರಾರ್)

**ಮೂಲ :** ಯುಎನ್‌ಆರ್‌ಜಿ/ಅಭಿವೃದ್ಧಿ/ದೇಸಾ/ಕೋಆಪರೇಟಿವ್/2016/07/22/ ಕೋಆಪರೆಟಿವ್‌ಗಳ ಎಸ್‌ಡಿಜಿಗಳನ್ನು ಸಾಧಿಸಲು ನಾವಿನ್ಯತೆಯ ವಿಧಾನ

**ಅಮುಲ್ : ಸಹಕಾರಿ ಕ್ಷೇತ್ರದಲ್ಲಿ ದಾರಿದೀಪ**

**ದೃಷ್ಟಿಕೋನ :** ಅಮುಲ್‌ನ ದೃಷ್ಟಿ ತನ್ನ ರೈತರು, ಗ್ರಾಹಕರು, ಕೆಲಸಗಾರರು ಮತ್ತು ವಿತರಕರಿಗೆ ತನ್ನ ಸೇವೆಯಲ್ಲಿ ಹೆಚ್ಚಿನ ತೃಪ್ತಿಯನ್ನು ನೀಡುವುದಾಗಿದೆ.

**ಗುರಿ :** ಅಮುಲ್ ಸಂಸ್ಥೆಯ ಗುರಿ ಸಂಪೂರ್ಣ ಪ್ರಮಾಣದಲ್ಲಿ ಸುರಕ್ಷಿತವಾದ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ಉತ್ಪಾದಿಸಿ ಮಾರುಕಟ್ಟೆಯಲ್ಲಿ ಸದಾಕಾಲದಲ್ಲಿ ಗುಣಮಟ್ಟದ ಆಡಳಿತವನ್ನು ನಡೆಸಿ ಅತ್ಯುತ್ತಮ ನಾಯಕನಾಗಿ ಗುರುತಿಸಿಕೊಳ್ಳುವುದು, ತಾಂತ್ರಿಕತೆಯ ಕಲೆಯನ್ನು ಎಲ್ಲರಿಗೂ ತಿಳಿಸುವುದು, ನಾವಿನ್ಯತೆ ಮತ್ತು ಪರಿಸರ ಪ್ರೇಮಿ ಕಾರ್ಯವಿಧಾನಗಳಿಂದ ಉತ್ತಮ ಹೈನುಗಾರಿಕೆ ಮತ್ತು ಹಾಲಿನ ಪದಾರ್ಥಗಳ ಉತ್ಪಾದನೆಯೊಂದಿಗೆ ಗ್ರಾಹಕರ ವಿಶ್ವಾಸಕ್ಕೆ ಪಾತ್ರರಾಗುವುದು

**ತತ್ವ :** "ತನ್ನ ರೈತರ ಹಣಕ್ಕೆ ಮೌಲ್ಯವನ್ನು ನೀಡುವುದು, ಗ್ರಾಹಕರು ನೀಡುತ್ತಿರುವ ದುಡ್ಡಿಗೆ ಮೌಲ್ಯಯುತ ಪದಾರ್ಥಗಳನ್ನು ನೀಡುವುದು"

ಡಾ॥ ವರ್ಗೀಸ್ ಕುರಿಯನ್‌ರವರ ವಿಶಿಷ್ಟವಾದ, ನಾವಿನ್ಯತೆಯಿಂದ ಕೂಡಿದ ನಾಯಕತ್ವವು, ಮುಂದಾಲೋಚನೆಯಿಂದ ಕೂಡಿದ ಯೋಚನಾ ಶಕ್ತಿ, ಹೊಸ ಹೊಸದಾದ ಉಪಾಯ ಮತ್ತು ಪರಿಹಾರಗಳೊಂದಿಗೆ ಅಮುಲ್ ಸಂಸ್ಥೆಯ

ಆರಂಭವಾಯಿತು, ಹೈನುಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬೆಳವಣಿಗೆಯಾಯಿತು. ಪ್ರಸ್ತುತ ಅಮುಲ್ ಸಂಸ್ಥೆಯ ಎಮ್‌ಡಿ. ಶ್ರೀಯುತ ಸೋಧಿಯವರು ಹೇಳುವಂತೆ "ನಾವಿನ್ಯತೆಯು ಮಾನಸಿಕ ಸ್ಥಿತಿ" ಇದರಲ್ಲಿ ವರ್ಚಸ್ವಿ ರೀತಿಯಿಂದ " ಹಸು ಗ್ರಾಹಕರ ಮನೆಯಲ್ಲಿ" ಎಂಬ ವಿಚಾರಧಾರೆಯು ಅಮುಲ್ ಸಂಸ್ಥೆಯ ಅಭಿವೃದ್ಧಿಗೆ ಸಹಾಯಕವಾಗಿದೆ. 3.6 ಶತಕೋಟಿ ಅಮುಲ್ ಪರಿವಾರದ ರೈತರ ವಿಶ್ವಾಸಕ್ಕೆ ನ್ಯಾಯವದಗಿಸುವ ನಿಟ್ಟಿನಲ್ಲಿ, ಆರ್ ಎಸ್ ಸೋಧಿಯವರು ತಮ್ಮ ಹೇಳಿಕೆಯಲ್ಲಿ " ಹೆಚ್ಚು ನೀಡಿ ಹೆಚ್ಚು ಪಡೆಯಿರಿ" ಎಂದು ಹೇಳಿದ್ದಾರೆ. ಆದ್ದರಿಂದಲೇ ಅಮುಲ್ – ದ ಟೇಸ್ಟ್ ಆಫ್ ಇಂಡಿಯಾ" "ಅಮುಲ್ ಪೀತಾ ಹೈ ಇಂಡಿಯಾ" "ಅಟ್ಟರ್‌ಲೀ ಬಟ್ಟರ್‌ಲೀ ಡಿಲಿಷಿಯಸ್" ಎಂಬ ಟ್ಯಾಗ್‌ಲೈನ್‌ಗಳಿಂದ ಇನ್ನೂ ವಿಶೇಷವಾಗಿ ಗುರುತಿಸಲ್ಪಡುತ್ತವೆ.

**ಸಹಕಾರಿ ಕ್ಷೇತ್ರವನ್ನು ನಾವಿನ್ಯತೆಯ ನಾಯಕತ್ವದಿಂದ ಮುನ್ನಡೆಸಬೇಕಾಗಿದೆ :**

ನಮ್ಮ ದೇಶದ ಬೆನ್ನೆಲುಬು ಕೃಷಿಯಾಗಿರುವುದರಿಂದ ಭಾರತ ಸರಕಾರವು ಭಾರತದ ಆರ್ಥಿಕತೆಯ ಅಭಿವೃದ್ಧಿಗೆ ಕೃಷಿ ಕ್ಷೇತ್ರದಲ್ಲಿ ಉತ್ತಮವಾದ ಉತ್ಪಾದನೆಯನ್ನು ಮಾಡಲು ರೈತರನ್ನು ಸ್ಪರ್ಧಾತ್ಮಕವಾಗಿ ಮುನ್ನುಗ್ಗಲು ಸಹಾಯ ಮಾಡಲು ಹೊಸ ಹೊಸ ಸುಧಾರಣಾ ಕ್ರಮಗಳನ್ನು ಸಮಯ ಸಮಯಕ್ಕೆ ಮಾಡಲು ಮುಂದಾಗಿದೆ. ನವೀನ ವಿಧಾನಗಳಾದ ಈ–ಮಾರ್ಕೆಟಿಂಗ್, (ಈ–ನಾಮ್ ಪೋರ್ಟಲ್) ರೈತರ ಉತ್ಪಾದನೆಗೆ ಈ – ಕಾಮರ್ಸ್ ಮೂಲಕ ಮಾರುಕಟ್ಟೆ ಒದಗಿಸುವುದು ಮತ್ತು ಇನ್ನು ಹಲವು ಹೊಸ ತಂತ್ರಗಳನ್ನು ಇತ್ತೀಚಿಗೆ ನಡೆದ ಸಭೆಯಲ್ಲಿ ನಮ್ಮ ಮಾನ್ಯ ಪ್ರಧಾನ ಮಂತ್ರಿಯವರು ( ಟೈಮ್ಸ್ ಆಫ್ ಇಂಡಿಯಾ 03.05.2020) ಘೋಷಿಸಿದರು. ಇದರಲ್ಲಿ ಕೃಷಿ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಅಂದರೆ ಕೃಷಿ ಪದಾರ್ಥಗಳಿಗೆ ಉತ್ತಮ ಮಾರುಕಟ್ಟೆಯ ವ್ಯವಸ್ಥೆ, ಮಾರುಕಟ್ಟೆಯಲ್ಲಿ ಹೆಚ್ಚುವರಿಯಾಗಿ ಉಳಿಯುವ ಪದಾರ್ಥಗಳ ನಿರ್ವಹಣೆ, ರೈತರಿಗೆ ಸಂಸ್ಥೆಗಳಿಂದ ಸೂಕ್ತ ಬಡ್ಡಿದರದಲ್ಲಿ ಸಾಲ ಕೊಡುವುದು, ಕೃಷಿ ಕ್ಷೇತ್ರದ ಹಿನ್ನಡೆಗೆ ಕಾರಣವಾಗಿರುವ ಅನೇಕ ಕಟ್ಟುಪಾಡುಗಳನ್ನು ಸಡಿಲಗೊಳಿಸುವುದು. ಇದೆಲ್ಲದರೊಂದಿಗೆ ಅನೇಕ ರಿಯಾಯತಿಗಳೊಂದಿಗೆ ಸಾಲವನ್ನು ರೈತರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ (ಕೆಸಿಸಿ) ಇತ್ಯಾದಿಗಳ ಮೂಲಕ ಉತ್ತಮ ಸೌಲಭ್ಯವನ್ನು ನೀಡುವುದು ಇಂತಹ ಅನೇಕ ಸುಧಾರಣ ಕಾರ್ಯಕ್ರಮವನ್ನು ರೈತರ ಏಳಿಗೆಗಾಗಿ ಜಾರಿಗೊಳಿಸಲಾಗಿದೆ. ಇದರಂತೆ, ಆರ್‌ಬಿಐನ ಗವರ್ನರ್‌ರವರು ಗಣಕೀಕರಣದ ಮೂಲಕ ಅಭಿವೃದ್ಧಿ ಸಾಧಿಸುವ ವಿಷಯದಲ್ಲಿ ಒತ್ತು ಕೊಡಲು ಕರೆ ನೀಡಿದ್ದಾರೆ, ತಮ್ಮ ವ್ಯವಹಾರಗಳನ್ನು ಮೊಬೈಲ್ ಬ್ಯಾಂಕಿಂಗ್, ಈ–ಬ್ಯಾಂಕಿಂಗ್ ಮೂಲಕ ತಂತ್ರ ಜ್ಞಾನದ ಸದ್ಬಳಕೆಯ ಜೊತೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಹಕರಿಗೆ ಸರಳವಾದ ಮತ್ತು ಉತ್ತಮ ಸೇವೆಯನ್ನು ನೀಡಲು ಬ್ಯಾಂಕುಗಳಿಗೆ ಕರೆ ನೀಡಿದ್ದಾರೆ. ನಬಾರ್ಡ್ ಸಂಸ್ಥೆಯ ಮಾರ್ಗದರ್ಶಿ ಸೂಚಿಯ ಪ್ರಕಾರ ಸಹಕಾರಿ ಬ್ಯಾಂಕ್‌ಗಳು ಮತ್ತು ವಿತ್ತೀಯ ಸಂಸ್ಥೆಗಳಿಗೆ ಸಂಪೂರಣ ಗಣಕೀಕೃತವಾಗಿ ವ್ಯವಹಾರವನ್ನು ನಡೆಸಲು ಸೂಚಿಸಿದೆ, ಈ ಮೂಲಕ ಕ್ಷೇತ್ರದಲ್ಲಿ ಉತ್ತಮ ನಿಯಂತ್ರಣದೊಂದಿಗೆ ಹೊಸ ತಂತ್ರಜ್ಞಾನದ ಸುಧಾರಣೆಗೆ ಅಂಟಿಕೊಳ್ಳಲು ಕರೆ ನೀಡಿದೆ.

**ಒತ್ತಡ :**

ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಿದ ಸಾಮಾಜಿಕ ಪ್ರವರ್ತಕರ ಮೂಲ ಉದ್ದೇಶ ಮತ್ತು ದೃಷ್ಟಿಕೋನವು ಜನರ ಮಧ್ಯೆ ಹೊಂದಾಣಿಕೆ ಮತ್ತು ಒಟ್ಟಾಗಿ ಸಹಕಾರದಿಂದ ಕೆಲಸ ಮಾಡಿಕೊಂಡು ಪರಸ್ಪರರಿಗೆ ವೈಯಕ್ತಿಕವಾಗಿ ಮತ್ತು ಸಾಮೂಯಿಕವಾಗಿ ಅವಶ್ಯಕತೆಗಳನ್ನು, ಸಾಮಗ್ರಿಗಳನ್ನು, ಸೇವೆಗಳನ್ನು ಪರಸ್ಪರ ಸಹಕಾರದಿಂದ ಪೂರೈಸಿಕೊಳ್ಳುವ ಸಲುವಾಗಿ ಒಂದು ಮಾಧ್ಯಮವನ್ನು, ಒಂದು ಸಂಸ್ಥೆಯನ್ನು ನೀಡುವುದಾಗಿತ್ತು. ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಕೋರೋನಾ ಮಹಾಮಾರಿಯ ಕಾರಣದಿಂದ ಜನರ ಅವಶ್ಯಕತೆಗಳು ಬೇಡಿಕೆಗಳು ಬದಲಾಗಿವೆ.

ಭಾರತದಲ್ಲಿ ಸಹಕಾರಿ ಚಳುವಳಿಯ ಮೂಲಕ ಆರ್ಥಿಕವಾಗಿ ಸಾಲ ಸಹಿತ ಮತ್ತು ಸಾಲರಹಿತ ಕ್ಷೇತ್ರಗಳಲ್ಲಿ ಅನೇಕ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ ಈ ನಿಟ್ಟಿನಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಸಹಕಾರಿ ಕ್ಷೇತ್ರ ಸಹಕಾರದೊಂದಿಗೆ ರೈತರು ಜಾಗತಿಕ ಮಟ್ಟದ ಪದಾರ್ಥಗಳನ್ನು ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಗುಣಮಟ್ಟದ ಸೇವೆಯನ್ನು ನೀಡಬೇಕು. ತಂತ್ರಜ್ಞಾನದ ಸದೂಪಯೋಗದೊಂದಿಗೆ, ಸದಸ್ಯರೊಂದಿಗೆ ಉತ್ತಮ ಸಂಪರ್ಕವನ್ನು ಸಾಧಿಸಿ ಮತ್ತು ಗ್ರಾಹಕರ ಸಮೂಹಕ್ಕೆ ಉದ್ದಗಲಕ್ಕೂ ಅವರ ಅವಶ್ಯಕತೆಗಳನ್ನು ಪೂರೈಸಲು ಮತ್ತು ಪೂರೈಕೆಯ ಸರಪಣಿಯನ್ನು ಬಲಪಡಿಸಿ ಸಹಕಾರ ಕ್ಷೇತ್ವವನ್ನು ಬಲಪಡಿಸುವ ನಿರ್ಣಾಯಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕು.

**ಅಭ್ಯುದಯದ ಮನಸ್ಥಿತಿ (ಸೂರ್ಯೋದದ ಮನಸ್ಥಿತಿ) :**

ಸಹಕಾರಿ ಕ್ಷೇತ್ರದ ಸ್ಥಿತಿಸ್ಥಾಪಕ ಚೇತನವು ಉದ್ಯಮದ ಪುನಃಶ್ಚೇತನ ಮತ್ತು ಅಭಿವೃದ್ಧಿಯ ಉಪಾಯಗಳು ಸಮುದಾಯದ ಅವಶ್ಯಕತೆ ಮತ್ತು ನಿರೀಕ್ಷೆಗಳ ಅನುರೂಪವಾಗಿರಬೇಕು. ಇನ್ನು ಮುಂದೆ ಬರುವ ಗುರಿಗಳು ಮೌಲ್ಯಾಧಾರಿತ ಉದ್ಯಮಗಳಾಗಿದ್ದು ಸದಸ್ಯರು ಹೆಚ್ಚಿನ ಪ್ರಮಾಣದಲ್ಲಿ ಸಂರಚನಾತ್ಮಕ ಮತ್ತು ನಾವಿನ್ಯತೆಯನ್ನು ಹೊಂದಿರುತ್ತದೆ. ತಂತ್ರಗಾರಿಕೆಯು ದೀರ್ಘಕಾಲಿಕ ಉಪಾಯಗಳಾಗಿದ್ದು ಉತ್ತಮ ಗುಣಮಟ್ಟದ ಕಾರ್ಯಕ್ಷಮತೆಯನ್ನು

ಪ್ರದರ್ಶಿಸುವ ಮೂಲಕ ಸಹಕಾರಿ ಸಂಸ್ಥೆಗಳು ಸದಸ್ಯರನ್ನು ಆಕರ್ಷಿಸುವಲ್ಲಿ ಮತ್ತು ಹಳೆಯ ಸದಸ್ಯರ ವಿಶ್ವಾಸವನ್ನು ಮತ್ತಷ್ಟು ದೃಢ ಪಡಿಸುವಲ್ಲಿ ಸಹಾಯಕವಾಗುತ್ತದೆ.

**ಏಳು ಎಸ್‌ಗಳ ತಂತ್ರ :**

ಇಂದು ಕ್ರಿಯಾಶಿಲ ಮಾರುಕಟ್ಟೆ ಮತ್ತು ತಂತ್ರಜ್ಞಾನದಿಂದ ಪ್ರಸ್ತುತ ಸಂಕಷ್ಟಗಳು ಸ್ವಲ್ಪ ವಿಭಿನ್ನ ರೀತಿಯಿಂದ ಗ್ರಾಹಕರ ವ್ಯಾಪಕವಾದ ಬೇಡಿಕೆಗಳನ್ನು ಪೂರೈಸಬೇಕಾಗುತ್ತದೆ. ಸಹಕಾರಿ ಸಂಸ್ಥೆಗಳ ತಂತ್ರವು ಮುಂದಾಲೋಚನೆಯಿಂದ ಕೂಡಿದ್ದಾಗಿರಬೇಕು ದೀರ್ಘಕಾಲಿಕವಾಗಿ ಉಪಯುಕ್ತವಾಗುವ ತಂತ್ರವನ್ನು ಅನುಸರಿಸಿ ಉತ್ತಮ ಫಲಿತಾಂಶವನ್ನು ಪಡೆಯುವಂತಹದ್ದಾಗಿರಬೇಕು. ತಂತ್ರಗಾರಿಕೆಯು ಬಲಪಡಿಸುವಂಥಹದದ್ದಾಗಿರಬೇಕು, ಗ್ರಾಹಕರ ಅನುಕೂಲತೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸರಿಯಾಗಿ ಉತ್ತಮವನ್ನು ನಿರ್ಣಯವನ್ನು ತೆಗೆದುಕೊಳ್ಳುವ ಜನರಿಗೆ ಅಧಿಕಾರವನ್ನು ನೀಡಬೇಕು. ಇಲ್ಲಿ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದ ವಿಷಯವೆಂದರೆ, ಸದಸ್ಯರು ಪ್ರತಿ ಸಹಕಾರಿ ಸಂಸ್ಥೆಯ ಹೃದಯವಾಗಿರುತ್ತಾರೆ. ಸಹಕಾರಿ ಸಂಸ್ಥೆಯ ಆಡಳಿತಗಾರರು ಅಭಿವೃದ್ಧಿಯ ಮೂಲ ಮಂತ್ರವನ್ನು ಗಮನದಲ್ಲಿಟ್ಟುಕೊಂಡು ತಂತ್ರಗಾರಿಕೆಯನ್ನು ರೂಪಿಸಿ ಗುರಿಯನ್ನು ಸಾಧಿಸಬೇಕು. ಹಂಚಿಕೊಂಡು ಬಾಳುವುದು ಸಹಕಾರಿ ತತ್ವದ ಮೂಲಮಂತ್ರವಾಗಿದ್ದು ಅದು ಸಹಕಾರಿ ಸಂಸ್ಥೆಗಳ ಕಾರ್ಯ ನಿರ್ವಹಣೆಯಲ್ಲಿ ಪ್ರತಿಬಿಂಬಿತವಾಗಿರಬೇಕು ಅಥವಾ ಸಹಕಾರಿ ಸಂಸ್ಥೆಯ ಆಡಳಿತ ನೀತಿಯಲ್ಲಿ ಎದ್ದು ಕಾಣಬೇಕು. ನಾಯಕತ್ವದ ಶೈಲಿಯು ಕೆಲವು ಉದ್ಯಮಶೀಲ ಚೈತನ್ಯಗಳಿಗೆ ಭೋದಕವಾಗುವಂತೆ ಇರಬೇಕು, ಅಲ್ಲಿ ಹೊಸದಾದೊಂದನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವ ಬಯಕೆ ಇರಬೇಕು. ಸಿಬ್ಬಂದಿ ವರ್ಗಕ್ಕೆ ಕೆಲಸಗಾರರ ಅಭಿವೃದ್ಧಿ ಹೊಂದುವ ಸಾಮರ್ಥ್ಯ ಮತ್ತು ಸಾರ್ವಜನಿಕರಲ್ಲಿ ಸಕಾರಾತ್ಮಕ ರೂಪವನ್ನು ಕಾಯ್ದುಕೊಂಡು ಸದಸ್ಯರೊಂದಿಗೆ ಒಳ್ಳೆಯ ನಡುವಳಿಕೆಯನ್ನು ತೋರಲು ಸೂಚಿಸಲಾಗಿರುತ್ತದೆ. ಕೆಲಸಗಾರರ ಸಂಪರ್ಕ ಕೌಶಲ್ಯ ಮತ್ತು ಗ್ರಾಹಕ, ಸದಸ್ಯರೊಂದಿಗೆ ವ್ಯವಹರಿಸುವ ಕಲೆ ಸಂಸ್ಥೆಯ ಯಶಸ್ಸಿನಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ 7 ಎಸ್‌ಗಳು ಪರಸ್ಪರ ಸಹಕಾರದೊಂದಿಗೆ ಬಲವರ್ಧನೆಯೊಂದಿಗೆ ಪುನಃಶ್ಚೇತನಗಳಿಸುವ ದೃಷ್ಟಿಕೋನದಿಂಧ ಗುರಿ ಸಾಧಿಸುವತ್ತ ಹೆಜ್ಜೆ ಹಾಕುವುದು ಈ ನಾವಿನ್ಯತೆಯುಕ್ತ ನಾಯಕತ್ವದ ಸಹಾಯದಿಂದ ಪ್ರಯೋಜನ ಪಡೆದು ಯಶಸ್ಸನ್ನು ಸಾಧಿಸಬಹುದಾಗಿದೆ.

**ಕೊನೆಯ ಮಾತು :**

ಸಂಸ್ಥೆಗಳು ಈಗೀಗ ಕ್ರಿಯಾಶೀಲವಾಗಿ ಮತ್ತು ಸಮಷ್ಟಿಯ ಆಧಾರದ ಮೇಲೆ ವಿಕಸನಗೊಂಡು ಜಾಗತೀಕರಣಗೊಳ್ಳುತ್ತಿವೆ. ಇಂತಹ ಸಂಕೀರ್ಣತೆಯ ಪರಿಸರದೊಂದಿಗೆ ವ್ಯವಹರಿಸುವ ದೃಷ್ಟಿಯಿಂದ ಹೊಸ ಹೊಸ ಆವಿಷ್ಕಾರಗಳು ಸ್ಪರ್ಧಾತ್ಮಕತೆಯಲ್ಲಿ ಭಾಗವಹಿಸಿ ಮುನ್ನಡೆಯಲು ಪ್ರಮುಖವಾದ ಅಂಶವಾಗಿದೆ. ಇಂತಹ ಹೊಸದಾದ ಆವಿಷ್ಕಾರಗಳನ್ನು ನಡೆಸಲು ಮುನ್ನಡೆಸಲು ನಾವಿನ್ಯತೆಯುಕ್ತ ನಾಯಕತ್ವವು ಪ್ರಮುಖ ಪಾತ್ರವನ್ನು ವಹಿಸಿ ಉತ್ತಮ ಸಾಧನೆಯನ್ನು ಮಾಡುತ್ತಾ ಯಶಸ್ಸನ್ನು ಪಡೆಯಲು ಸಹಕಾರಿಯಾಗಿರುತ್ತದೆ. ಸಹಕಾರಿ ಸಂಸ್ಥೆಗಳು ಮತ್ತಷ್ಟು ಕ್ರಿಯಾತ್ಮಕವಾಗಿ ಮತ್ತು ಹೊಸರೀತಿಯ ಉಪಾಯಗಳಿಂದ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉಳಿಸು, ಚೆನ್ನಾಗಿ ಬೆಳೆದು ಮುನ್ನಡೆಯಬೇಕಾಗಿದೆ.

ಸಂಸ್ಥೆಯನ್ನು ಒಂದು ವಾಹನವೆಂದು ಭಾವಿಸಿದರೆ ನಾಯಕತ್ವವು ಅದರ ಎಂಜಿನ್ ಆಗಿರುತ್ತದೆ ಮತ್ತು ನಾವಿನ್ಯತೆಯುಳ್ಳ ಆವಿಷ್ಕಾರಗಳು ಯಶಸ್ಸು ಮತ್ತು ಸಂಸ್ಥೆಯ ಉಳಿವಿಗೆ ಪ್ರಮುಖ ಪಾತ್ರವನ್ನು ವಹಿಸುತ್ತವೆ, ನಾವಿನ್ಯತೆಯುಕ್ಕತ ನಾಯಕತ್ವವು ಸಂಸ್ಥೆಯ ಸಂಚಲನದಲ್ಲಿ ಹೊಸ ಕೆಲಸದ ಸಂಸ್ಕೃತಿಯನ್ನು ಹುಟ್ಟು ಹಾಕುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಕೆಲಸಗಾರರು ಹೊಸ ಹೊಸ ಉಪಾಯಗಳ ಕಾರ್ಯನ್ವಯ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ನಾವಿನ್ಯತೆಯುಕ್ತ ನಾಯಕತ್ವಕ್ಕೆ ಸ್ವತಃ ವಿಭಿನ್ನವಾಗಿ ಯೋಚಿಸಿ ಒಳ್ಳೆಯ ಉಪಾಯಗಳೊಂದಿಗೆ ತನ್ನೊಂದಿಗೆ ಕೆಲಸ ಮಾಡುವ ಜನರನ್ನೂ ತನ್ನ ವಿಚಾರಧಾರೆಯಿಂದ ಪ್ರಭಾವಿತರನ್ನಾಗಿ ಮಾಡಿ ಹುರಿದುಂಬಿಸಿ ಯಶಸ್ಸನ್ನು, ಸಕಾರಾತ್ಮಕ ಫಲಿತಾಂಶವನ್ನು ಪಡೆಯುವ ಸಾಮರ್ಥ್ಯವನ್ನು ಪಡೆದಿರುತ್ತಾರೆ. ಸಹಕಾರಿ ಸಂಸ್ಥೆಗಳು ಪ್ರಸ್ತುತ ಪೂರ್ವಭಾವಿಯಗಿ ಈ ಸ್ಪರ್ಧಾತ್ಮಕ ಪರಿಸರದಲ್ಲಿ ನಿಲ್ಲಲು ತನ್ನ ಹೊಸದಾದ ಮತ್ತು ಉಪಾಯಗಳೊಂದಿಗೆ ತಯಾರಿನಡೆಸಬೇಕು. ಇದರೊಂದಿಗೆ ಸಹಕಾರಿ ಸಂಸ್ಥೆಗಳು ತಮ್ಮ ಉದ್ಯಮದ ಮರು ಮೌಲ್ಯಮಾಪನ ಮಾಡಿಕೊಳ್ಳುವುದರೊಂದಿಗೆ ತಮಗೆ ಸೂಕ್ತವಾಗುವ ಉದ್ಯಮದ ಮಾದರಿಯನ್ನು ಅನುಸರಿಸಬೇಕು. ಆವಿಷ್ಕಾರವು ದೊಡ್ಡ ಸಂಭಾವ್ಯದೊಂದಿಗೆ ಇರುವ ಮಹಾನ್ ಉಪಾಯಗಳೊಂದಿಗೆ ಕೂಡಿರುತ್ತದೆ ಎಂದು ಹೇಳಲಾಗಿದೆ. ಆದರೆ ಸಣ್ಣ ಸಣ್ಣ ಹೆಜ್ಜೆಗಳನ್ನು ಇಟ್ಟು ಉತ್ತಮವಾದ ಉಪಾಯವನ್ನು ಸೂಕ್ತವಾಗಿ ಕಾರ್ಯಗತ ಮಾಡಿದಾಗ ಯಶಸ್ಸು ಸುಲಭವಾಗುತ್ತದೆ. ಇದನ್ನು ಸಮರ್ಥಿಸುವ ಜಾರ್ಜ್ ಕ್ಯೂರಿಯೋ ಅವರ ಮಾತು :

"ಬದಲಾವಣೆಗೆ ಹೆದರಬೇಡಿ, ನೀವು ಯಾವುದೋ ಒಂದು ಒಳ್ಳೆಯದನ್ನು ಕಳೆದುಕೊಳ್ಳಲೂ ಬಹುದು ಆದರೆ ನೀಬು ಮತ್ತಷ್ಟು ಮಹತ್ತರವಾದುದನ್ನು ಪಡೆದು ಕೊಳ್ಳುತ್ತಿರಿ."

# ಸೌಹಾರ್ದ ಸಹಕಾರಿಗಳ ಬಡ್ಡೀಯೇತರ ಆದಾಯ ಮೂಲಗಳು

ಶ್ರೀ ಶಂಕರ್ ಎಸ್. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಕರ್ನಾಟಕ ಸರ್ಕಾರವು "ಸೇವಾ ಸಿಂಧು" ಯೋಜನೆಯನ್ನು ಪ್ರಾರಂಭಿಸಿದ್ದು, ಸರಕಾರಿ ಇಲಾಖೆಗಳ ಸೇವೆಯನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ವಿನೂತನ ಸೇವಾ ಯೋಜನೆ ಇದಾಗಿದೆ. ಸದರಿ ಯೋಜನೆಯು ಸರಕಾರದ ವಿವಿಧ 69 ಇಲಾಖೆಗಳ ಮೂಲಕ 612 ಸೇವೆಗಳನ್ನು ನೀಡಲು ಮುಂದಾಗಿದೆ. "ಸೇವಾ ಸಿಂಧು" ಯೋಜನೆಯು ಕರ್ನಾಟಕ ಸರ್ಕಾರದ ಸಮಗ್ರ ಸರ್ಕಾರಿ ಇಲಾಖೆಗಳ ಸೇವೆಗಳನ್ನು ವಿವಿಧ ಮಾರ್ಗಗಳಿಂದ ಸಮಸ್ತ ನಾಗರೀಕರಿಗೆ ತಲುಪಿಸಲು, ಸಮಗ್ರ ನಾಗರೀಕರ ಸೇವೆಗಳ ಕೇಂದ್ರಗಳಾದ ಬೆಂಗಳೂರು ಒನ್, ಸಿಎಸ್‌ಸಿ ಸೇವಾ ಕೇಂದ್ರಗಳು, ಕರ್ನಾಟಕ ಒನ್, ಅಟಲ್‌ಜೀ ಜನ ಸ್ನೇಹಿ ಕೇಂದ್ರ ಮತ್ತು ಬಾಪೂಜಿ ಕೇಂದ್ರಗಳಿಗೆ ನೀಡಿರುತ್ತದೆ. ಈ ಕೇಂದ್ರಗಳು ಎಲ್ಲಾ ಸರ್ಕಾರಿ ಇಲಾಖೆಗಳ ಸೇವೆಗಳನ್ನು ನಾಗರೀಕರಿಗೆ ಒಂದೇ ವೇದಿಕೆಯಲ್ಲಿ ಒದಗಿಸಲು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಸರ್ಕಾರದ ಸೇವೆಗಳು ನಗದು ರಹಿತ, ಕಾಗದ ರಹಿತ ವಿಧಾನವನ್ನು ಜಾರಿಗೊಳಿಸಲು ಈ ಯೋಜನೆಯ, ಮುಖ್ಯ ಗುರಿಯಾಗಿರುತ್ತದೆ. ಈ ಯೋಜನೆಯು ನಾಗರೀಕರಿಗೆ ಸರ್ಕಾರಿ ಸೇವೆಗಳನ್ನು ವಾಸ್ತವಿಕವಾಗಿ, ಪಾರದರ್ಶಕವಾಗಿ, ಒದಗಿಸುತ್ತಿದೆ ಮತ್ತು ಉತ್ತಮ ಹೊಣೆಗಾರಿಕೆಯನ್ನು ನಿರ್ಮಿಸುತ್ತಿದೆ.





ಸದರಿ ಸೇವೆಯಿಂದ ಸಮಗ್ರ ನಾಗರೀಕ ಸೇವಾ ಕೇಂದ್ರಗಳು ಯಾಂತ್ರಿಕ ವ್ಯವಸ್ಥೆಯಿಂದ ನಾಗರೀಕರ ಸಮಸ್ಯೆಗಳನ್ನು, ತೊಂದರೆಗಳನ್ನು, ಕಚೇರಿಗಳಿಗೆ ಅಲೆದಾಡುವ ಸಮಯವನ್ನು ಕಡಿಮೆ ಮಾಡಲು ಮತ್ತು ಸರಳ ಮಾಡಲು ಈ ಸೇವಾ ಸಿಂಧು ಯೋಜನೆಯ ಸೇವೆಗಳನ್ನು ಸದಸ್ಯರಿಗೆ ಹಾಗೂ ನಾಗರೀಕರಿಗೆ ಸೌಹಾರ್ದ ಸಹಕಾರಿಗಳ ಮೂಲಕ ಒದಗಿಸಬಹುದಾಗಿದೆ. ಮತ್ತು ಸಹಕಾರಿಯ ಕಾರ್ಯ ವಿಧಾನವನ್ನು ಸುಗಮಗೊಳಿಸಲು, ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಈ ಯೋಜನೆಯು ಉಪಯೋಗವಾಗಿದೆ.

ಸೌಹಾರ್ದ ಸಹಕಾರಿಗಳ ಈಗಿನ ಪರಿಸ್ಥಿತಿ ಹಾಗೂ ಸನ್ನಿವೇಶಗಳಿಗೆ ಅನುಗುಣವಾಗಿ ತಮ್ಮ ವ್ಯವಹಾರದ ವಿಧಾನವನ್ನು ಬದಲಾಯಿಸಿಕೊಳ್ಳುವುದು ಮುಖ್ಯ ಹಾಗೂ ಅನಿವಾರ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಇಂತಹ ಸನ್ನಿವೇಶ ನಿರ್ಮಾಣವಾಗಿದೆ. ಸಹಕಾರಿಗಳು ಪತ್ತಿನ ವ್ಯವಹಾರ ಹಾಗೂ ಇ–ಸ್ಟಾಂಪಿಂಗ್ ಕೇಂದ್ರಗಳ ಜೊತೆಗೆ ಈ ಕೆಳಗಿನ ಸೇವಾ ಸಿಂಧು ಚಟುವಟಿಕೆಗಳನ್ನು ಅಳವಡಿಸಿಕೊಂಡು ಇ.ಸಿ, ಆರ್.ಟಿ.ಸಿ. ಹಾಗೂ ಸಿ.ಸಿ. ನೀಡುವುದರ ಮೂಲಕ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಈ ಕೆಳಗಿನ ವೆಬ್‌ಸೈಟ್‌ಗಳ ಮೂಲಕ ಸೇವೆಯನ್ನು ನೀಡಬಹುದಾಗಿದೆ.

### ಪಹಣಿ (RTC) ಪಡೆಯುವುದು ಹೇಗೆ ?

ಈ ಸೇವೆಯು ಕರ್ನಾಟಕ ಸರಕಾರದ ಕಂದಾಯ ಇಲಾಖೆಯ 'ಭೂಮಿ ಆನ್‌ಲೈನ್ (https://www.landrecords.karnataka.gov.in/service84) ವೆಬ್ ಸೈಟ್' ನಲ್ಲಿ ಉಚಿತವಾಗಿ ನೋಂದಣಿ ಮಾಡಿಕೊಳ್ಳಬೇಕು. ನಂತರ ಭೂಮಿ ವ್ಯಾಲೆಟ್ ಐಡಿ ನೊಂದಣಿ ಮಾಡಿಕೊಳ್ಳಬೇಕು. ಈ ವ್ಯಾಲೆಟ್‌ನಲ್ಲಿ ಹಣವನ್ನು ನೆಟ್ ಬ್ಯಾಂಕಿಂಗ್ ಅಥವಾ ಇತರೆ ವಿದ್ಯುತ್‌ಮಾನ ಹಣ ವರ್ಗಾವಣೆ ಮೂಲಕ ಹಣವನ್ನು ವರ್ಗಾಹಿಸಿಕೊಳ್ಳಬೇಕು. ನಂತರ ತಮ್ಮ ಐಡಿಯಲ್ಲಿ ಲಾಗ್ ಇನ್ ಮಾಡಿಕೊಂಡು ತಮಗೆ ಬೇಕಾಗಿರುವ ಜಿಲ್ಲೆಯ ಹೆಸರು, ತಾಲ್ಲೂಕು, ಹೋಬಳಿ, ಸರ್ವೇ ನಂ. ನೀಡುವುದರ ಮೂಲಕ ಆರ್.ಟಿ.ಸಿ. ಯನ್ನು ಪಡೆಯಬಹುದಾಗಿದೆ. ಪ್ರತಿ ಒಂದು ಆರ್.ಟಿ.ಸಿ. ಗೆ ತಮ್ಮ ವ್ಯಾಲೆಟ್ ಖಾತೆಯಿಂದ ರೂ. 5/– ರಿಂದ 10/– ರೂಗಳ ವರೆಗೆ ಕಡಿತಗೊಳ್ಳುತ್ತದೆ.



**ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣ ಪತ್ರ ಹಾಗೂ ಸಿ.ಸಿ. ಪ್ರಮಾಣ ಪತ್ರ (E.C.-Encumbrance Certificate AND C.C.- Completion Certificate) ಪಡೆಯುವುದು ಹೇಗೆ ?**




ಈ ಸೇವೆಯು ಕರ್ನಾಟಕ ಸರಕಾರದ ಅಂಚೆ ಚೀಟಿಗಳು ಮತ್ತು ನೋಂದಣಿ ಇಲಾಖೆಯ ವೆಬ್ ಆಧಾರಿತ 'ಕಾವೇರಿ' ಎಂಬ (https://kaverionline.karnataka.gov.in/) ವೆಬ್‌ಸೈಟ್ ಪೋರ್ಟಲ್ ಆಧಾರಿತ ಸೇವೆಯಾಗಿರುತ್ತದೆ. ಈ ಸೇವೆಯನ್ನು ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು. ನೋಂದಣಿ ಮಾಡಿಕೊಳ್ಳುವಾಗ ಹೆಸರು, ವಿಳಾಸ, ಆಧಾರ್ ನಂ, ಪಾನ್ ನಂ, ವೋಟರ್ ಐಡಿ, ಇ–ಮೇಲ್ ಐಡಿ, ಮೊಬೈಲ್ ನಂ. ಹಾಗೂ ಇತರೆ ಮಾಹಿತಿಯನ್ನು ನೀಡುವುದರ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ನಂತರ ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಪಡೆಯಬಹುದಾಗಿದೆ. ಸದರಿ ಸೇವೆಯನ್ನು ನೀಡಲು ಯಾವುದೇ ಶುಲ್ಕವಿರುವುದಿಲ್ಲ.

ಇದಲ್ಲದೇ ಸೇವಾ ಸಿಂಧು ಜಾಲಾತಾಣದಲ್ಲಿ ಕರ್ನಾಟಕ ಸರಕಾರದ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಸೇವೆಗಳನ್ನು ಸಹಕಾರಿಗಳು ತಮ್ಮ ಸದಸ್ಯರಿಗೆ ನೀಡಬಹುದು. ಆದರೆ ಸೇವಾ ಸಿಂಧು ತಾಣದಲ್ಲಿ ಕೆಲವು ಸೇವೆಗಳನ್ನು ಬಳಸಲು ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದುಕೊಂಡು ಸೇವೆ ನೀಡಬಹುದಾಗಿದೆ. ಸರಕಾರದ ಸೇವೆಯನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಯೋಜನೆಯು ಸೇವಾ ಸಿಂಧು ಕೇಂದ್ರದ ಉದ್ದೇಶವಾಗಿದೆ.

ಸದರಿ ಸೇವೆಯನ್ನು ಅಳವಡಿಸಿಕೊಳ್ಳಲು ಮೈಸೂರು ಪ್ರಾಂತದ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 18.06.2020 ರಂದು ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಸೇವಾ ಸಿಂಧು ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವ ಕುರಿತು ನಡೆದ ತರಬೇತಿ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳು ಇ–ಸ್ಟಾಂಪಿಂಗ್ ಕೇಂದ್ರಗಳಲ್ಲಿ ಇ.ಸಿ, ಆರ್.ಟಿ.ಸಿ. ಹಾಗೂ ಸಿ.ಸಿ. ನೀಡುವುದರ ಮೂಲಕ ಬಡ್ಡಿಯೇತರ ಆದಾಯ ಪಡೆಯಬಹುದಾಗಿದೆ ಎಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಕೆ. ಮಂಜುನಾಥ್ ಇವರು ಮಾಹಿತಿ ನೀಡಿದರು.

ಈಗಾಗಲೇ ಮೈಸೂರು ಪ್ರಾಂತದಲ್ಲಿ ಸೇವಾ ಸಿಂಧು/ಬಡ್ಡಿಯೇತರ ಆದಾಯ ಯೋಜನೆಯನ್ನು ಅಳವಡಿಸಿಕೊಂಡಿರುವ ಸೌಹಾರ್ದ ಸಹಕಾರಿಗಳು ತಮ್ಮ ಅನಿಸಿಕೆಯನ್ನು ಈ ಕೆಳಗಿನಂತೆ ವ್ಯಕ್ತಪಡಿಸಿದ್ದಾರೆ.

- ಸೇವಾ ಸಿಂಧು ಯೋಜನೆಯಿಂದ ನಮ್ಮ ಸೌಹಾರ್ದ ಸಹಕಾರಿಯು ಹೆಚ್ಚಿನ ಆದಾಯವನ್ನು ಪಡೆಯಲು ಅನುಕೂಲಕರವಾಗಿದೆ. **– ಶ್ರೀ ರಾಘವೇಂದ್ರ ಕರ್ಕೇರಾ, ಮುಖ್ಯ ಕಾರ್ಯನಿರ್ವಾಹಕರು, ಶ್ರೀ ರಾಮಾಂಜನೇಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ**
- ಸೇವಾ ಸಿಂಧು ಯೋಜನೆಯಿಂದ ನಮ್ಮ ಸದಸ್ಯರಿಗೆ ಹೆಚ್ಚಿನ ಉಪಯೋಗವಾಗಲಿದೆ ಹಾಗೂ ಹೆಚ್ಚಿನ ಜ್ಞಾನದ ಜೊತೆಗೆ ನಮ್ಮ ಸಹಕಾರಿಯ ಲಾಭವನ್ನು ಹೆಚ್ಚಿಸುವ ಒಂದು ವಿನೂತನ ಸೇವೆಯಾಗಿದೆ. **– ಶ್ರೀ ಭುವನೇಶ ಪ್ರಭು, ಮುಖ್ಯ ಕಾರ್ಯನಿರ್ವಾಹಕರು, ಸಾರಸ್ವತ ಸೌಹಾರ್ದ ಸಹಕಾರಿ ನಿ., ಉಡುಪಿ.**
- ಸಹಕಾರಿಯಲ್ಲಿ ಗ್ರಾಹಕರಿಗೆ, ಇ–ಸ್ಟಾಂಪಿಂಗ್, ಟಿ.ವಿ ರಿಚಾರ್ಜ್, ಆರ್.ಟಿ.ಸಿ. ಇ.ಸಿಯ ಸೌಲಭ್ಯವನ್ನು ನೀಡುವುದರಿಂದ ಇತರೆ ಆದಾಯವನ್ನು ಗಳಿಸಲು ಯಶಸ್ವಿಯಾಗಿದೆ. ಈ ಸೌಲಭ್ಯ ನೀಡುವುದರಿಂದ ಸಹಕಾರಿಗೆ ಹೆಚ್ಚು ಗ್ರಾಹಕರು ಬರುವುದರಿಂದ ಸಹಕಾರಿಯ ಸದಸ್ಯತ್ವವು ಹೆಚ್ಚಾಗುತ್ತದೆ. ಇದರಿಂದ ಸಹಕಾರಿ ಉತ್ತಮ ಮಟ್ಟದಲ್ಲಿ ಪ್ರಗತಿ ಹೊಂದಲು ಸಹಾಯಕವಾಗಿದೆ. **– ಶ್ರೀ ಎಂ.ಎಸ್. ಗಣಪತಿ, ಮುಖ್ಯ ಕಾರ್ಯನಿರ್ವಾಹಕರು, ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮಡಿಕೇರಿ.**
- ರೈತಾಪಿ ಜನರಿಗೆ ಈ ರೀತಿಯ ಸೇವಾ ಸೌಲಭ್ಯ ನೀಡುತ್ತಿರುವುದು ಸಹಕಾರಿಗೆ ಆದಾಯದಾಯಕವಾಗಿದೆ. **– ಶ್ರೀ ವೆಂಕಟೇಶ್, ಮುಖ್ಯ ಕಾರ್ಯನಿರ್ವಾಹಕರು, ಭೋಗನಂಜುಡೇಶ್ವರ ಸೌಹಾರ್ದ ಸಹಕಾರಿ ನಿ., ಚಿಕ್ಕಮಂಗಳೂರು.**
- ಈ ಯೋಜನೆಯನ್ನು ಸಹಕಾರಿಯಲ್ಲಿ ನೀಡುವುದರಿಂದ ಸಹಕಾರಿಯ ಗ್ರಾಹಕರ ಸಂಖ್ಯೆ ಹೆಚ್ಚಾಗುತ್ತದೆ. **– ವಾರಣಿ ಸೌಹಾರ್ದ ಸಹಕಾರಿ ನಿ., ಚಿಕ್ಕಮಂಗಳೂರು.**
- ಈ ಯೋಜನೆಯಿಂದ ಸಹಕಾರಿಯ ಗ್ರಾಹಕರ ಸಂಖ್ಯೆ ಹೆಚ್ಚಾಗಲಿದ್ದು, ಸಹಕಾರಿಯ ಆದಾಯವು ಹೆಚ್ಚಾಗಲಿದೆ. **– ಹೇಮಾವತಿ ಸೌಹಾರ್ದ ಸಹಕಾರಿ ನಿ., ಹಾಸನ.**
- ಇ–ಸ್ಟಾಂಪಿಂಗ್ ಜೊತೆಗೆ ವಿವಿಧ ಸೇವಾ ಚಟುವಟಿಕೆ ನೀಡುತ್ತಿರುವುದು ಸಹಕಾರಿಯ ಸದಸ್ಯರಿಗೆ ಹೆಚ್ಚಿನ ಉಪಯೋಗವಾಗಲಿದೆ. **– ಶ್ರೀ ಸುಧೀಂದ್ರ, ಮುಖ್ಯ ಕಾರ್ಯನಿರ್ವಾಹಕರು, ಯಡಗೆರೆ ಸೌಹಾರ್ದ ಸಹಕಾರಿ ನಿ., ಚಿಕ್ಕಮಂಗಳೂರು.**
- ಆರ್.ಟಿ.ಸಿ. ಇ.ಸಿ ಸೇವಾ ಸೌಲಭ್ಯ ನೀಡುತ್ತಿರುವುದು ಸಹಕಾರಿಗೆ ಆದಾಯ ಆಶಾದಾಯಕವಾಗಿದೆ. **– ಮುಖ್ಯ ಕಾರ್ಯನಿರ್ವಾಹಕರು, ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹಾಸನ.**

# ಸಹಕಾರ ಮೌಲ್ಯಗಳ ವಿಶ್ಲೇಷಣೆ



– ಶ್ರೀ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು

ಅಂತರ ರಾಷ್ಟ್ರೀಯ ಮೈತ್ರಿ ಸಂಸ್ಥೆಯು ವಿಶ್ವದ ಸಹಕಾರ ಸಂಘಗಳ/ 'ಸಹಕಾರಿ'ಗಳ ಅಭ್ಯುದಯ ಇಡೀ ಸಹಕಾರ ಚಳುವಳಿಯ ಬೆಳವಣಿಗೆ, ಅದರ ಉದ್ದೇಶವಾದ 'ಸರ್ವ ಜನಾಂಗದ ಶಾಂತಿಯ ತೋಟ' ನಿರ್ಮಾಣದ ಸಫಲತೆಯ ಸಾಧನೆಗಾಗಿ 1995ರಲ್ಲಿ ಸಹಕಾರ ತತ್ವಗಳೊಡನೆ ನಾಲ್ಕು ಅಂಶದ ಸಹಕಾರ ಮೌಲ್ಯಗಳನ್ನು ಸೇರ್ಪಡೆಗೊಳಿಸಿತು. ಈ ಮೌಲ್ಯಗಳನ್ನು ಸಹಕಾರ ಸಂಘ/'ಸಹಕಾರಿ' ಸಂಸ್ಥೆಗಳಲ್ಲಿ ನಾವು ಪಾಲಿಸುತ್ತಿದ್ದೇವೆಯೇ? ಪಾಲಿಸಲು ಸಾಧ್ಯವಾಗದಿದ್ದಲ್ಲಿ ಏಕೆ ಪಾಲಿಸಲಾಗುತ್ತಿಲ್ಲ? ಇದಕ್ಕೆ ಅಡಚಣೆಗಳು ತೊಂದರೆಗಳಾದರೂ ಏನು? ಎಂದು ಸಹಕಾರಿಗಳು ಆತ್ಮವಿಮರ್ಶೆ ಮಾಡಿಕೊಳ್ಳಲು ಇದು ಸಕಾಲ. ಏಕೆಂದರೆ ಕೆಲವು ಸಹಕಾರ ಸಂಘ/ 'ಸಹಕಾರಿ'ಗಳಲ್ಲಿ ಆಗುತ್ತಿರುವ ದುರ್ವ್ಯವಹಾರಗಳು, ಅನಾಹುತಗಳು ಅಪವ್ಯಯಗಳು, ಅಪರಾಧಗಳು ಇಡೀ ಸಹಕಾರ ಚಳುವಳಿ ಮತ್ತು ಸಹಕಾರ ವ್ಯವಸ್ಥೆಗೆ ಕಳಂಕ ಉಂಟುಮಾಡುತ್ತಿವೆ.

**ಈ ಸಹಕಾರ ಮೌಲ್ಯಗಳು ಯಾವುವು?**

1) ಸ್ವಯಂ ಸಹಾಯ ಮತ್ತು ಪರಸ್ಪರ ಸಹಾಯ (Self-help and mutual-help)
2) ಸ್ವಯಂ ಜವಾಬ್ದಾರಿ (Self – responsibility)
3) ಪ್ರಜಾಪ್ರಭುತ್ವ (Democracy)
4) ಸಮಾನತೆ, ನ್ಯಾಯ ಸಮ್ಮತ ಬಂಡವಾಳ ಮತ್ತು ಒಗ್ಗಟ್ಟು (Equality, equity and solidarity)

## 1) ಸ್ವಯಂ ಸಹಾಯ ಮತ್ತು ಪರಸ್ಪರ ಸಹಾಯ (Self-help and mutual-help ):-



'ಸಹಕಾರ' ಎಂಬ ಪದದ ಅರ್ಥವೇ ಒಬ್ಬರು ಮಾಡಲಾಗದ ಕಾರ್ಯವನ್ನು ಎಲ್ಲರ ಜೊತೆಗೂಡಿ ಮಾಡುವುದು. ಇದರಿಂದ ನನಗೆ ನಾನು ಸಹಾಯ ಮಾಡಿಕೊಳ್ಳುವುದಲ್ಲದೇ ಇತರರಿಗೂ ಸಹಾಯ ಮಾಡುತ್ತಿದ್ದೇನೆ ಮತ್ತು ಅವರಿಂದ ಸಹಾಯ ಪಡೆಯುತ್ತಿದ್ದೇನೆ. ಸಹಕಾರದ ಬೇರು ಇದರಲ್ಲಿ. ಈ ಚಿಂತನೆಯಲ್ಲಿ ಅಡಗಿದೆ ಅಥವಾ ಹುದುಗಿದೆ ಎಂದರೆ ತಪ್ಪಾಗುವುದಿಲ್ಲ. ನಾನು ಸಂಘದ/ 'ಸಹಕಾರಿ'ಯ ಸದಸ್ಯನಾಗಿ ಸಂಘದ ಉದ್ದೇಶದ ಸಫಲತೆಯ ಸಾಧನೆಯಲ್ಲಿ ಭಾಗಿಯಾಗಿದ್ದೇನೆ. ಅದರ ಸೇವೆ ಅಥವಾ ಸೌಲಭ್ಯವನ್ನು ಪಡೆದಿರುತ್ತೇನೆ. ಅದರ ಕಾರ್ಯಚಟುವಟಿಕೆಯಲ್ಲಿ ನನ್ನದು ಒಂದು ಪಾಲಿದೆ ಎಂಬ ಹೆಮ್ಮೆಯ ಗರಿಮೆ ಪ್ರತಿ ಸದಸ್ಯನಲ್ಲಿಯೂ ಮೂಡತಕ್ಕದ್ದು. ಉದಾಹರಣೆಗೆ ಪತ್ತಿನ/ಸಾಲ ಸಂಸ್ಥೆಯಲ್ಲಿ ಕನಿಷ್ಠ ಷೇರು ಅಲ್ಲದೇ ಗರಿಷ್ಠ ಷೇರು ತೊಡಗಿಸುವುದು, ಠೇವಣಿ ಇಡುವುದು, ಸಾಲಸೌಲಭ್ಯ ಪಡೆಯುವುದು ಮತ್ತು ಸಕಾಲದಲ್ಲಿ ಬಡ್ಡಿಸಹಿತ ಮರುಪಾವತಿಸುವುದು. ಇದರಿಂದ ತಾನು ಸಂಸ್ಥೆಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದಲ್ಲದೇ, ಇತರೇ ಸದಸ್ಯರಿಗೂ ಇದರ ಅನುಕೂಲ ಪಡೆಯಲು ಸಹಕರಿಸಿದಂತಾಗುತ್ತದೆ. 'ಉತ್ಪಾದಕ' ಸಹಕಾರ ಸಂಘ/ 'ಸಹಕಾರಿ' ಎಲ್ಲಿ ತನ್ನ ಉತ್ಪಾದನೆಯನ್ನು ಪೂರ್ಣಬದ್ಧತೆಯಿಂದ ತನ್ನದೇ ಆದ ಸಹಕಾರಿ ಸಂಸ್ಥೆಗೆ ಸರಬರಾಜು ಮಾಡುವುದು. ಇದರಿಂದ ಸಂಸ್ಥೆಯು ಸ್ಪರ್ಧಾತ್ಮಕವಾಗಿ ಮೌಲ್ಯವರ್ಧೀಕರಣ ಮತ್ತು ಮಾರುಕಟ್ಟೆ ಮಾಡಲು ಅನುವುಮಾಡಿಕೊಡಲು ಸಾಧ್ಯವಾಗುತ್ತದೆ. ಲಾಭದಾಯಕವಾದ ವ್ಯವಹಾರ ಮಾಡಲು ಸಾಧ್ಯವಾಗುತ್ತದೆ. ಇದರಿಂದ ತಾನು ಉಪಯುಕ್ತತೆ ಪಡೆಯುವುದಲ್ಲದೇ ಇತರೆ ಸದಸ್ಯರಿಗೂ ಇದರ ಲಾಭ ದೊರೆಯುವಂತಾಗುತ್ತದೆ. ಉದಾಹರಣೆಗೆ ಹಾಲು ಉತ್ಪಾದಕ ಸಹಕಾರ ಸಂಘಗಳು, ವಾಣಿಜ್ಯ ಉತ್ಪನ್ನ ಸಂಸ್ಕರಣೆ ಮತ್ತು ಮಾರಾಟ ಸಹಕಾರ ಸಂಘಗಳು, ಕೃಷಿ, ತೋಟಗಾರಿಕೆ ಉತ್ಪನ್ನ ಸಹಕಾರ ಸಂಘಗಳು, ಸಹಕಾರ ಸಕ್ಕರೆ ಕಾರ್ಖಾನೆಗಳು. ಈ ಮೌಲ್ಯ ಪಾಲನೆ ಸಹಕಾರ ಸಂಘ/ 'ಸಹಕಾರಿ'ಯಲ್ಲಿ ಅತ್ಯವಶ್ಯ. ಈ ಮೌಲ್ಯಪಾಲನೆಯಲ್ಲಿ ಸದಸ್ಯರು ವಿಫಲರಾಗುತ್ತಿರುವುದೇ ಅನೇಕ ಸಹಕಾರ ಸಂಸ್ಥೆಗಳು ಯಶಸ್ಸುಗಳಿಸಲು ಸಾಧ್ಯವಾಗದಿರುವುದು ಮತ್ತು ವಿಫಲತೆಗೆ ಕಾರಣವಾಗಿದೆ. ಸಹಕಾರ ಸಂಘ/ಸಹಕಾರಿ ತನ್ನ ಕಾರ್ಯಾಚರಣೆಯಲ್ಲಿ ಸದಸ್ಯರ ತೊಡಗಿಸುವಿಕೆಯಲ್ಲಿ ಪ್ರಾಧಾನ್ಯತೆ ನೀಡುವುದು ಅತಿಮುಖ್ಯ ಅಂಶವಾಗಿರುತ್ತದೆ. ಸದಸ್ಯೇತರರೊಡನೆ ವ್ಯವಹಾರ ಅಥವಾ ಸಾರ್ವಜನಿಕರೊಡನೆ ವ್ಯವಹಾರ ಸಾಂಕೇತಿಕವಾಗಿ ಎರಡನೇ ಅಂಶವಾಗಿರಬೇಕೇ ವಿನಃ ಅದೇ ಪ್ರಮುಖ ಅಂಶವಲ್ಲ. ಇದನ್ನು ಘನವೆತ್ತ ಸರ್ವೋಚ್ಚ ನ್ಯಾಯಾಲಯವು 'ಪರಸ್ಪರ ಸಹಾಯ ತತ್ವ (principles of mutuality) ಪ್ರಮುಖ ಎಂದು ತನ್ನ ತೀರ್ಪುಗಳಲ್ಲಿ ಉಲ್ಲೇಖಿಸಿರುವುದನ್ನು ನಾವು ನೆನಸಿಕೊಳ್ಳಬೇಕಾಗಿದೆ. ಈ ಮೌಲ್ಯವನ್ನು ಸದಸ್ಯರು ಮತ್ತು ಆಡಳಿತ ಮಂಡಳಿಯು ಅರಿತು ನಡೆದಾಗ ಸಹಕಾರ ಸಂಘ/

'ಸಹಕಾರಿ' ಯಶಸ್ಸು ಗಳಿಸಲು ಸಾಧ್ಯ ಎಂಬುದನ್ನು ಸಹಕಾರಿಗಳಾದ ನಾವು ಮನವರಿಕೆಮಾಡಿಕೊಳ್ಳಬೇಕಾಗಿದೆ.

### 2) ಸ್ವಯಂ ಜವಾಬ್ದಾರಿ (Self – responsibility)

ಯಾವುದೇ ಸಂಸ್ಥೆಯಲ್ಲಿ ಸಂಸ್ಥೆಯ ಭಾಗೀದಾರರು (stake holders) ತಮ್ಮ ತಮ್ಮ ಜವಾಬ್ದಾರಿಯನ್ನು ತಾವು ಅರಿತು ಅದರಂತೆ ನಡೆದರೆ ತಾನೇತಾನಾಗಿ ಸಂಸ್ಥೆ ಪ್ರಗತಿ ಸಾಧಿಸಲು ತನ್ನ ಧ್ಯೇಯೋದ್ಧೇಶಗಳನ್ನು ಸಾಧಿಸಲು ಸಾಧ್ಯವಾಗುತ್ತದೆ. ಸಹಕಾರ ಸಂಘ/ 'ಸಹಕಾರಿ'ಯಲ್ಲಿ ಇದು ಮತ್ತು ಉಚಿತ ಸ್ಥಾನವನ್ನು ಪಡೆಯುತ್ತದೆ ಎಂದರೆ ಅತಿಶಯೋಕ್ತಿಯಲ್ಲ. ಸಹಕಾರಿ ಸಂಸ್ಥೆಯಲ್ಲಿ ಭಾಗೀದಾರರುಗಳು ಯಾರು? ಪ್ರಪ್ರಥಮವಾಗಿ ಸದಸ್ಯರು, ಇದು ಸದಸ್ಯರಿಗಾಗಿ, ಸದಸ್ಯರಿಂದ, ಸದಸ್ಯರದೇ ಆದ ಸಂಸ್ಥೆ ಎಂಬುದನ್ನು ಮರೆಯಲಾಗದು. ಪ್ರತಿ ಸದಸ್ಯರು ತಮ್ಮ ಜವಾಬ್ದಾರಿಯನ್ನು ತಾವು ಅರಿತು ನಡೆಯತಕ್ಕದ್ದು ಎಂದು ನಿರೀಕ್ಷಿಸಲಾಗಿದೆ. ಸದಸ್ಯರ ಜವಾಬ್ದಾರಿಯನ್ನು ಎರಡು ರೀತಿಯಾಗಿ ವಿಂಗಡಿಸಬಹುದಾಗಿದೆ. ಒಂದು ಈಗಾಗಲೇ ಮೇಲೆ ವಿವರಿಸಿರುವಂತೆ ಸಂಸ್ಥೆಯ ಚಟುವಟಿಕೆಯಲ್ಲಿ ಭಾಗವಹಿಸುವಿಕೆ. ಸಂಸ್ಥೆಯ ಚಟುವಟಿಕೆಯಲ್ಲಿ ಅವರು ಜವಾಬ್ದಾರಿಯುತವಾಗಿ ಭಾಗಿಯಾದರೆ ಸಂಸ್ಥೆಯ ಉದ್ದೇಶ ಸಫಲವಾಗುವುದಲ್ಲದೇ ತಾವು ಸಂಸ್ಥೆಯ ಸೇವೆ ಮತ್ತು ಅನುಕೂಲತೆಯನ್ನು ಪಡೆದಂತಾಗುತ್ತದೆ. ಹೆಚ್ಚು ಹೆಚ್ಚು ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡಾಗ ಸಂಸ್ಥೆಯ ಚಟುವಟಿಕೆ, ವ್ಯವಹಾರ ಗಾತ್ರ ಅಧಿಕಗೊಳ್ಳುತ್ತದೆ. ಗಳಿಕೆಯೂ ಹೆಚ್ಚಳವಾಗುತ್ತದೆ. ಅದರಂತೆ ಹೆಚ್ಚು ಹೆಚ್ಚು ಸಂಸ್ಥೆಗಳು ತಮ್ಮ ವ್ಯವಹಾರಿಕ ಗಾತ್ರವನ್ನು ಹಿಗ್ಗಿಸಿಕೊಂಡಾಗ ಇಡೀ ಸಹಕಾರ ಚಳುವಳಿ ಬೆಳೆಯಲು, ಉಳಿಯಲು ಸಾಧ್ಯವಾಗುತ್ತದೆ. ಮತ್ತೊಂದು ಸದಸ್ಯರು ಸಂಸ್ಥೆಯ ಆಡಳಿತದಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದು, ಅದೆಂದರೆ ಸದಸ್ಯರು ಆಡಳಿತದಲ್ಲಿ ಪಾಲ್ಗೊಳ್ಳಲು ಇರುವ ಅವಕಾಶ, ಒಂದು ವಾರ್ಷಿಕ ಅಥವಾ ವಿಶೇಷ ಮಹಾಸಭೆ/ಸರ್ವಸದಸ್ಯರ ಸಭೆ/ಸಾಮಾನ್ಯ ನಿಕಾಯದಲ್ಲಿ ಹಾಜರಾಗಿ ಸಕ್ರಿಯವಾಗಿ ಕ್ರಿಯಾತ್ಮಕವಾಗಿ ಭಾಗವಹಿಸುವುದು. ವಿಷಯವಾರು ಅಧ್ಯಯನ ಮಾಡಿ ಸಂಸ್ಥೆಯ ಚಟುವಟಿಕೆಗಳನ್ನು ವಿಶ್ಲೇಷಣೆಮಾಡಿ ಸಕಾರಾತ್ಮಕವಾಗಿ ವರ್ತಿಸಿ ಸಂಸ್ಥೆಗೆ ಸಲಹೆ, ಸೂಚನೆಗಳನ್ನು ನೀಡುವುದು. ದೋಷಗಳಿದ್ದಲ್ಲಿ, ತಪ್ಪುಗಳಿದ್ದಲ್ಲಿ ಅವುಗಳನ್ನು ಎತ್ತಿ ತೋರಿಸಿ ಸರಿಪಡಿಸುವ ಕ್ರಮಗಳ ಬಗ್ಗೆ ಚರ್ಚಿಸುವುದು. ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕರಿಸುವುದು. ಹಿಂದಿನ ನಿರ್ಧಾರಗಳು ರೂಪಿಸಿದ ನೀತಿಗಳ ಅನುಷ್ಠಾನದ ಬಗ್ಗೆ ಪರಿಶೀಲಿಸುವುದು ಇಂತಹ ಕ್ರಿಯೆಗಳಿಂದ ಸಂಸ್ಥೆಯನ್ನು ರೂಪಿಸುವಲ್ಲಿ ಸದಸ್ಯರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುತ್ತದೆ. ಎರಡನೆಯದಾಗಿ ಸದಸ್ಯರು ತಮ್ಮ ಪ್ರತಿನಿಧಿಗಳನ್ನು ತಾವು ಆಯ್ಕೆ ಮಾಡುವಲ್ಲಿ ಜವಾಬ್ದಾರಿಯುತ ನಿರ್ವಹಣೆ, ಅಂದರೆ ಐದು ವರ್ಷಕ್ಕೊಮ್ಮೆ ನಡೆಯುವ ಆಡಳಿತ ಮಂಡಳಿ ಸದಸ್ಯರ (ನಿರ್ದೇಶಕರ) ಚುನಾವಣೆಯಲ್ಲಿ ಪಾಲ್ಗೊಂಡು ತಪ್ಪದೇ ಉತ್ತಮ ಸದಸ್ಯರ ಮೇಲೆ ತಮ್ಮ ಹೊಣೆಗಾರಿಕೆ ಇದೆ ಎಂದು ಅರಿತು ನಡೆಯುವಂತಹ ತಮ್ಮ ಪ್ರತಿನಿಧಿಗಳನ್ನು ಚುನಾವಣೆ ಮೂಲಕ ಆಯ್ಕೆ ಮಾಡುವುದು ಸದಸ್ಯರ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳನ್ನು 'ಸ್ವಯಂ ಜವಾಬ್ದಾರಿ' ಎಂದು ಸದಸ್ಯರು ಅರಿತಿರಬೇಕಾಗುತ್ತದೆ.

ಎರಡನೆಯದಾಗಿ ಭಾಗೀದಾರರು ಆಡಳಿತ ಮಂಡಳಿ ಸದಸ್ಯರು/ನಿರ್ದೇಶಕರು ಮತ್ತು ಅವರಲ್ಲಿ ಆಯ್ಕೆಯಾದ ಪದಾಧಿಕಾರಿಗಳು ಅಧ್ಯಕ್ಷರು, ಉಪಾಧ್ಯಕ್ಷರು, ಚುನಾಯಿತ ಆಡಳಿತ ಮಂಡಳಿಯು ಐದು ವರ್ಷ ಅಧಿಕಾರದಲ್ಲಿರುತ್ತದೆ. ತಮ್ಮ ಅಧಿಕಾರಾವಧಿಯಲ್ಲಿ ತಾವು ಸದಸ್ಯರ ಬಗ್ಗೆ ತಮ್ಮ ಹೊಣೆಗಾರಿಕೆಯನ್ನು ಅರಿತು ಅವರ ನಿರೀಕ್ಷೆಗಳನ್ನು, ಆಸೆ, ಆಕಾಂಕ್ಷೆ, ಅವಶ್ಯಕತೆಗಳನ್ನು ಪೂರೈಸುವ ಪ್ರಾಮಾಣಿಕ ಪ್ರಯತ್ನ ಮತ್ತು ಅದು ಅವರ ಕರ್ತವ್ಯವೆಂದೇ ಪರಿಗಣಿಸಿ ದುಡಿಯಬೇಕಾದುದು ಅವರ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಯಲ್ಲಿ ವಿಫಲರಾಗುವುದು ತಮ್ಮ ಸ್ವಹಿತಾಸಕ್ತಿಯಲ್ಲಿ ತೊಡಗಿಸಿಕೊಳ್ಳುವುದು ಅಪ್ರಾಮಾಣಿಕರಾಗಿ ವರ್ತಿಸುವುದು, ಸದಸ್ಯರ ಹಿತಾಸಕ್ತಿ ಕಡೆಗಣಿಸುವುದು ಆದಲ್ಲಿ ಸಂಸ್ಥೆಯು ಯಶಸ್ಸು ಗಳಿಸಲು ಸಾಧ್ಯವಿರುವುದಿಲ್ಲ ಮತ್ತು ಇಡೀ ಸಹಕಾರ ಚಳುವಳಿಗೆ ಕಳಂಕ ತಟ್ಟುವುದಕ್ಕೆ ಕಾರಣವಾಗುತ್ತದೆ ಎಂಬುದನ್ನು ಮರೆಯಬಾರದು.

ಮೂರನೆಯದಾಗಿ ಸಿಬ್ಬಂದಿ ವರ್ಗ, ನೌಕರದಾರರು, ಮುಖ್ಯಕಾರ್ಯನಿರ್ವಾಹಕರನ್ನು ಒಳ ಗೊಂಡಂತೆ ಸಂಸ್ಥೆಯು ತಮ್ಮ ಸಂಸ್ಥೆ, ಸದಸ್ಯರು ಇದರ ಯಜಮಾನರೂ ಅವರೇ ಇದರ ಗ್ರಾಹಕರೂ ಆಗಿರುತ್ತಾರೆ ಎಂಬ ಪರಿಜ್ಞಾನವನ್ನು ಹೊಂದಿರಬೇಕಾಗುತ್ತದೆ. ಅವರ ಸೇವೆಯಲ್ಲಿಯೇ ಸಂಸ್ಥೆಯ ಹಿತಾಸಕ್ತಿ ಅಡಗಿದೆ ಎಂಬುದನ್ನು ಅರಿತಿರಬೇಕು. ಸಂಸ್ಥೆಯು ಲಾಭದಾಯಕವಾಗಿ ನಡೆದಲ್ಲಿ ತಮ್ಮ ವೇತನ ಮತ್ತು ಇತರೆ ಸೌಕರ್ಯಗಳು ಸಾಧ್ಯ. ಸಂಸ್ಥೆಯಲ್ಲಿ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತು ಅದರಂತೆ ನಡೆದರೆ ಸಂಸ್ಥೆಯು ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ.

ಹೀಗೆ ಸಂಸ್ಥೆಯ ಭಾಗೀದಾರರಾದ ಸದಸ್ಯರು, ಆಡಳಿತ ಮಂಡಳಿ ಸದಸ್ಯರು/ ನಿರ್ದೇಶಕರು, ಪದಾಧಿಕಾರಿಗಳು ಸಿಬ್ಬಂದಿ, ನೌಕರಶಾಹಿ ಕೂಡ ಸ್ವಯಂ ಆಗಿ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಅರಿತು ನಡೆದಾಗ 'ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ' ಎಂಬ ಮಾತು ನಿಜ ಸ್ವರೂಪವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

### 3) ಪ್ರಜಾಪ್ರಭುತ್ವ (Democracy)

ಸಹಕಾರ/'ಸಹಕಾರಿ'ಯ ಆಡಳಿತ 'ಪ್ರಜಾಪ್ರಭುತ್ವ'ದ ತಳಹದಿಯ ಮೇಲೆ ನಿಂತಿದೆ. ಆದುದರಿಂದಲೇ ಇದನ್ನು ಖಾಸಗಿ ವಲಯ ಮತ್ತು ಸಾರ್ವಜನಿಕ ವಲಯದ ಮಧ್ಯದ 'ಸುವರ್ಣ ಮಾಧ್ಯಮ' (Golden mean) ಎಂದು ಕರೆಯಲಾಗಿದೆ. ಒಬ್ಬ ಸದಸ್ಯ ತಾನು ಎಷ್ಟೇ ಬಂಡವಾಳವನ್ನು ಷೇರಿನಲ್ಲಿ ಹೂಡಿಕೆ ಮಾಡಿದ್ದರೂ ಅವನಿಗೆ ಇರುವುದು ಒಂದೇ ಮತ. 'ಪ್ರಭುತ್ವ' ಅಥವಾ




ಆಡಳಿತ ಚುಕ್ಕಾಣಿಯಲ್ಲಿ ಎಲ್ಲರಿಗೂ ಸಮಾನ ಹಕ್ಕು. ಐದು ವರ್ಷದ ಆಡಳಿತದ ಜವಾಬ್ದಾರಿ ಈ ಚುನಾಯಿತ ಆಡಳಿತ ಮಂಡಳಿಯದು. ಚುನಾಯಿತ ಆಡಳಿತ ಮಂಡಳಿ ಒಂದು ಸಂಸ್ಥೆಯ ಆಡಳಿತ ನಡೆಸುತ್ತಿದ್ದಲ್ಲಿ ಇದು ಸಂಸ್ಥೆಯ ಆರೋಗ್ಯ ಸೂಚಕ. ಚುನಾಯಿತ ಆಡಳಿತ ಮಂಡಳಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಎಡವಿದಾಗ, ಜವಾಬ್ದಾರಿಯಿಂದ ತಪ್ಪಿಸಿಕೊಂಡಾಗ ಪರ್ಯಾಯವಾಗಿ ಆಡಳಿತಾಧಿಕಾರಿ, ವಿಶೇಷಾಧಿಕಾರಿ ಆಡಳಿತ ನಿರ್ವಹಣೆ ವಹಿಸಿಕೊಳ್ಳಬೇಕಾಗುತ್ತದೆ. ಪ್ರಜಾಸತ್ತಾತ್ಮಕ ಆಡಳಿತದ ತಳಹದಿಯ ಹೊಣೆಗಾರಿಕೆ ಅಥವಾ ಉತ್ತರದಾಯಿತ್ವ ಯಾರು ಈ ಜವಾಬ್ದಾರಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವರೋ ಅವರು ಅತ್ಯುತ್ತಮ ನಾಯಕರಾಗಿ ರೂಪುಗೊಳ್ಳುತ್ತಾರೆ. ಅತ್ಯುತ್ತಮ ನಾಯಕತ್ವ ಅತ್ಯುತ್ತಮ ಸಂಸ್ಥೆಯನ್ನು ರೂಪುಗೊಳಿಸುತ್ತದೆ. ತಾವು ಉತ್ತರದಾಯಿಗಳಾಗಿ/ ವರ್ತಿಸುವುದಲ್ಲದೆ ತಮ್ಮ ತೀರ್ಮಾನ ನಿರ್ಧಾರಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದು. ತೀರ್ಮಾನ ತೆಗೆದುಕೊಳ್ಳುವಲ್ಲಿ ಎಲ್ಲ ನಿರ್ದೇಶಕರು, ಸದಸ್ಯರು, ಸಿಬ್ಬಂದಿಯನ್ನು ಪಾಲ್ಗೊಳ್ಳುವಂತೆ ಮಾಡಿ ಅವರ ಅನಿಸಿಕೆ ಅನುಭವಗಳನ್ನು ಗಣನೆಗೆ ತೆಗೆದುಕೊಳ್ಳುವುದು. ಯಾವುದೇ ಯೋಜನೆ, ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಮುಂದಾಲೋಚನೆ, ದೂರಾಲೋಚನೆ, ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿ ವಿವೇಚನಯುಕ್ತ ನಿರ್ಧಾರ ತೆಗೆದುಕೊಳ್ಳುವುದು. ಅಲ್ಲದೇ ಪ್ರಾಮಾಣಿಕತೆಯಿಂದ ವರ್ತಿಸುವುದು ಅತಿಮುಖ್ಯವಾಗುತ್ತದೆ. ಇದರಿಂದ ಸಂಸ್ಥೆಯಲ್ಲಿ ಹಾಲಿ ಪರಿಸ್ಥಿತಿಯನ್ನು ಲಾಭದಾಯಕವಾಗಿ ನಡೆಸಿ ಸದಸ್ಯರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ಮಾನವನ ನಾಗರೀಕತೆಯ ಬೆಳವಣಿಗೆಯಲ್ಲಿ 'ಪ್ರಜಾಪ್ರಭುತ್ವ'ವೇ ಅತ್ಯುತ್ತಮ ಆಡಳಿತ ರಾಜಕೀಯ ವ್ಯವಸ್ಥೆಯೇ ಅತ್ಯುತ್ತಮ ಎಂಬುದು ಚಾರಿತ್ರ್ಯಾತ್ಮಕವಾಗಿ ಸಾಭೀತಾಗಿದೆ. ಸಹಕಾರ ಸಂಸ್ಥೆಗಳು ಮೂಲಭೂತವಾಗಿ ವ್ಯವಹಾರಿಕ ಸಂಸ್ಥೆಗಳಾಗಿರುವುದರಿಂದ ಚುನಾಯಿತ ಆಡಳಿತ ಮಂಡಳಿಯ ಕರ್ತವ್ಯ ಮತ್ತು ಜವಾಬ್ದಾರಿ ಮತ್ತೂ ಹೆಚ್ಚಿನ ಮಟ್ಟದಲ್ಲಿರ ಬೇಕಾಗಿರುವುದು ಅತಿ ಅವಶ್ಯ ಅಂಶ. ಸಂಸ್ಥೆಯು ಪೀಳಿಗೆಯಿಂದ ಪೀಳಿಗೆಗೆ ಮುಂದುವರೆದು ಶಾಶ್ವತವಾಗಿ ನೆಲೆಗೊಳ್ಳುವಂತಾಗಬೇಕು ಎಂಬ ಆಶಯ ಸಂಸ್ಥೆಯ ಎಲ್ಲ ಬಾಗೀದಾರರದು ಆಗಿರಬೇಕು. ಕಳವಳದ ಅಂಶವೆಂದರೆ ರಾಜಕೀಯ ಪ್ರಜಾಪ್ರಭುತ್ವದಲ್ಲಿನ ಅನೇಕ ಓರೆಕೋರೆಗಳು, ದುಷ್ಟ ಆಚರಣೆಗಳು ನಮ್ಮ ಸಂಸ್ಥೆಗಳಲ್ಲಿಯೂ ಒಳನುಸುಳುತ್ತಿರುವುದನ್ನು ಕಾಣುತ್ತಿದ್ದೇವೆ. ಇದು ನಕಾರಾತ್ಮಕ ಬೆಳವಣಿಗೆಯಾಗಿದ್ದು, ಸಹಕಾರ ಚಳುವಳಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದುದರಿಂದ ಸಹಕಾರಿಗಳು ಇದರಿಂದ ದೂರವಿದ್ದು, ಸಂಸ್ಥೆಗಳ ಸಕಾರಾತ್ಮಕ ಬೆಳವಣಿಗೆಗೆ ಪೂರಕವಾಗಿ ವರ್ತಿಸುವುದು ಈ ದಿನಗಳ ಅವಶ್ಯಕತೆಯಾಗಿದೆ. ಈ ಮೌಲ್ಯವನ್ನು ಕಾಪಾಡುವುದು ಪ್ರತಿ ಸದಸ್ಯನ ಕರ್ತವ್ಯವಾಗಿರುತ್ತದೆ.

### 4) ಸಮಾನತೆ, ನ್ಯಾಯ ಸಮ್ಮತ (ಬಂಡವಾಳ) ಒಗ್ಗಟ್ಟು (Equality, equity and solidarity)

ಸಹಕಾರ ಮತ್ತು ಸಮಾನತೆ ಒಂದೇ ನಾಣ್ಯದ ಎರಡು ಮುಖಗಳಂತೆ. ಎಲ್ಲಿ ಸಮಾನತೆ ಇದೆಯೋ ಅಲ್ಲಿಯೇ ಸಹಕಾರವಿರಲು ಸಾಧ್ಯ. ಎಲ್ಲಿ ಸಹಕಾರವಿದೆಯೋ ಅಲ್ಲಿ ಸಮಾನತೆ ಇರಲೇ ಬೇಕು. ಕೆಲವರು ಹೆಚ್ಚು ಸಮಾನರು ಎಂಬ ಧೋರಣೆ, ತಾರತಮ್ಯ ಮಾಡಿದಂತಾಗುವುದಲ್ಲದೆ ಅಲ್ಲಿ ಸಂಸ್ಥೆಯ ವಿಫಲತೆಗೆ ಕಾರಣವಾಗುತ್ತದೆ. ಸಂಸ್ಥೆಯ ಸದಸ್ಯರಾದೊಡನೆ ತಾವು ಸದಸ್ಯರಾಗಿ ಸಮಾನರು ಎಂಬ ಭಾವ ಎಲ್ಲರಲ್ಲೂ ಮೂಡತಕ್ಕದ್ದು. ಆದುದರಿಂದ ಸಮಾನತೆಯನ್ನು ಒಂದು ಮೌಲ್ಯವಾಗಿ ಪರಿಗಣಿಸಲಾಗಿದೆ. ಒಬ್ಬ ಸದಸ್ಯರಿಗೆ ಒಂದು ಮತ ಎಂಬುದನ್ನು ಇದು ಪ್ರತಿಬಿಂಬಿಸುತ್ತದೆ. ಸಮಾನತೆಯ ಮೌಲ್ಯವು 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ತಮ್ಮ ಸಮಾಜ ನಿರ್ಮಾಣಕ್ಕೆ ಬುನಾಧಿಯಾಗುತ್ತದೆ. ಎಲ್ಲರೂ ಸಂಸ್ಥೆಯ ದೃಷ್ಟಿಯಿಂದ ಸಮಾನರು. ನ್ಯಾಯಸಮ್ಮತೆ, ಧರ್ಮ, ನೀತಿ ಎಂಬುದು (equity) ಅವಶ್ಯ. ಅಲ್ಲದೇ ಬಂಡವಾಳ (ವಾಣಿಜ್ಯಾತ್ಮಕವಾಗಿ) ವೂ ಅವಶ್ಯ. ಬಂಡವಾಳ ಕೌಢೀಕರಣದಲ್ಲೂ ನ್ಯಾಯ, ನೀತಿ, ಧರ್ಮ ಪಾಲನೆ ಅವಶ್ಯಕತೆ ಇದೆ. ಒಗ್ಗಟ್ಟು (solidarity) ಬಹುಮುಖ್ಯ. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬುದು ಎಲ್ಲರೂ ಬಲ್ಲ ನಾಣ್ನುಡಿ. ಸಹಕಾರ ಸಂಘ/ 'ಸಹಕಾರಿ' ಸದಸ್ಯರಲ್ಲಿ ಒಗ್ಗಟ್ಟಿದ್ದರೆ ಎಂತಹ ದುಷ್ಟಶಕ್ತಿ, ಆಂತರಿಕ ಅಥವ ಬಾಹ್ಯದಲ್ಲಿಯಾದರೂ ಹುಟ್ಟಿಕೊಂಡಲ್ಲಿ ಸವಾಲುಗಳು ಎದುರಾದಲ್ಲಿ ಸ್ಪರ್ಧೆ ಉಂಟಾದಲ್ಲಿ ಅದನ್ನು ಎದುರಿಸಿ ಮೆಟ್ಟಿನಿಲ್ಲಲು ಸಾಧ್ಯವಾಗುತ್ತದೆ. ಒಗ್ಗಟ್ಟು ಸಂಸ್ಥೆಯ ಸಾಮರ್ಥ್ಯವಾಗಬೇಕು.

ಈ ಸಹಕಾರ ಮೌಲ್ಯಗಳ ಪಾಲನೆಯಲ್ಲಿ ನಮ್ಮ ಸಹಕಾರ ಸಂಸ್ಥೆಗಳ ಅವುಗಳಲ್ಲಿನ ಭಾಗೀದಾರರು ಪಾಲಿಸಿದಲ್ಲಿ ಯಶಸ್ವಿ ಸಹಕಾರ ಸಂಸ್ಥೆಯಾಗಿ ರೂಪುಗೊಳ್ಳುವುದರಲ್ಲಿ ಸಂಶಯವಿಲ್ಲ. ಅದರಂತೆ ಸಹಕಾರ ಚಳುವಳಿಯು ಸಮಾಜಕ್ಕೆ ಸಮುದಾಯಕ್ಕೆ ತನ್ನದೇ ಆದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕೊಡುಗೆ ನೀಡಲು ಸಾಧ್ಯವಾಗುತ್ತದೆ.

ಅಸಮದಲಿ ಸಮತೆಯನು, ವಿಷಮದಲಿ ಮೈತ್ರಿಯನು ।
ಅಸಮಂಜಸದಿ ಸಮನ್ವಯ ಸೂತ್ರನಯವ ॥
ವೆಸನಮಯ ಸಂಸಾರದಲಿ ವಿನೋದವ ಕಾಣ್ಬ ।
ರಸಿಕತೆಯ ಯೋಗವೆಲೊ – ಮಂಕುತಿಮ್ಮ ॥

– ಡಿ.ವಿ.ಜಿ

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–6)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-6)



– ಶ್ರೀ ಯಶವಂತ ಡೋಂಗ್ರೆ

**ಎಸ್‌ಡಿಜಿ 6 : ಜಗತ್ತಿನೆಲ್ಲೆಡೆ, ಎಲ್ಲರಿಗೂ ಉತ್ತಮ ಗುಣಮಟ್ಟದ ನೀರು ಮತ್ತು ನೈರ್ಮಲ್ಯ ದೊರೆಯುವಂತೆ ಮಾಡುವುದು ಮತ್ತು ಅವುಗಳ ಸುಸ್ಥಿರ ವ್ಯವಸ್ಥಾಪನ ಮಾಡುವುದು**

**(Ensure availability and sustainable management of water and sanitation for all)**

ಈ ಗುರಿಯು ಸುಸ್ಥಿರ ಅಭಿವೃದ್ಧಿಯ ದ್ಯೋತಕವಾದ ಉತ್ತಮ ಆರೋಗ್ಯ ಮತ್ತು ಪೋಶಣೆಗೆ ಮೂಲಾಧಾರವಾದ ನೀರು ಮತ್ತು ನೈರ್ಮಲ್ಯದ ಬಗ್ಗೆ ನಿರ್ದಿಷ್ಟ ಸಾಧನೆಯನ್ನು ಅಪೇಕ್ಷಿಸುತ್ತದೆ. 2030ರ ಒಳಗೆ ಜಗತ್ತಿನೆಲ್ಲಡೆ ಎಲ್ಲ ಜನರಿಗೆ ಶುದ್ಧ ನೀರು ದೊರೆಯುವಂತೆ ಮಾಡಬೇಕೆಂದೂ ಮತ್ತು ಎಲ್ಲರ ಪರಿಸರ ಶಚಿತ್ವದಿಂದ ಕೂಡಿರುವಂತೆ ನೋಡಿಕೊಳ್ಳಬೇಕೆಂದೂ ಈ ಗುರಿಯು ವಿಧಿಸುತ್ತದೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸಾರ್ವತ್ರಿಕ ಮತ್ತು ಸಮಾನ ಪ್ರವೇಶ, ಎಲ್ಲರಿಗೂ ಸಮಾನ ನೈರ್ಮಲ್ಯದ ಸಾಧನೆ, ಮುಕ್ತ ಮಲವಿಸರ್ಜನೆಯ ಪೂರ್ಣ ನಿಲುಗಡೆ, ಮಾಲಿನ್ಯ ಮತ್ತು ಕೈಗಾರಿಕೆಗಳಿಂದ ಅಪಾಯಕಾರಿ ರಾಸಾಯನಿಕಗಳ ಬಿಡುಗಡೆಯನ್ನು ಈಗಿರುವ ಪ್ರಮಾಣದ ಅರ್ಧಕ್ಕೆ ಇಳಿಸುವುದು, ತ್ಯಾಜ್ಯ ನೀರಿನ ಮರುಸಂಸ್ಕರಣೆ ಮತ್ತು ಉಪಯೋಗವನ್ನು ಈಗಿನ ಪ್ರಮಾಣದ ದುಪ್ಪಟ್ಟುಗೊಳಿಸುವುದು, ನೀರಿನ ಸಮಸ್ಯೆಯಿಂದ ಬಳಲುತ್ತಿರುವ ಜನಸಂಖ್ಯೆಯ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವುದು ಮತ್ತು ಜಲ ಸಂಪನ್ಮೂಲ ನಿರ್ವಹಣೆಯ ಗುಣಮಟ್ಟವನ್ನು ಹೆಚ್ಚಿಸುವ ಕುರಿತಂತೆ ಗುರಿಗಳನ್ನು ನಿಗದಿಪಡಿಸಲಾಗಿದೆ. 2020ರ ವೇಳೆಗೆ ಪರ್ವತಗಳು, ಕಾಡುಗಳು, ಗದ್ದೆಗಳು, ನದಿಗಳು, ಜಲಚರಗಳು ಮತ್ತು ಸರೋವರಗಳನ್ನು ಸೇರಿದಂತೆ ನೀರಿನ ಸಂಬಂಧಿತ ಪರಿಸರ ವ್ಯವಸ್ಥೆಗಳನ್ನು ರಕ್ಷಿಸಿ ಪುನರ್‌ಸ್ಥಾಪಿಸುವ, 2030 ವೇಳೆಗೆ ನೀರಿನ ಕೊಯ್ಲು, ನೀರಿನ ದಕ್ಷ ಉಪಯೋಗ, ನೀರಿನ ಮರುಬಳಕೆಗಳಿಗೆ ಸಂಬಂಧಿಸಿದ ತಂತ್ರಜ್ಞಾನವನ್ನು ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಉತ್ತಮವಾಗಿ ಅಭಿವೃದ್ಧಿಪಡಿಸಿ ಎಲ್ಲರಿಗೂ ದೊರೆಯುವಂತೆ ಮಾಡುವ ಹಾಗೂ ನೀರು ಮತ್ತು ನೈರ್ಮಲ್ಯದ ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಯನ್ನು ಬೆಂಬಲಿಸಿ, ಉತ್ತೇಜಿಸುವ ಗುರಿಗಳನ್ನು ಎಸ್‌ಡಿಜಿ 6ರಲ್ಲಿ ನಿಗದಿಪಡಿಸಲಾಗಿದೆ.

ಸುಸ್ಥಿರ ಅಭಿವೃದ್ಧಿಯ ಒಂದು ಪ್ರಮುಖ ಲಕ್ಷಣವೆಂದರೆ ಸುಸ್ಥಿರ ಆರೋಗ್ಯ. ಅನಾರೋಗ್ಯಕ್ಕೆ ಕಾರಣವಾಗುವ ಅಂಶಗಳಲ್ಲಿ ಪ್ರಮುಖವಾದುದು ಅಶುಚಿಯಾದ ನೀರಿನ ಸೇವನೆ. ಜಗತ್ತಿನಲ್ಲಿ ಉತ್ತಮ ನೀರು ಮತ್ತು ನೈರ್ಮಲ್ಯ ದೊರೆಯದಿರುವ ಜನಸಂಖ್ಯೆ ಇಂದಿಗೂ ಬಹಳ ದೊಡ್ಡದಾಗಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ವರದಿಯಲ್ಲಿ ಉಲ್ಲೇಖಿಸಿರುವಂತೆ ಜಗತ್ತಿನಾದ್ಯಂತ ಶುದ್ಧ ಕುಡಿಯುವ ನೀರನ್ನು ನಿರಂತರವಾಗಿ ಪಡೆಯಲಾಗದಿರುವ ಜನಸಂಖ್ಯೆ ಸುಮಾರು 663 ದಶಲಕ್ಷದಷ್ಟಿದ್ದರೆ, ಸುಮಾರು 1.8 ಬಿಲಿಯನ್ ಜನ ಅಶುದ್ಧ ನೀರನ್ನೇ ಬಳಸುತ್ತಿದ್ದಾರೆ. ಶೌಚಾಲಯಗಳಂತಹ ನೈರ್ಮಲ್ಯದ ಅಗತ್ಯಗಳನ್ನು ಹೊಂದಿಲ್ಲದ ಜನಸಂಖ್ಯೆ ಸುಮಾರು 2.4 ಬಿಲಿಯನ್‌ನಷ್ಟಿದೆ. 2025ರ ವೇಳೆಗೆ ಜಗತ್ತಿನ ಅರ್ಧದಷ್ಟು ಜನಸಂಖ್ಯೆ ಒಂದಲ್ಲ ಒಂದು ರೀತಿಯಲ್ಲಿ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುತ್ತದೆ ಎಂದೂ ಈ ವರದಿಯಲ್ಲಿ ತಿಳಿಸಲಾಗಿದೆ. ನೀರಿನ ಸಮಸ್ಯೆಗಳನ್ನು ಎದುರಿಸುತ್ತಿರುವ ಜನರಲ್ಲಿ ಗ್ರಾಮೀಣ ಜನತೆ ಮತ್ತು ನಗರವಾಸಿಗಳಿಬ್ಬರೂ ಸೇರಿದ್ದಾರಾದರೂ, ಈ ಎರಡೂ ಪ್ರದೇಶದಲ್ಲಿ ಸಮಸ್ಯೆ ಎದುರಿಸುತ್ತಿರುವವರೆಲ್ಲರೂ ಬಡಜನರು. ಆದುದರಿಂದ ನೀರು ಮತ್ತು ನೈರ್ಮಲ್ಯದ ಗುರಿಗಳನ್ನು ಸಾಧಿಸಬೇಕಾದರೆ ಎಲ್ಲ ದೇಶಗಳ ಎಲ್ಲ ಕ್ಷೇತ್ರಗಳೂ ಕೈಜೋಡಿಸಬೇಕಾದ ಅಗತ್ಯವಿದೆ.

**ಸಹಕಾರಿ ಸಂಘಟನೆಗಳ ಪಾತ್ರ :**

ಸಹಕಾರಿ ಸಂಘಟನೆಗಳು 'ಸಮುದಾಯ ಕಾಳಜಿ' ಹೊಂದಿರುವ ಆರ್ಥಿಕ ಸಂಘಟನೆಗಳು. ಆದುದರಿಂದ ಸಮುದಾಯದ ಸಾರ್ವಜನಿಕ ಉಪಯೋಗದ ಯಾವುದೇ ಸೇವೆಯನ್ನು ಸಹಕಾರಿ ಸಂಘಗಳು ಸಮರ್ಪಕವಾಗಿ ನಿರ್ವಹಿಸಬಲ್ಲವು. ನೀರು ಬಹುಕಾಲದಿಂದ ಜನರ ಅಗತ್ಯದ ಮತ್ತು ಅಮೂಲ್ಯ ವಸ್ತುವಾಗಿದ್ದು ನೀರಿನ ಸಮರ್ಪಕ ವಿತರಣೆ ಮತ್ತು ಬಳಕೆಯ ಬಗ್ಗೆ ಸಹಕಾರಿ ಕ್ಷೇತ್ರವು ಮೊದಲಿನಿಂದಲೂ ಆಸಕ್ತಿ ವಹಿಸಿದೆ. ಹಲವು ದೇಶಗಳಲ್ಲಿ ಸಾರ್ವಜನಿಕ ನೀರು ವಿತರಣಾ ವ್ಯವಸ್ಥೆಯನ್ನು ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತಿವೆ. ಉದಾಹರಣೆಗೆ, ಅಮೆರಿಕಯಲ್ಲಿ ಸ್ಥಳೀಯ ಮುನಿಸಿಪಲ್ ಸಂಸ್ಥೆಗಳಷ್ಟೇ ಪ್ರಮುಖವಾಗಿ ನೀರಿನ ಸರಬರಾಜು ಜವಾಬ್ದಾರಿಯನ್ನು ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತಿವೆ.

ನೀರು ನಿರ್ವಹಣೆಯ ಹೊಣೆಹೊತ್ತ ಪ್ರಪಂಚದ ಅತಿ ದೊಡ್ಡ ಸಹಕಾರಿ ಸಂಘವು ಬೊಲಿವಿಯ ದೇಶದಲ್ಲಿದೆ. ಈ ದೇಶದ ಸಾಂಟ ಕ್ರುಜ್ ಡೆ ಲ ಸಿಯೆರ ಪ್ರಾಂತ್ಯದ 1.3 ದಶಲಕ್ಷ ಜನಸಂಖ್ಯೆಯಲ್ಲಿ ಶೇಕಡ 99ರಷ್ಟು ಜನಕ್ಕೆ ಇಡೀ ಲ್ಯಾಟಿನ್ ಅಮೆರಿಕದಲ್ಲೆ ಅತ್ಯಂತ ಶುಚಿಯಾದ ನೀರನ್ನು ಒದಗಿಸುತ್ತಿರುವ ಮತ್ತು ಒಳಚರಂಡಿ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿರುವ ಸಂಸ್ಥೆ SAGUAPAC ಸಹಕಾರಿ. ಈ ಸಹಕಾರಿ ಸಂಸ್ಥೆಯು ಕೇವಲ ಶುದ್ಧ ಕುಡಿಯುವ ನೀರನ್ನು ಒದಗಿಸುವುದಲ್ಲದೆ ಕ್ಯೋಟೋ ಪ್ರೋಟೋಕಾಲ್ ಅನ್ವಯ ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಬಳಸಿದ ನೀರನ್ನು ಪುನರ್ ಸಂಸ್ಕರಿಸಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 38
Licensed to post without Prepayment License No. PMG BG/WPP-384/2020-2022.

ಉಪಯೋಗಿಸುವ ತಂತ್ರಜ್ಞಾನವನ್ನೂ ಬಳಸುತ್ತಿದೆ. ಆಸ್ಟ್ರಿಯ ದೇಶದಲ್ಲಿ 5000ಕ್ಕೂ ಹೆಚ್ಚು ನೀರು ವ್ಯವಸ್ಥಾಪನಾ ಸಹಕಾರಿ ಸಂಘಗಳಿದ್ದು ಗ್ರಾಮೀಣ ಪ್ರದೇಶದಲ್ಲಿ ಶುದ್ಧ ನೀರನ್ನು ನೀಡುವ ಜವಾಬ್ದಾರಿ ನಿರ್ವಹಿಸುತ್ತಿವೆ. ಉದಾಹರಣೆಗೆ 'ಗ್ರಾಮಸ್ಟಟೆನ್ ನೀರಿನ ಸಹಕಾರಿಯು' ಸುಮಾರು 2000 ಗ್ರಾಮೀಣ ಕುಟುಂಬಗಳಿಗೆ ಶುದ್ಧ ನೀರನ್ನು ದೇಶದ ಸರಾಸರಿ ದರದ ಅರ್ಧದರದಲ್ಲಿ ಒದಗಿಸುತ್ತಿದೆ. ಹೀಗೆಯೇ ಬೇರೆ ಬೇರೆ ಸೇವೆಗಳಿಗಾಗಿ ಆರಂಭವಾದ ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಕ್ರಮ ತೆಗೆದುಕೊಂಡ ಉದಾಹರಣೆಗಳನ್ನೂ ಕಾಣಬಹುದು. ಘಾನಾ ದೇಶದ ಕೊಕೋ ಬೆಳೆಗಾರರ ಸಹಕಾರಿ ಸಂಘವಾದ 'ಕುವಪ ಕೊಕೋ ಸಹಕಾರಿ ಸಂಘವು' ದೇಶದ ಕುಗ್ರಾಮ ಪ್ರದೇಶಗಲ್ಲಿ ಕೋಕೋ ಬೆಳೆಯುತ್ತಿದ್ದು ಸಾರ್ವಜನಿಕ ಸೇವೆಗಳಿಂದ ವಂಚಿತರಾದ ರೈತರಿಗಾಗಿ ಸುಮಾರು 400 ಕೊಳವೆ ಭಾವಿಗಳನ್ನು ತಗೆದು ಸಮುದಾಯದ ಎಲ್ಲ ಕುಟುಂಬಗಳ ಮನೆಬಾಗಿಲಿನಲ್ಲಿ ಶುದ್ಧ ಕುಡಿಯುವ ನೀರು ದೊರೆಯುವಂತೆ ಮಾಡಿದೆ.

ನೀರಿನ ಸರಬರಾಜು ಮತ್ತು ವ್ಯವಸ್ಥಾಪನೆ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಸಹಕಾರಿ ಸಂಘಟನೆಗಳ ಉದಾಹರಣೆಗಳು ಭಾರತದಲ್ಲೂ ಲಭ್ಯವಿದೆ. ಕರ್ನಾಟಕದಲ್ಲಿ ಸರಕಾರದ ಜಲಸಂಪನ್ಮೂಲ ಸಚಿವಾಲಯದ ಯೋಜನೆಯಡಿಯಲ್ಲಿ ನೂರಾರು ನೀರು ಬಳಕೆದಾರರ ಸಹಕಾರಿ ಸಂಘಗಳನ್ನು ಆರಂಭಿಸಲಾಗಿದ್ದು, ಇವು ನೀರಿನ ಸೂಕ್ತ ಬಳಕೆಯಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಯನ್ನು ಸಾಧ್ಯವಾಗಿಸಿವೆ. ನೀರು ಸರಬರಾಜು ಸಹಕಾರಿ ಸಂಘಗಳಲ್ಲದೆ ಇತರೆ ಸೇವೆಯಲ್ಲಿ ತೊಡಗಿರುವ ಹಲವು ದೊಡ್ಡ ಸಹಕಾರಿ ಸಂಘಗಳು ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಒದಗಿಸುವ ಕೆಲಸಗಳನ್ನು ತಮ್ಮ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಅಡಿಯಲ್ಲಿ ಮಾಡಿವೆ. ಆದರೂ ಸಹಕಾರಿ ಕ್ಷೇತ್ರವು ನೀರು ಮತ್ತು ನೈರ್ಮಲ್ಯದ ಜವಾಬ್ದಾರಿಯನ್ನು ನಿರ್ವಹಿಸುವತ್ತ ದೊಡ್ಡ ಮಟ್ಟದ ಪ್ರಯತ್ನ ಮಾಡಿದಂತೆ ಕಾಣುವುದಿಲ್ಲ. ಅಂತೆಯೇ ಈ ಕ್ಷೇತ್ರದಲ್ಲಿ ಸಕ್ರಿಯವಾಗಲು ಸಾಕಷ್ಟು ಅವಕಾಶಗಳಿವೆ. ನಮ್ಮ ದೇಶದ ಸಹಕಾರಿ ಚಳುವಳಿಯು ಈ ಕೆಳಗಿನ ಕೆಲವು ಸಲಹೆಗಳನ್ನು ಪರಿಗಣಿಸಹುದಾಗಿದೆ.

1. ಸರಕಾರವು ನೇರವಾಗಿ ನಡೆಸುತ್ತಿರುವ ನೀರು ಸರಬರಾಜು, ಒಳಚರಂಡಿ ಮತ್ತು ನೈರ್ಮಲ್ಯ, ವಿದ್ಯುಚ್ಛಕ್ತಿ ವಿತರಣೆ, ನಗರ ಮತ್ತು ಗ್ರಾಮೀಣ ಸಾರಿಗೆ ಮುಂತಾದ ಸೇವೆಗಳನ್ನು ಸಹಕಾರಿ ಮಾದರಿಯಲ್ಲಿ ನಡೆಸುವಂತೆ ಯೋಜನೆ ರೂಪಿಸಬೇಕಿದೆ. ವಿಶೇಷವಾಗಿ ಸರಕಾರವು ಇಂಥಹ ಸೇವೆಗಳನ್ನು ಖಾಸಗೀಕರಣಗೊಳಿಸುವ ಬದಲಿಗೆ ಸಹಕಾರೀಕರಣಗೊಳಿಸುವ ನೀತಿಯನ್ನು ಜಾರಿಗೆ ತರಲು ಪ್ರಯತ್ನಿಸಬೇಕು.
2. ಸಹಕಾರಿ ಮಾಹಾಮಂಡಳಗಳು ಸರಕಾರಕ್ಕೆ ಸೂಕ್ತ ಯೋಜನೆಗಳನ್ನು ಸಲ್ಲಿಸಿ ಸಾರ್ವಜನಿಕ ಸೇವೆಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ನೀಡುವ ನೀತಿ ಮತ್ತು ನಿಯಮಗಳನ್ನು ರಚಿಸಲು ಅನುವಾಗಬೇಕು.
3. ಸಾರ್ವಜನಿಕ ಸೇವೆಗಳನ್ನು ಒದಗಿಸುವ ಹೊಸ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಬಹುದು.
4. ಶುದ್ಧ ಕುಡಿಯುವ ನೀರಿನ ಸಮಸ್ಯೆಯಿರುವ ಪ್ರದೇಶಗಳಲ್ಲಿರುವ ಸಹಕಾರಿ ಸಂಘಗಳು ಸ್ಥಳೀಯ ಸಮುದಾಯಕ್ಕೆ ಉತ್ತಮ ನೀರು ಒದಗಿಸುವ ಮತ್ತು ಶೌಚಾಲಯ ನಿರ್ಮಿಸುವ ಕೆಲಸವನ್ನು ಒಂದು ಪ್ರಮುಖ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆ ಎಂದು ಪರಿಗಣಿಸಿ ಅನುಷ್ಠಾನಗೊಳಿಸಬಹುದು.
5. ಎಲ್ಲ ಸಹಕಾರಿ ಸಂಘಗಳೂ ಮಳೆಕೊಯ್ಲು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ಮತ್ತು ಉಪಯೋಗಿಸಿದ ನೀರನ್ನು ಸಂಸ್ಕರಿಸಿ ಉಪಯೋಗಿಸುವುದನ್ನು ಚಾಲ್ತಿಗೆ ತರಬೇಕು.
6. ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ ಮತ್ತು ಸಮುದಾಯದ ಎಲ್ಲರಿಗೆ ಶುದ್ಧ ನೀರಿನ ಬಳಕೆ ಮತ್ತು ನೀರಿನ ಮಿತವಾದ ಬಳಕೆಯ ಬಗೆಗೆ ಅಗತ್ಯ ಮಾಹಿತಿ ಮತ್ತು ತರಬೇತಿ ನೀಡುವ ಕಾರ್ಯಕ್ರಮಗಳನ್ನು ರೂಪಿಸಬಹುದು
7. ಸ್ಥಳೀಯವಾಗಿ ನೀರು ಮತ್ತು ನೈರ್ಮಲ್ಯದ ವ್ಯವಸ್ಥಾಪನೆಯ ಜವಾಬ್ದಾರಿಗಳನ್ನು ಸಹಕಾರಿ ಸಂಘಗಳು ವಹಿಸಿಕೊಳ್ಳಬಹುದು.
8. ಸಹಕಾರಿ ಸಂಘಗಳು ಗ್ರಾಮ ಮಟ್ಟದಲ್ಲಿ ನೀರು ಬಳಕೆದಾರರ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬಹುದು
9. ನೀರು ಮತ್ತು ನೈರ್ಮಲ್ಯಗಳಿಗೆ ಸಂಬಂಧಿಸಿಂತೆ ಸರಕಾರ ರೂಪಿಸುವ ವಿವಿಧ ಯೋಜನೆಗಳ ಬಗ್ಗೆ ಸಹಕಾರಿ ಸದಸ್ಯರಿಗೆ ತಿಳಿಸಿ ಅಂತಹ ಯೋಜನೆಗಳ ಉಪಯೋಗವನ್ನು ಪಡೆಯಲು ಸಹಕರಿಸಬಹುದು.
10. ಅಂತರ್ಜಲ ಮಟ್ಟವನ್ನು ಕಾಪಾಡಲು ಮತ್ತು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಅನುಸರಿಸುವಂತೆ ಜನರನ್ನು ಪ್ರೇರೇಪಿಸಬಹುದು.

ಹೀಗೆ ಸಹಕಾರಿ ಸಂಘಟನೆಗಳು ತಮ್ಮ ತಮ್ಮ ಪರಿಸರದಲ್ಲಿ ಸೂಕ್ತವಾಗುವಂತೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಸುಸ್ಥಿರ ಅಭಿವೃದ್ಧಿಯ ನೀರು ಮತ್ತು ನೈರ್ಮಲ್ಯದ ಬಗೆಗಿನ ಗುರಿಸಾಧನೆಗೆ ತಮ್ಮ ದೇಣಿಗೆ ನೀಡಬೇಕು.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 - 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ-585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010